22 August 2026 Saturday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಜೀವನದಲ್ಲಿ ಯಾವುದೂ ಶಾಶ್ವತವಲ್ಲ ಎಂದು ತಿಳಿದು ನಡೆದರೆ ಮಾತ್ರ, ಸ್ವಾರ್ಥ, ಕೆಟ್ಟತನದ ಹಾದಿಯಲ್ಲಿ ಹೆಜ್ಜೆ ಹಾಕುವದಿಲ್ಲ!

-ಸ್ನೇಹಾ ಆನಂದ್

info.varthaman@gmail.com



ಮೈಸೂರಿನಲ್ಲಿ ಮೊದಲ ನಾಗರಿಕ ವಿಮಾನಯಾನ ಇಲಾಖೆ ಸಭೆ ಪುಟ ಸಂ. 2



ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ 12 ಅಂಗಡಿ ಮಳಿಗೆಗಳಿಗೆ ಬೀಗ ಪುಟ ಸಂ. 3



ವಿಬಿಜಿ ರಾಮ್ ಜಿ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಿ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 258 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ರಾಜ್ಯದ ಆದಾಯ ದುಪ್ಪಟ್ಟಿಗೆ ಸಲಹೆ ನೀಡಿ: ಮುಖ್ಯಮಂತ್ರಿ

## ಆರ್ಥಿಕ ತಜ್ಞರ ಮೊರೆ ಹೋದ ಸಿಎಂ ಡಿಕೆಶಿ | ರಾಜ್ಯದ ಆರ್ಥಿಕ ಪ್ರಗತಿಗೆ ಮಾರ್ಗದರ್ಶನ, ಸಲಹೆಗಳು ಮುಖ್ಯ

**ಬೆಂಗಳೂರು:** ಸರ್ಕಾರದ ಆದಾಯ ಸಂಗ್ರಹ ಹೆಚ್ಚಿಸುವುದು ಹಾಗೂ ಹಣಕಾಸು ನಿರ್ವಹಣೆಯನ್ನು ಸುಧಾರಿಸಲು ತಜ್ಞರು ಸಲಹೆ ಮತ್ತು ಮಾರ್ಗದರ್ಶನ ನೀಡಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕರೆ ನೀಡಿದರು.

ಅರಮನೆ ಮೈದಾನದಲ್ಲಿ ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ICAI) ಆಯೋಜಿಸಿದ್ದ 'ಸಂವಾದ ಸಮ್ಮೇಳನ'ದಲ್ಲಿ ಮಾತನಾಡಿದ ಅವರು,

### ಕರ್ನಾಟಕದ ಆರ್ಥಿಕ ಪ್ರಗತಿಗೆ ಸಹಕಾರ

ಕರ್ನಾಟಕ ದೇಶದ ಪ್ರಮುಖ ಆರ್ಥಿಕ ಶಕ್ತಿಯಾಗಿ ಬೆಳೆಯುತ್ತಿದ್ದು, ಸಾಫ್ಟ್‌ವೇರ್ ರಫ್ತಿನಲ್ಲಿ ರಾಜ್ಯದ ಕೊಡುಗೆ ಶೇ.42 ರಷ್ಟಿದೆ ಎಂದು ಶಿವಕುಮಾರ್ ಹೇಳಿದರು. ಐಟಿ–ಬಿಟಿ, ಏರೋಸ್ಪೇಸ್, ತಂತ್ರಜ್ಞಾನ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ರಾಜ್ಯ ಮುಂಚೂಣಿಯಲ್ಲಿದ್ದು, ವಿಶ್ವದ ಪ್ರಮುಖ ಕಂಪನಿಗಳು ಪುಟ 2ಕ್ಕೆ




### ಆದಾಯ ಹೆಚ್ಚಳಕ್ಕೆ ಹೊಸ ಮಾರ್ಗ

ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ ಸುಮಾರು 52 ಸಾವಿರ ಕೋಟಿ, ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಸೇರಿದಂತೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಿಗೆ ದೊಡ್ಡ ಪ್ರಮಾಣದಲ್ಲಿ ಹಣ ವ್ಯಯಿಸುತ್ತಿದೆ. ಹೀಗಾಗಿ ವ್ಯಾಪಾರ ಮತ್ತು ಉದ್ಯಮಗಳಿಗೆ ತೊಂದರೆಯಾಗದಂತೆ ಸರ್ಕಾರದ ಆದಾಯ ಹೆಚ್ಚಿಸಲು ಮಾರ್ಗದರ್ಶನ ನೀಡುವಂತೆ ಸಿಎಗಳಿಗೆ ಮನವಿ ಮಾಡಿದರು. ಸಿಎಸ್‌ಆರ್ ನಿಧಿಯನ್ನು ಗ್ರಾಮೀಣ ಪ್ರದೇಶಗಳ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಹೆಚ್ಚು ಬಳಸುವಂತೆ ಉದ್ಯಮಿಗಳಿಗೆ ಮಾರ್ಗದರ್ಶನ ನೀಡಬೇಕು ಎಂದು ಅವರು ಪುಟ 2ಕ್ಕೆ

# ವರಮಹಾಲಕ್ಷ್ಮಿ ಹಬ್ಬ ವಿವಿಧೆಡೆ ಲಕ್ಷ್ಮಿ ಪೂಜೆ

### ಶ್ರೀ ಚಾಮುಂಡೇಶ್ವರಿ ದೇವಿಗೆ ನೋಟಿನ ಅಲಂಕಾರ



**ಶ್ರೀರಂಗಪಟ್ಟಣ:** ಶ್ರಾವಣ ಮಾಸದ ಎರಡನೇ ಶುಕ್ರವಾರ ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಪಟ್ಟಣದ ಶ್ರೀ ಚಾಮುಂಡೇಶ್ವರಿ ದೇವಿಗೆ ಧನಲಕ್ಷ್ಮಿ ಅಲಂಕಾರದಲ್ಲಿ ನೋಟುಗಳಿಂದ ಅಲಂಕರಿಸಲಾಯಿತು.

ಶ್ರೀರಂಗಪಟ್ಟಣ ಚಾಮುಂಡೇಶ್ವರಿ ಬೀದಿಯಲ್ಲಿರುವ, ಶ್ರೀಚಾಮುಂಡೇಶ್ವರಿ ದೇವಾಲಯದಲ್ಲಿ ದೇವಿಗೆ ವಿವಿಧ ನೋಟಗಳ ಸಂಗ್ರಹಿಸಿ ಅಲಂಕರಿಸಲಾಯಿತು. ನೋಟುಗಳಿಂದ ಅಲಂಕೃತಗೊಂಡ ಚಾಮುಂಡೇಶ್ವರಿ ದೇವಿಯನ್ನು ನೋಡಿ ಕಣ್ತುಂಬಿಕೊಂಡರು.

ದೇವಾಲಯದ ಮುಖ್ಯ ಅರ್ಚಕ ಲಕ್ಮೀ ನೇತೃತ್ವದಲ್ಲಿ ಇತರ ಅರ್ಚಕ ವೃಂದ ಸೇರಿ ಗುರುವಾರ ಸಂಜೆಯಿಂದಲೆ ದೇವಾಲಯದ ಗರ್ಭಗುಡಿಯ ದೇವಿ ಸೇರಿದಂತೆ ಗೋಡೆಗಳ ಸುತ್ತಲೂ ಅಲಂಕಾರ ಮಾಡಲಾಗಿತ್ತು. ಗರ್ಭಗುಡಿಯ ಸುತ್ತಲೂ 10,20,50, 100,200 ಹಾಗು 500 ರ ನೋಟುಗಳ ಅಂಟಿಸಿ, ದೇವಿ ಅಲಂಕಾರಕ್ಕೆ ನೋಟುಗಳ ಬಳಕೆ ಮಾಡಲಾಗಿತ್ತು. ಈ ಅಲಂಕಾರ ಮಾಡಿದ್ದರಿಂದ ಧನ ಲಕ್ಷ್ಮಿ ಪುಟ 2ಕ್ಕೆ

# ದಸರೆಯಲ್ಲಿ ಕಂಬಳ ನಿಲ್ಲಿಸಲು ಮಾಜಿ ಸಿಎಂಗೆ ಮನವಿ



**ಮೈಸೂರು:** ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ಕಂಬಳ ಕ್ರೀಡೆಯನ್ನು ಕೈ ಬಿಡುವಂತೆ ಸರ್ಕಾರಕ್ಕೆ ಸಲಹೆ ನೀಡುವಂತೆ ಜಂಟಿ ಕ್ರಿಯಾ ಸಮಿತಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮನವಿ ಮಾಡಿದೆ.

ಬೆಂಗಳೂರಿನ ಗೃಹಕಚೇರಿ ಕಾವೇರಿಯಲ್ಲಿ ಪಾಂಡವಪುರ ಕ್ಷೇತ್ರ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿ, ಪರಿಸರಕ್ಕಾಗಿ ನಾವು' ಸಂಘಟನೆ, ಭೂಮಿ ತಾಯಿ ಹೋರಾಟ ಸಮಿತಿ, ಕನ್ನಡಪರ ಮತ್ತು ಪ್ರಗತಿಪರ ಸಂಘಟನೆಗಳು ಹಾಗೂ ಇನ್ನಿತರ ಸಂಘ ಸಂಸ್ಥೆಗಳ ಮುಖಂಡರನ್ನೊಳಗೊಂಡ ಜಂಟಿ ಕ್ರಿಯಾ ಸಮಿತಿಯ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಮಾಡಿದೆ.

ಕಂಬಳವನ್ನು ಕರಾವಳಿ ಪ್ರದೇಶದಿಂದ ಮೈಸೂರಿನ ದಸರಾ ಸಂದರ್ಭದಲ್ಲಿ ತಂದು ಹೇರುವುದು ಯಾವುದೇ ಕಾರಣಕ್ಕೂ ಸಮರ್ಥನೀಯ ಅಲ್ಲ. ಇದನ್ನು ಮೈಸೂರಿನ ಜನರು ವಿರೋಧಿಸುವಂತೆ ಕರಾವಳಿ ಭಾಗದ ಜನರೂ ವಿರೋಧಿಸುತ್ತಿದ್ದಾರೆ. ಎಲ್ನಿನೊ ಕಾರಣದಿಂದ ಈ ವರ್ಷ ಕರ್ನಾಟಕದ ಬಹುತೇಕ ಜಿಲಗಳಲ್ಲಿ ಮಳೆಯ ತೀವ್ರ ಕೊರತೆ ಉಂಟಾಗಿ ಭೀಕರ ಬರಗಾಲ ಆವರಿಸಿದೆ. ಕೆಲವು ಜಿಲ್ಲೆಗಳಲ್ಲಿ ರೈತರು ಬಿತ್ತನೆಯನ್ನೇ ಸರಿಯಾಗಿ ಮಾಡಲಾಗಲಿಲ್ಲ. ಬಿತ್ತನೆ ಮಾಡಿರುವ ಕಡೆ ಬೆಳೆ ಒಣಗಿ ಹೋಗಿದೆ. ಇದರಿಂದ ರೈತರು ಕಂಗಾಲಾಗಿದ್ದಾರೆ. ಕಾವೇರಿ ಜಲ ವಿವಾದ ದಿನೇದಿನೇ ಉಲ್ಬಣಗೊಳ್ಳುತ್ತಿದೆ. ಮುಂದಿನ ದಿನಗಳಲ್ಲಿ ಸಾಕಷ್ಟು ಮಳೆ ಬರದಿದ್ದರೆ ಬೇಸಿಗೆಯಲ್ಲಿ ಕುಡಿಯುವ ನೀರಿಗೂ ಕಷ್ಟವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ರೈತರ ಸಂಕಷ್ಟಕ್ಕೆ ಸ್ಪಂದಿಸುವ ಕೆಲಸ ಸರ್ಕಾರದ ಆದ್ಯತೆಯಾಗಬೇಕು. ಅನ್ನದಾತ ತೀವ್ರ ಸಂಕಷ್ಟದಲ್ಲಿರುವಾಗ ಅನಗತ್ಯ ಖರ್ಚು ಮಾಡಿ ಕಂಬಳ ಕ್ರೀಡೆ ಆಯೋಜನೆ ಮಾಡುವುದು ಸಂವೇದನಾ ರಹಿತ ನಡೆಯಾಗುತ್ತದೆ.

ಕೇವಲ ಎರಡು ದಿನಗಳ ಕ್ರೀಡೆಗೆ 400 ಕೋಣಗಳನ್ನು, ಪ್ರತಿ ಕೋಣದ ಜವಾಬ್ದಾರಿಗೆ 50 ಜನರಂತೆ 20 ಸಾವಿರ ಜನರನ್ನು ತುಂಬಾ ದೂರದ ಊರುಗಳಿಂದ ಮೈಸೂರಿಗೆ ಕರೆತರುವುದು; ಕೆಸರು ಪುಟ 2ಕ್ಕೆ

## ಸಾಹುಕಾರ್‌ಗೆ ಮತ್ತೆ ಸಂಕಷ್ಟ: ಅಮಾನತಿಗೆ ಶಿಫಾರಸು

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಅವರ ಅಮಾನತು ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದ ಬೆನ್ನಲ್ಲೇ, ರಾಜ್ಯ ಸರ್ಕಾರ ಮತ್ತೆ ಅವರನ್ನು ಅಮಾನತುಗೊಳಿಸುವಂತೆ ರಾಜ್ಯಪಾಲರಿಗೆ ಶಿಫಾರಸು ಮಾಡಲು ನಿರ್ಧರಿಸಿದೆ.



ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ತೀರ್ಮಾನ ಕೈಗೊಳ್ಳಲಾಗಿದೆ. ಪಶುವೈದ್ಯಾಧಿಕಾರಿಗಳ ನೇಮಕಾತಿಯಲ್ಲಿ ಅಕ್ರಮ ಆರೋಪದ ಹಿನ್ನೆಲೆಯಲ್ಲಿ ಜುಲೈ 10ರಂದು ಸಾಹುಕಾರ್ ಅವರನ್ನು ಹುದ್ದೆಯಿಂದ ಅಮಾನತುಗೊಳಿಸಲಾಗಿತ್ತು. ಪುಟ 2ಕ್ಕೆ

# ನಾಗೇಂದ್ರ ಅಪರಾಧಿ ಎಂದು ಹೇಳಿ ಪೇಚಿಗೆ ಸಿಲುಕಿದ ಸಚಿವ ಶಿವಲಿಂಗೇಗೌಡ

**ಬೆಂಗಳೂರು:** ವಾಲ್ಮೀಕಿ ಹಗರಣದಲ್ಲಿ ಆರೋಪಿಯಾಗಿರುವ ಸಚಿವ ನಾಗೇಂದ್ರ ಅವರನ್ನು ಸಂಪುಟದಿಂದ ವಜಾಗೊಳಿಸಬೇಕೆಂದು

ಸದನದಲ್ಲಿ ಬಿಜೆಪಿ ಸದಸ್ಯರು ಪ್ರತಿಭಟನೆ ನಡೆಸುತ್ತಿದ್ದು, ಕಲಾಪಕ್ಕೆ ಅಡ್ಡಿಪಡಿಸುತ್ತಿರುವ ಬಿಜೆಪಿ ವಿರುದ್ಧ ವಿಧಾನಸೌಧದ ಗಾಂಧಿ ಪ್ರತಿಮೆ ಎದುರು ಕಾಂಗ್ರೆಸ್ ಪ್ರತಿಭಟನೆ ವೇಳೆ, ಅಬಕಾರಿ ಸಚಿವ ಶಿವಲಿಂಗೇಗೌಡ ತಮ್ಮ ಹೇಳಿಕೆಯಿಂದ ಪೇಚಿಗೆ ಸಿಲುಕಿದ ಘಟನೆ ನಡೆಯಿತು.

ಪ್ರತಿಭಟನೆ ವೇಳೆ ಘೋಷಣೆ ಕೂಗುತ್ತಿದ್ದ ಅಬಕಾರಿ ಸಚಿವರನ್ನು ಮಾಧ್ಯಮದ ಪ್ರತಿನಿಧಿಯೊಬ್ಬರು ಮಾತನಾಡಿಸಿದ ವೇಳೆ ಸಿದ್ದರಾಮಯ್ಯ ಅವಧಿಯಲ್ಲಿ ಸಚಿವ ನಾಗೇಂದ್ರ ಅವರ ರಾಜೀನಾಮೆಯನ್ನು ಏಕೆ ಪಡೆದುಕೊಳ್ಳಲಾಯಿತು ಎಂದು ಪ್ರಶ್ನಿಸಿದ್ದಾರೆ.

ಈ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಸಚಿವ ಶಿವಲಿಂಗೇಗೌಡ, ಸಚಿವ ನಾಗೇಂದ್ರ ಅವರ ವಿರುದ್ಧ ಆಪಾದನೆ ಬಂದಾಗ ಸದನದಲ್ಲಿ ಚರ್ಚೆಯಾಗಿತ್ತು.



ಸತ್ಯಾಸತ್ಯತೆಗಳು ತಿಳಿದಿರಲಿಲ್ಲ ಎಂದು ಹೇಳಿದರು.

ಮರು ಪ್ರಶ್ನೆ ಮಾಡಿದ ವರದಿಗಾರ, ಸತ್ಯಾಸತ್ಯತೆ ತಿಳಿಯದೇ ರಾಜೀನಾಮೆ ಕೊಡಿಸಿ ನಾಗೇಂದ್ರ ಅವರನ್ನು ಬಲಿಪಶು ಮಾಡಲಾಯ್ತಾ? ಎಂದು ಕೇಳಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಶಿವಲಿಂಗೇಗೌಡ, ನಾಗೇಂದ್ರ ಮೇಲ್ನೋಟಕ್ಕೆ ಅಪರಾಧಿ ಎಂಬ ಶಂಕೆ ಇದ್ದಿದ್ದರಿಂದ ರಾಜೀನಾಮೆ ಪಡೆದುಕೊಳ್ಳಲಾಯಿತು ಎಂದು ಹೇಳಿ ಪೇಚಿಗೆ ಸಿಲುಕಿದರು.

ಆರೋಪಿ ಎಂಬ ಶಂಕೆ ಇದ್ದ ಹಿನ್ನೆಲೆಯಲ್ಲಿ ರಾಜೀನಾಮೆ ಪಡೆಯಲಾಯಿತು ಎಂದು ಹೇಳುವ ಭರದಲ್ಲಿ ನಾಗೇಂದ್ರ ಅಪರಾಧಿ ಎಂದು ಪುಟ 2ಕ್ಕೆ

# ರಾಹುಲ್ ಗಾಂಧಿ ಪ್ರತಿಭಟನೆ: ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ನಡೆಸಿದ ಪೋಲಿಸರ ವಿರುದ್ಧವೂ ಎಫ್‌ಐಆರ್

**ನವದೆಹಲಿ:** ನೀಟ್ ಅಕ್ರಮಗಳ ವಿರುದ್ಧದ ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳ ಮೇಲೆ ಪೊಲೀಸರು ಬಲಪ್ರಯೋಗ ಮಾಡಿದ್ದಾರೆಂಬ ಆರೋಪ ಇದೀಗ ರಾಜಕೀಯ ಸಂಘರ್ಷಕ್ಕೆ ತಿರುಗಿದೆ.

ಘಟನೆಗೆ ತೀವ್ರ ಖಂಡನೆ ವ್ಯಕ್ತಪಡಿಸಿರುವ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ದೆಹಲಿಯ ಪಾರ್ಲಿಮೆಂಟ್ ಸ್ಟ್ರೀಟ್ ಪೊಲೀಸ್ ಠಾಣೆಗೆ ತೆರಳಿ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಭೇಟಿಯಾದರು.

ಈ ವೇಳೆ ಪ್ರತಿಭಟನಾ ಮೆರವಣಿಗೆಯಲ್ಲಿ ಗಾಯಗೊಂಡಿದ್ದ ವಿದ್ಯಾರ್ಥಿ ಸಾಹಿಲ್ ಲೋಚಬ್ ಕೂಡ ರಾಹುಲ್ ಗಾಂಧಿ ಅವರೊಂದಿಗೆ ತೆರಳಿದ್ದರು.

ಜುಲೈ 20ರಂದು ನೀಟ್ ಅಕ್ರಮಗಳ ವಿರುದ್ಧ ನಡೆದ ಪ್ರತಿಭಟನೆ ವೇಳೆ ವಿದ್ಯಾರ್ಥಿಗಳ ಮೇಲೆ ಪೊಲೀಸರು ಅತಿಯಾದ ಬಲಪ್ರಯೋಗ ಮಾಡಿದ್ದಾರೆಂಬ ಆರೋಪಕ್ಕೆ ಸಂಬಂಧಿಸಿದಂತೆ ದೂರು ದಾಖಲಿಸಿ, ಎಫ್‌ಐಆರ್ ದಾಖಲಿಸುವಂತೆ ಮನವಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇದಕ್ಕೂ ಮೊದಲು ರಾಹುಲ್ ಗಾಂಧಿ ಮಂದಿರ್ ಮಾರ್ಗ್ ಪೊಲೀಸ್ ಠಾಣೆಗೆ ತೆರಳಿ, ಪ್ರತಿಭಟನಾಕಾರರ



ವಿರುದ್ಧ ನಡೆದ ಪೊಲೀಸ್ ಕ್ರಮ ಹಾಗೂ ಪೆಲೆಟ್ ಗನ್ ಬಳಕೆಯ ಆರೋಪಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸುವಂತೆ ಮನವಿ ಮಾಡಿದ್ದರು.

ಆದರೆ, ಪೊಲೀಸರು ದೂರು ದಾಖಲಿಸಲು ನಿರಾಕರಿಸಿದ್ದಾರೆ ಎನ್ನಲಾಗಿದ್ದು, ಬಳಿಕ ರಾಹುಲ್ ಗಾಂಧಿ ಕೇಂದ್ರ ವಿಭಾಗದ ಡಿಸಿಪಿಯನ್ನು ಭೇಟಿಯಾದರು. ನಂತರ ಪಾರ್ಲಿಮೆಂಟ್ ಸ್ಟ್ರೀಟ್ ಪೊಲೀಸ್ ಠಾಣೆಗೆ ತೆರಳಿ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದರು.

ತಮ್ಮ ದೂರು ಅಧಿಕೃತವಾಗಿ ಸ್ವೀಕರಿಸಿ ಪುಟ 2ಕ್ಕೆ

## ಸೆ.7ರೊಳಗೆ ಕರಾವಳಿ–ಮಲೆನಾಡು ಪ್ರವಾಸೋದ್ಯಮ ನೀತಿ ಕರಡು: ಕೆ.ಜೆ. ಜಾರ್ಜ್

**ಬೆಂಗಳೂರು:** ಕರ್ನಾಟಕದ ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳ ಪ್ರವಾಸೋದ್ಯಮ ಸಾಮರ್ಥ್ಯವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ರೂಪಿಸಲಾಗುತ್ತಿರುವ ಕರಾವಳಿ–ಮಲೆನಾಡು ಪ್ರವಾಸೋದ್ಯಮ ನೀತಿಯ ಕರಡು ಸೆಪ್ಟೆಂಬರ್ 7ರೊಳಗೆ ಸಿದ್ಧವಾಗಲಿದೆ ಎಂದು ಇಂಧನ ಹಾಗೂ ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಕರಾವಳಿ ಮತ್ತು ಮಲೆನಾಡು ಭಾಗದ ಜನಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ, ಹೂಡಿಕೆ ಅವಕಾಶಗಳು ಹಾಗೂ ಯೋಜನೆಗಳ ಅನುಷ್ಠಾನಕ್ಕೆ ಎದುರಾಗುತ್ತಿರುವ ನಿಯಂತ್ರಣಾತ್ಮಕ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು. ಕರಾವಳಿ ಮತ್ತು ಮಲೆನಾಡು ಪ್ರದೇಶಗಳ ಕಡಲ ತೀರ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಪ್ರಕೃತಿ ಪ್ರವಾಸೋದ್ಯಮದ ಪುಟ 2ಕ್ಕೆ

## ಪದ್ಮಶ್ರೀ, ಬಹುಭಾಷಾ ನಟಿ ಸಾಹುಕಾರ್ ಜಾನಕಿ ಇನ್ನಿಲ್ಲ

**ಚೆನ್ನೈ:** ಭಾರತೀಯ ಚಿತ್ರರಂಗದ ಖ್ಯಾತ ನಟಿ ಮತ್ತು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸಾಹುಕಾರ್ ಜಾನಕಿ ನಿಧನರಾಗಿದ್ದಾರೆ.

ಜಾನಕಿ ಆರೋಗ್ಯ ಹದಗೆಟ್ಟ ಕಾರಣ ಚೆನ್ನೈನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.ಚಿಕಿತ್ಸೆ ಫಲಕಾರಿಯಾಗದೇ ನಟಿ ಕೊನೆಯುಸಿರೆಳೆದರು



1931ರ ಡಿಸೆಂಬರ್ 12ರಂದು ಜನಿಸಿದ ಸಾಹುಕಾರ್ ಜಾನಕಿ ಅವರನ್ನು ದಕ್ಷಿಣ ಭಾರತೀಯ ಚಿತ್ರರಂಗದ ಅತ್ಯಂತ ಗೌರವಾನ್ವಿತ ವ್ಯಕ್ತಿಗಳಲ್ಲಿ ಒಬ್ಬರು.

ಹಲವು ದಶಕಗಳ ವೃತ್ತಿಜೀವನದುದ್ದಕ್ಕೂ, ಅವರು ನಟನಾ ಕಲೆಯನ್ನು ಪ್ರದರ್ಶಿಸಿದರು. ಅವರು ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂ ಸಿನಿಮಾಗಳಲ್ಲಿ ಕೆಲಸ ಮಾಡುತ್ತಿರುವ 450ಕ್ಕೂ ಹೆಚ್ಚು ಪುಟ 2ಕ್ಕೆ

## ಸಂಭ್ರಮದ ವರಮಹಾಲಕ್ಷ್ಮಿ ಹಬ್ಬ

**ಮೈಸೂರು:** ನಗರದಾದ್ಯಂತ ವರಮಹಾಲಕ್ಷ್ಮಿ ಹಬ್ಬವನ್ನು ಶ್ರದ್ಧಾ ಭಕ್ತಿ ಹಾಗೂ ಸಡಗರದಿಂದ ಆಚರಿಸಲಾಯಿತು. ಮಹಿಳೆಯರು ಮುಂಜಾನೆಯಿಂದಲೇ ಮನೆಗಳನ್ನು ಸಿಂಗರಿಸಿ, ಅಷ್ಟಲಕ್ಷ್ಮೀಯರ ಪೂಜೆ ನಡೆಸಿ, ದೇವಸ್ಥಾನಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಚಾಮುಂಡಿಬೆಟ್ಟ ಸೇರಿ ನಗರದ ವಿವಿಧ ದೇವಸ್ಥಾನಗಳಲ್ಲಿ ದೇವಿಗೆ ವಿಶೇಷ ಅಲಂಕಾರ ಹಾಗೂ ಪೂಜಾ ಕಾರ್ಯಕ್ರಮಗಳು ನಡೆದವು. ಮೈಸೂರಿನಲ್ಲಿರುವ ಕನಕದಾಸ ನಗರದಲ್ಲಿರುವ ಏಕೈಕ ಲಕ್ಷ್ಮೀ ದೇವಸ್ಥಾನದಲ್ಲಿ ಪ್ರಾತಃ ಕಾಲದಲ್ಲ ಧಾರ್ಮಿಕ ಪೂಜಾ ಕೈಂಕರ್ಯ ಜರುಗಿತು. ನಾನಾ ಅಭಿಷೇಕದ ನಂತರ ವಿವಿಧ




ಪುಷ್ಪಗಳಿಂದ ದೇವಯನ್ನು ಅಲಂಕರಿಸಲಾಯಿತು. ನಂತರ ಮಹಾಮಂಗಳಾರತಿ ಮಾಡಲಾಯಿತು. ನಂತರ ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ತೀರ್ಥ ಪ್ರಸಾದ ವಿನಿಯೋಗ ಮಾಡಲಾಯಿತು. ಪುಟ 2ಕ್ಕೆ

### ಮಗನನ್ನು ರಕ್ಷಿಸಲು ಬೆಟ್ಟದಿಂದ ಕೆಳಗೆ ಬಿದ್ದ ತಂದೆ

## ಇಬ್ಬರ ಜೊತೆಯಲ್ಲೇ ತಾಯಿಯೂ ಆತ್ಮಹತ್ಯೆ

**ಮುಂಬೈ:** ಮಹಾರಾಷ್ಟ್ರದ ಛತ್ರಪತಿ ಸಂಭಾಜಿನಗರದಲ್ಲಿ 18 ವರ್ಷದ ಯುವಕಯೊಬ್ಬ ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶದಿಂದ ಬಂಡೆಯಿಂದ ಹಾರಿದ್ದಾನೆ.



ಈ ವೇಳೆ ಮಗನನ್ನು ರಕ್ಷಿಸಲು ಹೋದ ಆತನ ತಂದೆಯೂ ಬೆಟ್ಟದಿಂದ ಬಿದ್ದು ಸಾವನ್ನಪ್ಪಿದ್ದಾನೆ. ತನ್ನ ಮಗ ಮತ್ತು ಗಂಡ ಸಾವನ್ನಪ್ಪಿದ್ದನ್ನು ನೋಡಿ ಪತ್ನಿಯೂ ಹಾರಿ ಮೃತಪಟ್ಟಿದ್ದಾಳೆ.

ಮೂರು ಗಂಟೆಗಳ ಕಾಲ ನಡೆದ ಈ ಸಂಕಷ್ಟದ ಸಮಯದಲ್ಲಿ, ಪೋಷಕರು ಮತ್ತು ಇತರರು ಯುವಕನನ್ನು ಬೆಟ್ಟದಿಂದ ದೂರ ಹೋಗುವಂತೆ ಮನವೊಲಿಸಲು ಪ್ರಯತ್ನ ವಿಫಲವಾಗಿ ಈ ದುರಂತ ಸಂಭವಿಸಿದೆ

# ಪಾದಚಾರಿ ಮಾರ್ಗದಲ್ಲಿ ಶೇ.30ರಷ್ಟು ಅವಕಾಶಕ್ಕೆ ಆಗ್ರಹ

**ಮೈಸೂರು:** ಬೀದಿಬದಿ ವ್ಯಾಪಾರಿಗಳ ತೆರವು ಕಾರ್ಯಾಚರಣೆಯಲ್ಲಿ ಸಣ್ಣಪುಟ್ಟ ವ್ಯಾಪಾರಿಗಳಿಗೆ ಪಾದಚಾರಿ ಮಾರ್ಗದಲ್ಲಿ ಶೇ.30ರಷ್ಟು ಭಾಗದಲ್ಲಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆಗ್ರಹಿಸಿದರು.

ನಗರದ ವಿನೋಬಾ ರಸ್ತೆಯಲ್ಲಿರುವ ಪ್ರಾದೇಶಿಕ ಒಕ್ತರ ಕಚೇರಿಗೆ ಬೀದಿ ವ್ಯಾಪಾರಿಗಳೊಂದಿಗೆ ತೆರಳಿ ನಗರಪಾಲಿಕೆ ಆಡಳಿತಾಧಿಕಾರಿಯೂ ಆಗಿರುವ ನಿತೀಶ್ ಪಾಟೀಲ್ ಅವರನ್ನು ಶುಕ್ರವಾರ ಭೇಟಿ ಮಾಡಿ ಸಭೆ ನಡೆಸಿ ರಸ್ತೆ ಬದಿ ವ್ಯಾಪಾರಿಗಳ ಸಮಸ್ಯೆ ಕುರಿತು ಚರ್ಚಿಸಿ ಮನವಿ ಸಲ್ಲಿಸಿದರು. ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಲು ಸರ್ಕಾರದಿಂದ ನಿರ್ದಿಷ್ಟ ಆದೇಶ ಅಥವಾ ಮಾರ್ಗಸೂಚಿ ಇದೆಯೇ? ಇಲ್ಲಿನ ಶಾಸಕರು, ಸಂಸದರು ವ್ಯಾಪಾರಿಗಳ ತೆರವಿಗೆ ನಿರ್ದೇಶನ ನೀಡಿದ್ದಾರೆಯೇ?, ಸರ್ವೋಚ್ಚ ನ್ಯಾಯಾಲಯದ ಆದೇಶದ ಆಧಾರದ ಮೇಲೆ ಮಾತ್ರ ಕಾರ್ಯಾಚರಣೆ ನಡೆಸುತ್ತದ್ದೀರಾ? ಬೃಹತ್ ವಾಣಿಜ್ಯ ಕಟ್ಟಡಗಳನ್ನು ಬಿಟ್ಟು ಬೀದಿ ಬದಿ ವ್ಯಾಪಾರಿಗಳ ಮೇಲೆ ಯಾಕೇ ಬ್ರಾಹ್ಮಸ್ತ್ರ ಉಪಯೋಗಿಸುತ್ತಿದ್ದೀರಾ. ದಸರಾಕ್ಕೆ ಇನ್ನೂ ಸಮುಂವಿದೆ. ಅಂವರೆಗೆ ಸಣ್ಣ ವ್ಯಾಪಾರಿಗಳಿಗೆ ಸೀಮಿತ ಜಾಗದಲ್ಲಿ



ವ್ಯಾಪಾರಕ್ಕೆ ಅವಕಾಶ ನೀಡಿ, ಮುಖ್ಯವಾಗಿ ಸಯ್ಯಾಜಿರಾವ್ ರಸ್ತೆ ಮತ್ತು ಇತರೆ ರಸ್ತೆಗಳಲ್ಲಿ ಅವಕಾಶ ಒದಗಿಸಬೇಕು ಎಂಬಿತ್ಯಾದಿ ಪ್ರಶ್ನೆಗಳನ್ನು ಎಂ.ಲಕ್ಷ್ಮಣ್ ಕೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನಿತೀಶ್ ಪಾಟೀಲ್, ಸರ್ಕಾರದಿಂದ ಪ್ರತ್ಯೇಕವಾಗಿ ಒವುದೇ ಹೊಸ ಆದೇಶ ಬಂದಿಲ್ಲ. ನಗರಪಾಲಿಂಲ್ಲಿ ಈಗಾಗಲೇ ನಿಗದಿಪಡಿಸಿರುವ ಮಾರ್ಗಸೂಚಿ ಹಾಗೂ ಕಾನೂನು ಒಮಗಳ ಅನ್ವುಂವೇ ತೆರವು ಕಾಂಚರಣೆ ನಡೆಸಲಾಗುತ್ತಿದೆ. ಕಳೆದ ಕೆಲವು ತಿಂಗಳ ಹಿಂದೆ ಮಗುವೊಂದು ಬೀದಿ ಬದಿ ಫಾಸ್ಟ್‌ಫುಡ್‌ನ ಎಣ್ಣೆ ಬಾಡಲಿಗೆ ಬಿದ್ದು ಸಾವನ್ನಪ್ಪಿದ ಘಟನೆಯ ಹಿನ್ನೆಲೆಗೆ ತೆರವಿಗೆ ಮುಂದಾಗಿದ್ದೇವು. ಅಷ್ಟರಲ್ಲಿ ಸರ್ವೋಚ್ಚ ನ್ಯಾಯಾಲಯದ ಆದೇಶವೂ ಪೂರಕವಾಗಿ ಪುಟ 2ಕ್ಕೆ

# ಬಿ–ಖಾತಾ ಆಸ್ತಿಗಳಿಗೆ ಎ–ಖಾತಾ ಲಕ್ಷಾಂತರ ಮಾಲೀಕರಿಗೆ ಪರಿಹಾರ

**ಬೆಂಗಳೂರು:** ಅನಧಿಕೃತ ಬಡಾವಣೆಗಳಲ್ಲಿ ನಿವೇಶನ ಹಾಗೂ ಮನೆ ಹೊಂದಿರುವ ಲಕ್ಷಾಂತರ ಆಸ್ತಿ ಮಾಲೀಕರಿಗೆ ಅನುಕೂಲವಾಗುವ ಮಹತ್ವದ ತಿದ್ದುಪಡಿಗೆ ವಿಧಾನಸಭೆ ಅನುಮೋದನೆ ನೀಡಿದೆ. ಬಿ–ಖಾತಾ ಹೊಂದಿರುವ ಅರ್ಹ ಆಸ್ತಿಗಳಿಗೆ ನಿಯಮಾನುಸಾರ ಎ–ಖಾತಾ ನೀಡಲು ಅವಕಾಶ ಕಲ್ಪಿಸುವ ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕ–2026 ಅಂಗೀಕಾರಗೊಂಡಿದೆ.

ವಿಧಾನಸಭೆಯಲ್ಲಿ ವಿಧೇಯಕ ಮಂಡಿಸಿದ ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ, ದಶಕಗಳಿಂದ ಬಿ–ಖಾತಾದಿಂದಾಗಿ ಸಮಸ್ಯೆ ಎದುರಿಸುತ್ತಿರುವ ಆಸ್ತಿ ಮಾಲೀಕರಿಗೆ ಸಂಪೂರ್ಣ ಮಾಲೀಕತ್ವದ ಭದ್ರತೆ ಒದಗಿಸುವುದು ಸರ್ಕಾರದ ಉದ್ದೇಶ ಎಂದರು.

### ರಸ್ತೆಗಳಿಗೆ ಮಾನ್ಯತೆ

ಅನಧಿಕೃತ ಬಡಾವಣೆಗಳಲ್ಲಿ ನಿರ್ಮಾಣವಾಗಿರುವ, ಆದರೆ ಮೂಲ ಭೂಮಾಲೀಕರ ಹೆಸರಿನಲ್ಲಿರುವ ರಸ್ತೆಗಳನ್ನು ಸ್ಥಳೀಯ ಸಂಸ್ಥೆಗಳ ದಾಖಲೆಗಳಲ್ಲಿ ಸಾರ್ವಜನಿಕ ರಸ್ತೆ ಎಂದು ಘೋಷಿಸಲು ಅವಕಾಶ ಸಿಗಲಿದೆ. ರಸ್ತೆಗಳನ್ನು ಅಧಿಕೃತಗೊಳಿಸಿದ ಬಳಿಕ ನಿಯಮಾನುಸಾರ ಅರ್ಹ ನಿವೇಶನ ಹಾಗೂ ಮನೆಗಳಿಗೆ ಎ–ಖಾತಾ ನೀಡಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ಬ್ಯಾಂಕ್ ಸಾಲ, ಕಟ್ಟಡ ನಕ್ಷೆ ಮಂಜೂರಾತಿ ಹಾಗೂ ವಾಸ ಯೋಗ್ಯ ಪ್ರಮಾಣಪತ್ರ ಪಡೆಯುವಲ್ಲಿನ ಹಲವು ಅಡೆತಡೆಗಳು ನಿವಾರಣೆಯಾಗಲಿವೆ.ಹಳೆಯ ಅನಧಿಕೃತ ಬಡಾವಣೆಗಳ ಸಮಸ್ಯೆಗೆ ಪರಿಹಾರ ಕಲ್ಪಿಸುವ ಜೊತೆಗೆ, ಮುಂದೆ ಹೊಸ ಅನಧಿಕೃತ ಬಡಾವಣೆಗಳು ನಿರ್ಮಾಣವಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಬೈರೇಗೌಡ ತಿಳಿಸಿದರು. ಬೆಂಗಳೂರು ನಗರದಲ್ಲಿ ಪುಟ 2ಕ್ಕೆ

## ಮೊದಲ ಪುಟದಿಂದ

### ಆದಾಯ ದುಪ್ಪಟ್ಟಿಗೆ ಸಲಹೆ ನೀಡಿ:

ಸರ್ಕಾರ ತೆರೆದ ಪುಸ್ತಕದಂತಿದ್ದು, ಸಂಪನ್ಮೂಲ ಸೋರಿಕೆ ತಡೆಗಟ್ಟಲು ಹಾಗೂ ತಪ್ಪುಗಳನ್ನು ಸರಿಪಡಿಸಲು ತಜ್ಞರ ಸಲಹೆಗಳಿಗೆ ಮುಕ್ತವಾಗಿದೆ ಎಂದರು. ಪ್ರಾಮಾಣಿಕ ತೆರಿಗೆದಾರರಿಗೆ ಕಿರುಕುಳ ನೀಡದೆ, ತೆರಿಗೆ ಸಂಗ್ರಹ ವ್ಯವಸ್ಥೆಯನ್ನು ಮತ್ತಷ್ಟು ಪರಿಣಾಮ ಕಾರಿಯಾಗಿಸಬೇಕು ಎಂದು ಹೇಳಿದರು.

### ಆರ್ಥಿಕ ಪ್ರಗತಿಗೆ ಸಹಕಾರ

ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದರು. ದಕ್ಷಿಣ ಭಾರತ ದೇಶದ ಆರ್ಥಿಕ ಪ್ರಗತಿಯ ಪ್ರಮುಖ ಚಾಲಕಶಕ್ತಿಯಾಗಿದ್ದು, ರಾಜ್ಯಕ್ಕೆ ನ್ಯಾಯಯುತ ಪಾಲು ಸಿಗಬೇಕೆಂಬ ವಿಚಾರವನ್ನು ದಕ್ಷಿಣ ವಲಯ ಮಂಡಳಿ ಸಭೆಯಲ್ಲೂ ಪ್ರಸ್ತಾಪಿಸಿರುವುದಾಗಿ ತಿಳಿಸಿದರು. ಕರ್ನಾಟಕ ದೇಶದಲ್ಲಿ ಅತಿ ಹೆಚ್ಚು ತೆರಿಗೆ ಪಾವತಿಸುವ ರಾಜ್ಯಗಳಲ್ಲಿ ಒಂದಾಗಿದೆ ಎಂದರು.

### ನಟಿ ಸಾಹುಕಾರ್ ಜಾನಕಿ ಇನ್ನಿಲ್ಲ

ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಅವರು 300ಕ್ಕೂ ಹೆಚ್ಚು ರಂಗ ನಾಟಕಗಳಲ್ಲಿ ಭಾಗವಹಿಸಿದರು. ಇದು ಅವರ ಕಲೆಗೆ ಅವರ ಸಮರ್ಪಣೆಗೆ ಸಾಕ್ಷಿಯಾಗಿದೆ.

### ಪೇಚಿಗೆ ಸಿಲುಕಿದ ಸಚಿವ

ಸಚಿವರು ಹೇಳಿದ್ದು ಈಗ ಎಲ್ಲೆಡೆ ವೈರಲ್ ಆಗತೊಡಗಿದೆ. ಸಚಿವರ ಪಕ್ಕದಲ್ಲಿದ್ದ ಶಾಸಕರು ಸಚಿವರಿಗೆ ತಪ್ಪು ಸರಿಪಡಿಸಿಕೊಳ್ಳುವಂತೆ ಸೂಚಿಸಿದ ಬಳಿಕ ಸಚಿವರು, ನಾಗೇಂದ್ರ ಆರೋಪಿ ಇರಬಹುದೆಂಬ ಶಂಕೆಯಿಂದ ರಾಜೀನಾಮೆ ಪಡೆಯಲಾಗಿತ್ತು ಎಂದು ಹೇಳಿಕೆಯನ್ನು ಸರಿಪಡಿಸಿಕೊಂಡರು.

### ಪ್ರವಾಸೋದ್ಯಮ ನೀತಿ ಕರಡು

ಸಾಮರ್ಥ್ಯವನ್ನು ಬಳಸಿಕೊಂಡು ಸ್ಥಳೀಯ ಆರ್ಥಿಕತೆ ಮತ್ತು ಉದ್ಯೋಗಾವಕಾಶ ಹೆಚ್ಚಿಸುವ ಬಗ್ಗೆ ಸಭೆಯಲ್ಲಿ ಸಲಹೆಗಳು ಬಂದವು.

ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆ ಮಾಡಲು ವಿವಿಧ ಇಲಾಖೆಗಳ ಅನುಮತಿ ಪಡೆಯುವ ಪ್ರಕ್ರಿಯೆಯನ್ನು ಸರಳಗೊಳಿಸುವಂತೆ ಜನಪ್ರತಿನಿಧಿಗಳು ಸಲಹೆ ನೀಡಿದರು. ಶಾಸಕ ವಿ. ಸುನಿಲ್ ಕುಮಾರ್ ಅವರು ಹೂಡಿಕೆದಾರರಿಗೆ ಅನುಕೂಲವಾಗುವಂತೆ ಸಿಂಗಲ್ ವಿಂಡೋ ವ್ಯವಸ್ಥೆ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು. ಮಂಗಳೂರು ಉಸ್ತುವಾರಿ ಸಚಿವ ಯು.ಟಿ. ಖಾದರ್, ಕರಾವಳಿ ಭಾಗದಲ್ಲಿ ಪ್ರವಾಸೋದ್ಯಮ ಯೋಜನೆಗಳಿಗೆ ಅಖಚ, ಪರಿಸರ ಸೂಕ್ಷ್ಮ ವಲಯ ಹಾಗೂ ಅರಣ್ಯ ನಿಯಮಗಳಿಂದ ಎದುರಾಗುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ಅಗತ್ಯವಿದೆ ಎಂದರು. ಪರಿಸರ ಸಂರಕ್ಷಣೆಯೊಂದಿಗೆ ಪ್ರವಾಸೋದ್ಯಮ ಅಭಿವೃದ್ಧಿಗೆ ಅನುಕೂಲವಾಗುವಂತೆ ಅನುಮತಿ ಪ್ರಕ್ರಿಯೆಗಳನ್ನು ಸರಳಗೊಳಿಸಬೇಕು ಎಂದು ಸಲಹೆ ನೀಡಿದರು.

ಉಡುಪಿ ಜಿಲ್ಲಾ ಉಸ್ತುವಾರಿ ಸಚಿವ ರಿಜ್ವಾನ್ ಅರ್ಷದ್ ಅವರು ಹೋಟೆಲ್‌ಗಳು ಹಾಗೂ ಪ್ರವಾಸೋದ್ಯಮ ಚಟುವಟಿಕೆಗಳ ವಿಸ್ತರಣೆಗೆ ಅನುಕೂಲಕರ ವಾತಾವರಣ ನಿರ್ಮಿಸುವಂತೆ ಮನವಿ ಮಾಡಿದರು. ಸಭೆಯಲ್ಲಿ ಬಂದ ಸಲಹೆಗಳನ್ನು ಪರಿಗಣಿಸಿ ಸೆಪ್ಟೆಂಬರ್ 7ರೊಳಗೆ ಕರಡು ನೀತಿ ಸಿದ್ಧಪಡಿಸಲಾಗುವುದು ಎಂದು ಕೆ.ಜೆ. ಜಾರ್ಜ್ ಹೇಳಿದರು. ಬಳಿಕ ಮತ್ತಷ್ಟು ಸಮಾಲೋಚನೆ ನಡೆಸಿ ಅಂತಿಮ ರೂಪ ನೀಡಲಾಗುವುದು. ಮಂಗಳೂರಿನಲ್ಲಿ ಶೀಘ್ರದಲ್ಲೇ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ನೀತಿಗೆ ಸಂಬಂಧಿಸಿದ ಮುಂದಿನ ಕ್ರಮಗಳ ಕುರಿತು ಚರ್ಚಿಸಲಾಗುವುದು ಎಂದು ತಿಳಿಸಿದರು.

### ಆದಾಯ ಹೆಚ್ಚಳಕ್ಕೆ ಹೊಸ ಮಾರ್ಗ

ಹೇಳಿದರು. ಉದ್ಯೋಗ ಮತ್ತು ಶಿಕ್ಷಣಕ್ಕಾಗಿ ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ನಡೆಯುವ ವಲಸೆಯನ್ನು ಕಡಿಮೆ ಮಾಡುವ ಅಗತ್ಯವಿದೆ ಎಂದರು. ತಮ್ಮ ಸರ್ಕಾರದ ಜನಪರ ನೀತಿಗಳನ್ನು ವಿರೋಧ ಪಕ್ಷಗಳಿಗೆ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಶಿವಕುಮಾರ್ ಆರೋಪಿಸಿದರು. ಬೆಂಗಳೂರಿನ ಸಂಚಾರ ದಟ್ಟಣೆ ನಿವಾರಣೆಗೆ ಸರ್ಕಾರ ಕೈಗೊಳ್ಳುತ್ತಿರುವ ಸುರಂಗ ರಸ್ತೆ ಯೋಜನೆಗೂ ವಿರೋಧ ವ್ಯಕ್ತವಾಗುತ್ತಿದೆ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು. ಐಸಿಎಐಗೆ ಜಾಗದ ಅಗತ್ಯತೆ ಕುರಿತು ಪ್ರಸ್ತಾಪವಾಗಿದ್ದು, ಅಧಿವೇಶನದ ಬಳಿಕ ತಮ್ಮನ್ನು ಭೇಟಿಯಾಗಿ ಮನವಿ ಸಲ್ಲಿಸುವಂತೆ ಸಂಸ್ಥೆಯ ಪ್ರತಿನಿಧಿಗಳಿಗೆ ತಿಳಿಸಿದರು. ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಸರ್ಕಾರದೊಂದಿಗೆ ತಜ್ಞರು ಕೈಜೋಡಿಸಬೇಕು ಎಂದು ಕರೆ ನೀಡಿದರು.

### ವರಮಹಾಲಕ್ಷ್ಮಿ ಹಬ್ಬ

ಬೆಳ್ಳಿ ಚೊಂಬು ಅಥವಾ ಮನೆಯಲ್ಲಿರುವ ಕಳಸದಲ್ಲಿ ಒಂದು ಪಾರ್ಶ್ವದಲ್ಲಿ ಕುಂಕುಮದಿಂದ ದೇವಿಗೆ ಆಭರಣ ತೊಡಿಸಿ ನಂದಿಬಟ್ಟಲು ಹೂವಿನ ರಸದಿಂದ ಕಾಡಿಗೆಯನ್ನು ತಯಾರಿಸಿ ದೇವಿಯ ಕಣ್ಣುಗಳಿಗೆ ಲೇಪಿಸಿ ಕಳಸದ ಮೇಲೆ ತೆಂಗಿನ ಕಾಯಿಯನ್ನು ಇಡಲಾಯಿತು. ನಂತರ ದೇವಿ ಮುಖವಾಡ ಕೂರಿಸಿ ಮಂಟಪವನ್ನು ಮಾಡಿ ಅದರಲ್ಲಿ ನಾನಾ ಬಗೆಯ ಸೀರೆ ಮತ್ತು ಆಭರಣಗಳಿಂದ ಅಲಂಕೃತವಾದ ದೇವಿಯನ್ನು ಹೂವು ಹಣ್ಣುಗಳಿಂದ ಅಲಂಕಾರಗೊಳಿಸಿ ಸಂಭ್ರಮದಿಂದ ಮಹಿಳೆಯರು ಆಚರಿಸಿದರು. ಸಿದ್ಧಾರ್ಥನಗರದ ನ್ಯಾಯ ಮಾರ್ಗದ ರಸ್ತೆಯಲ್ಲಿ ವರಾಹ ಸ್ವಾಮಿ ದೇವಾಲಯದೊಂದಿಗೆ ಲಕ್ಷ್ಮಿ ಪೂಜಿಸಿ ವಿಶೇಷವಾಗಿ ಗಮನ ಸೆಳೆದರು.

### ಪೋಲಿಸರ ವಿರುದ್ಧವೂ ಎಫ್‌ಐಆರ್

ಪ್ರಕರಣ ದಾಖಲಿಸುವವರೆಗೂ ಪೊಲೀಸ್ ಠಾಣೆಯಲ್ಲೇ ಪ್ರತಿಭಟನೆ ಆರಂಭಿಸಿದ್ದರಿಂದ ಪೋಲೀಸರು ಎಆರ್ ದಾಖಲು ಮಾಡಿದ ನಂತರ ರಾಹುಲ್ ಪ್ರತಿಭಟನೆ ಕೈಬಿಟ್ಟರು.

### ಕಂಬಳ ನಿಲ್ಲಿಸಲು ಮನವಿ

ಗದ್ದೆ ನಿರ್ಮಾಣಕ್ಕೆ 25.28 ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಗಿಡಗಂಟಿಗಳನ್ನು ಕಡಿಯುವುದು; ಈ ಜಾಗದಲ್ಲಿದ್ದ ಸಾತಗಳ್ಳಿ ಕೆರೆಯನ್ನು ಮುಚ್ಚುವುದು; ನೀರಿನ ತೀವ್ರ ಅಭಾವವಿರುವಾಗ ಲಕ್ಷಾಂತರ ಲೀಟರ್ ನೀರು ಪೋಲು ಮಾಡುವುದು ವಿವೇಕದ ನಡೆಗಳಲ್ಲ. ಎಂದರು ಶಾಸಕ ದರ್ಶನ್ ಪುಟ್ಟಣ್ಣಯ್ಯ, ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ದಲಿತ ಸಂಘರ್ಷ ಸಮಿತಿಯ ಮುಖಂಡರಾದ ಇಂದೂಧರ ಹೊನ್ನಾಪುರ, ಗುರುಪ್ರಸಾದ್ ಕೆರಗೋಡು, ಸರ್ವೋದಯ ಕರ್ನಾಟಕ ಪಕ್ಷ ರಾಜ್ಯಾಧ್ಯಕ್ಷ ಚಾಮರಸ ಪಾಟೀಲ, ಪರಿಸರಕ್ಕಾಗಿ ನಾವು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ, ಪ್ರೊ. ಕಾಳಚನ್ನೇಗೌಡ, ಮೈಸೂರು ಜಿಲ್ಲಾ ರೈತ ಸಂಘ ಅಧ್ಯಕ್ಷ ಹೊಸೂರು ಕುಮಾರ್, ಭಾನುಮೋಹನ್, ಮನ್ಸೂರ್ ಅಹ್ಮದ್, ರವಿ ಬಳೆ, ಪ್ರಭಾ ನಂದೀಶ್ ಮುಂತಾದವರಿದ್ದರು.

# ಸರ್ಕಾರಿ ಹುದ್ದೆಗಳು ಗಗನ ಕುಸುಮ


## ನೂತನ ನಿಯಮ ತಂದ ಸಂಕಷ್ಟ | ಕೈಗೆಟಕದಿರುವ ಗ್ರೂಪ್-ಸಿ ಹುದ್ದೆಗಳು

**ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: ಖಾಲಿ ಹುದ್ದೆಗಳ ಭರ್ತಿಗೆ ರಾಜ್ಯ ಸರ್ಕಾರ ಇತ್ತೀಚೆಗೆ ಹೊರಡಿಸಿರುವ ಅಧಿಸೂಚನೆಯಿಂದ ಕೆಲವರು ಪುಳಕಿತಗೊಂಡರೆ, ಗ್ರಾಮೀಣ ಭಾಗದ ಉದ್ಯೋಗಾಕಾಂಕ್ಷಿಗಳಿಗೆ ಸರ್ಕಾರಿ ನೌಕರಿ ಎಂಬುದು ಗಗನ ಕುಸುಮ ಎಂಬಂತೆ ಗೋಚರವಾಗುತ್ತಿದೆ.

ಬಿ.ಎ ಪದವಿ ವ್ಯಾಸಂಗ ಮಾಡಿದವರಿಗೆ ಇದ್ದ ಪ್ರಥಮ, ದ್ವಿತೀಯ ದರ್ಜೆ ಸಹಾಯಕ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸೇರಿದಂತೆ ಇತರೆ ಗ್ರೂಪ್-ಸಿ ವೃಂದದ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 100 ಅಂಕಗಳ ಸಾಮಾನ್ಯಜ್ಞಾನ ಹಾಗೂ ಕನ್ನಡ ವಿಷಯದ 100 ಅಂಕಗಳ ಪತ್ರಿಕೆಗಳಿದ್ದವು. ಈ ರೀತಿ ಇದ್ದ ಪರೀಕ್ಷಾ ಪದ್ಧತಿಯನ್ನು ಮಾರ್ಪಾಡು ಮಾಡಿ 100 ಅಂಕಗಳಿಗಿದ್ದ ಕನ್ನಡ ವಿಷಯದ ಪ್ರಶ್ನೋತ್ತರಗಳನ್ನು ಕೇವಲ 35ಕ್ಕೆ ಕಡಿತಗೊಳಿಸಿ ಮುಕ್ಕಾಲು ಭಾಗ ಇಂಗ್ಲೀಷ್ ಹಾಗೂ ಕಂಪ್ಯೂಟರ್ ವಿಷಯಗಳ ಪ್ರಶ್ನೆಗಳನ್ನು ಕೇಳಲು ಸರ್ಕಾರ ನಿರ್ಧರಿಸಿರುವುದು ಗ್ರಾಮೀಣ ಭಾಗದ ಅಭ್ಯರ್ಥಿಗಳ ಭವಿಷ್ಯಕ್ಕೆ ಮರಣಶಾಸನ ಬರೆದಂತಾಗಿದೆ.




> **ಸರ್ಕಾರಿ ಉದ್ಯೋಗ ಪಡೆದು ಬದುಕು ಭದ್ರಗೊಳಿಸಿ ಕೊಳ್ಳಬೇಕೆಂಬ ಯುವ ಸಮುದಾಯದ ಗ್ರಾಮೀಣರ ಆಸೆಗೆ ಸರ್ಕಾರ ತಂದಿರುವ ಹೊಸ ಪರೀಕ್ಷಾ ವಿಧಾನ ತಣ್ಣೀರೆರಚಿದೆ. ಸರ್ಕಾರಗಳು ಕಾಲ, ಕಾಲಕ್ಕೆ ಉದ್ಯೋಗ ಭರ್ತಿಮಾಡುವುದಿಲ್ಲ. ಗ್ರಾಮೀಣ ಭಾಗದ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡದ ಸರ್ಕಾರಗಳಿಗೆ ಜನರೇ ಬುದ್ಧಿಕಲಿಸಬೇಕು.**
> **ಹೆಸರೇಳಲಿಚ್ಛಿಸದ ನೊಂದ ಉದ್ಯೋಗಾಕಾಂಕ್ಷಿ**

### ಉಳ್ಳವರಿಗೆ ಅನುಕೂಲ ಮಾಡಲು ಸರ್ಕಾರದ ನಿರ್ಧಾರವೇ?

**ಕೆಲವು ರಾಜಕಾರಣಿಗಳು, ಹಲವು ಸರ್ಕಾರಿ ನೌಕರರು ಬಡ ವರ್ಗದವರ ತೆರಿಗೆ ದುಡ್ಡಿನಲ್ಲಿ ಸೌಲಭ್ಯ ಪಡೆದುಕೊಂಡು ತಮ್ಮ ಮಕ್ಕಳ ಶಿಕ್ಷಣಕ್ಕೆ ಮಾತ್ರ ಖಾಸಗಿಯತ್ತ ಮುಖ ಮಾಡಿ ಸರ್ಕಾರಿ ಶಾಲೆಗಳನ್ನು ಕಡೆಗಣಿಸುತ್ತಾರೆ. ಇಂಗ್ಲೀಷ್, ಕಂಪ್ಯೂಟರ್ ಸೇರಿದಂತೆ ಪೂರಕ ಶಿಕ್ಷಣವನ್ನು ಪ್ರಾಥಮಿಕ ಹಂತದಲ್ಲಿಯೇ ತಮ್ಮ ಮಕ್ಕಳಿಗೆ ಕೊಡಿಸಿರುತ್ತಾರೆ. ಪದವಿ ಪೂರ್ವ ಹಂತಕ್ಕೆ ಅವರು ವಿಷಯ ತಜ್ಞರೇ ಆಗಿರುತ್ತಾರೆ. ಸರ್ಕಾರ ತಂದಿರುವ ಈ ನೂತನ ಪರೀಕ್ಷಾ ವಿಧಾನದ 65 ಅಂಕಗಳ ಇಂಗ್ಲೀಷ್ ಹಾಗೂ ಕಂಪ್ಯೂಟರ್ ಪ್ರಶ್ನೆಗಳಿಗೆ ನಗರ ಪ್ರದೇಶಗಳಲ್ಲಿ ವಿದ್ಯಾಭ್ಯಾಸ ಮಾಡಿದವರು ಸುಲಭವಾಗಿ ಉತ್ತರಿಸುತ್ತಾರೆ. ಉಳ್ಳವರಿಗೆ ಅನುಕೂಲ ಮಾಡಲೇ ಸರ್ಕಾರ ಈ ರೀತಿ ನಿರ್ಧಾರ ಮಾಡಿದೆ ಎಂಬುದು ಗ್ರಾಮೀಣ ಭಾಗದವರ ಆರೋಪವಾಗಿದೆ.**

> **ಐಎಎಸ್, ಐಪಿಎಸ್ ರೀತಿಯ ಎ ವರ್ಗದ ಅಧಿಕಾರಿ, ತಹಶೀಲ್ದಾರ್, ಇನ್ಸ್‌ಪೆಕ್ಟರ್ ರೀತಿಯ ಬಿ ವರ್ಗದ ಹುದ್ದೆಗಳನ್ನು ಪಡೆಯಲು ಬೇಕಾಗುವ ಶೈಕ್ಷಣಿಕ ಸವಲತ್ತುಗಳನ್ನು ಹಳ್ಳಿಗಾಡಿನವರಿಗೆ ನೀಡಿಲ್ಲ. ಸಿ ವರ್ಗದ ಹುದ್ದೆಪಡಯಲು ಇದ್ದ ಏಕೈಕ ಮಾರ್ಗವನ್ನು ತೆಗೆದು ಶೇ.65 ಇಂಗ್ಲೀಷ್, ಕಂಪ್ಯೂಟರ್ ಪ್ರಶ್ನೆಗಳನ್ನು ಕೇಳುತ್ತಿರುವುದರಿಂದ ಈ ಹುದ್ದೆಗಳೂ ಕೈ ತಪ್ಪಲಿವೆ. ಇತ್ತೀಚೆಗೆ ಎಫ್.ಡಿ.ಎ, ಎಸ್.ಡಿ.ಎ ಹುದ್ದೆಗಳಿಗೆ ನೆಗೆಟಿವ್ ಅಂಕಗಳನ್ನು ತರಲಾಗಿದೆ. ಈ ವ್ಯವಸ್ಥೆಯೂ ನಮಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.**
> **-ಕೆ.ಕಿರಣ್** ಉದ್ಯೋಗಾಕಾಂಕ್ಷಿ, ಎಚ್.ಡಿ.ಕೋಟೆ ತಾಲೂಕು

ವರ್ಷಕ್ಕೊಮ್ಮೆ ಉದ್ಯೋಗ ಭರ್ತಿ ಮಾಡದೇ ಇರುವುದರಿಂದ, ವಯೋಮಿತಿಯ ಕಾರಣದಿಂದ ಪ್ರತಿಭಾವಂತರಿಗೂ ನೌಕರಿ ಕೈತಪ್ಪಿರುವ ಸಾಕಷ್ಟು ಉದಾಹರಣೆಗಳಿವೆ. ಇದೀಗ ಹೊಸ ನಿಯಮದಿಂದ ಇನ್ನಷ್ಟು ಅವಕಾಶ ವಂಚಿತರನ್ನಾಗಿ ಮಾಡಲಾಗುತ್ತಿದೆ ಎಂಬುದು ಬಹುತೇಕರ ವಾದ.

### ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟ

**ಗ್ರಾಮೀಣ ಭಾಗದಲ್ಲಿ ಬಹುತೇಕರು ಸರ್ಕಾರಿ ಶಾಲೆಗಳಲ್ಲಿ ಓದಿದವರು ಇರುತ್ತಾರೆ. ಇವುಗಳಲ್ಲಿ ಇಂದಿಗೂ ಇಂಗ್ಲೀಷ್ ಹಾಗೂ ಕಂಪ್ಯೂಟರ್ ವಿಷಯಗಳಿಗೆ ಶಿಕ್ಷಕರಿಲ್ಲ. ಸಾಮಾನ್ಯವಾಗಿ ಗ್ರಾಮೀಣರಿಗೆ ಪ್ರಸ್ತುತವೂ ಇಂಗ್ಲೀಷ್ ವಿಷಯ ಕಬ್ಬಿಣದ ಕಡಲೆಯಾದರೆ ಕಂಪ್ಯೂಟರ್ ನ ಬೇಸಿಕ್ ತಿಳಿದವರೂ ಬೆರಳೆಣಿಕೆ ಮಂದಿ. ಪರಿಸ್ಥಿತಿ ಹೀಗಿರುವಾಗ 25-30 ವರ್ಷಗಳ ಹಿಂದೆ ಓದಿದವರು, ವಯೋಮಿತಿ ಅಂಚಿನಲ್ಲಿದ್ದವರು ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಮುಂದಾಗಿದ್ದು, ಶೇ.65 ಅಂಕಗಳ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಹೇಗೆ ಉತ್ತರಿಸುತ್ತಾರೆ ಎಂಬ ಪ್ರಶ್ನೆ ಮೂಡಿದೆ.**

## ಮೊದಲ ಪುಟದಿಂದ

### ಪಾದಚಾರಿ ಮಾರ್ಗದಲ್ಲಿ ಶೇ.30ರಷ್ಟು ಅವಕಾಶಕ್ಕೆ ಆಗ್ರಹ

ಬಂತು. ಹೀಗಾಗಿ ಕಾರ್ಯಾಚರಣೆ ನಡೆಸುತ್ತಿದ್ದೇವೆ. ಯಾವುದೇ ನಿರ್ದಿಷ್ಟ ವರ್ಗದ ವ್ಯಾಪಾರಿಗಳನ್ನು ಗುಂಗಿಸಿಕೊಂಡು ಕ್ರಮ ಕೈಗೊಳ್ಳುತ್ತಿಲ್ಲ. ಎಲ್ಲಾ ವರ್ಗದ ಒತ್ತುವರಿಗಳನ್ನೂ ತೆರವು ಮಾಡಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ಇದಕ್ಕೆ ನಿತೀಶ್ ಪಾಟೀಲ್, ಯಾವುದೇ ನಿರ್ದಿಷ್ಟ ವ್ಯಕ್ತಿ ಅಥವಾ ವರ್ಗವನ್ನು ಗುರಿಯಾಗಿಸಿಕೊಂಡು ಕಾರ್ಯಾಚರಣೆ ನಡೆಸುತ್ತಿಲ್ಲ. ಎಲ್ಲ ವರ್ಗದವರಿಗೂ ನಿಯಮ ಒಂದೇ ಆಗಿದೆ. ಮೈಸೂರು ನಗರದಲ್ಲಿ ಸುಮಾರು 1,400 ಕಿ.ಮೀ. ಉದ್ದದ ಫುಟ್‌ಪಾತ್‌ಗಳಿದ್ದು, ಮೊದಲ ಹಂತದಲ್ಲಿ ಸುಮಾರು 100 ಕಿ.ಮೀ. ವ್ಯಾಪ್ತಿಯಲ್ಲಿ ಪ್ರಮುಖವಾಗಿ ತೆರವು ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕರ ಓಡಾಟ ಮತ್ತು ಸುರಕ್ಷತೆಯ ದೃಷ್ಟಿಯಿಂದ ಬೀದಿ ಬದಿ ವ್ಯಾಪಾರಸ್ಥರೊಂದಿಗೆ ಮಾತುಕತೆ ನಡೆಸಿ ಶೇ.30ರಷ್ಟು ಜಾಗವನ್ನು ಬಿಟ್ಟು ಕೊಡಲು ತೀರ್ಮಾನಿಸಲಾಗುವುದು. ಆದರೆ, ಇನ್ನುಳಿದ 70ರಷ್ಟು ಜಾಗವನ್ನು ಅಕ್ರಮಿಸಿಕೊಂಡರೆ ಕ್ರಮ ಕೈಗೊಳ್ಳುತ್ತೇವೆ ಎಂದು ಎಚ್ಚರಿಸಿದರು. ತೆರವುಗೊಳ್ಳುವ ವ್ಯಾಪಾರಿಗಳಿಗೆ ಹಲವು ಕಡೆ ವ್ಯಾಪಾರ ಸ್ಥಳಗಳನ್ನು ಗುರುತಿಸಿ ನೀಡಲಾಗಿದೆ. ಆದರೆ, ಹೊಸ ಸ್ಥಳಗಳಲ್ಲಿ ವ್ಯಾಪಾರ ನಡೆಯುವುದಿಲ್ಲ ಎಂಬ ಕಾರಣಕ್ಕೆ ಕೆಲವರು ಅಲ್ಲಿಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ಆರಂಭದಲ್ಲಿ ಸ್ವಲ್ಪ ಸಮಸ್ಯೆಯಾಗಬಹುದು, ಬಳಿಕ ವ್ಯಾಪಾರಸ್ಥರು ಹೊಸ ಸ್ಥಳಕ್ಕೆ ಹೊಂದಿಕೊಳ್ಳಬೇಕು ಎಂದು ಹೇಳಿದರು. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮಾಧ್ಯಮ ವಕ್ತಾರ ಕೆ.ಮಹೇಶ್, ಫುಟ್‌ಬಾತ್ ವ್ಯಾಪಾರಿಗಳ ಸಂಘದ ಅಧ್ಯಕ್ಷ ಅಜ್ಮಲ್ ಪಾಷ ಇದ್ದರು.

### ವಿವಿಧೆಡೆ ಲಕ್ಷ್ಮಿ ಪೂಜೆ

ಅವತಾರದಂತೆ ದೇವಿ ಭಕ್ತರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿತ್ತು. ಪ್ರತಿ ವರ್ಷದಂತೆ ಈ ದೇವಾಲಯದಲ್ಲಿ ಸುಮಾರು 5 ರಿಂದ 7 ಲಕ್ಷದವರೆಗೆ ಎಲ್ಲಾ ಬಗೆಯ ನೋಟುಗಳ ಸಂಗ್ರಹಿಸಿ ದೇವಿಗೆ ನೋಟಿನ ಅಲಂಕಾರ ಮಾಡುವ ಮೂಲಕ ಈ ದೇವಾಲಯ ಪ್ರಸಿದ್ಧಿಗೊಂಡಿದೆ. ಬಂದ ಭಕ್ತರಿಗೆ ಪೂಜಾ ಕಾರ್ಯ ನೆರವೇರಿಸಿ ಮಹಾ ಮಂಗಳಾರತಿ ಜೊತೆ ತೀರ್ಥ ಪ್ರಸಾದ ವಿತರಿಸಲಾಗುತ್ತಿತ್ತು. ಈಗಾಗಲೆ ಪಟ್ಟಣ ಅಲ್ಲದೆ ವಿವಿಧ ಗ್ರಾಮಗಳಿಂದ ಭಕ್ತರು ಶ್ರದ್ದೆ ಭಕ್ತಿಯಿಂದ ದೇವಾಲಯಕ್ಕೆ ಆಗಮಿಸಿ ಚಾಮುಂಡೇಶ್ವರಿ ದೇವಿಯ ಧನ ಲಕ್ಷ್ಮಿ ಅವತಾರದ ದರ್ಶನ ಪಡೆದು ಪುನೀತರಾಗಿದ್ದಾರೆ. ಶ್ರೀರಂಗಪಟ್ಟಣ ವರ ಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ವಿವಧ ನೋಟಗಳ ಸಂಗ್ರಹಿಸಿ ದೇವಿಗೆ ನೋಟಿನ ಅಲಂಕಾರ ಮಾಡಲಾಗಿತ್ತು.

### ಅಮಾನತಿಗೆ ಶಿಫಾರಸು

ಈ ಆದೇಶ ವನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇ ರಿದ್ದರು. ನ್ಯಾಯಾಲಯ ಇತ್ತೀಚೆಗೆ ಅಮಾನತು ಆದೇಶವನ್ನು ರದ್ದುಗೊಳಿಸಿತ್ತು. ಕೆಪಿಎಸ್‌ಸಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಸಾಹುಕಾರ್ ವಿರುದ್ಧ ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ನೇಮಕಾತಿ ಅಕ್ರಮ ಹಾಗೂ ಭ್ರಷ್ಟಾಚಾರದ ಆರೋಪಗಳು ಕೇಳಿಬಂದಿದ್ದವು. ಈ ಆರೋಪಗಳ ಕುರಿತು ತನಿಖೆ ಮುಂದುವರಿಸಲು ಹಾಗೂ ಅವರನ್ನು ಮತ್ತೆ ಅಮಾನತುಗೊಳಿಸುವಂತೆ ರಾಜ್ಯಪಾಲರಿಗೆ ಶಿಫಾರಸು ಕಳುಹಿಸಲು ಸಂಪುಟ ನಿರ್ಧರಿಸಿದೆ ಎಂದು ತಿಳಿಸಲಾಗಿದೆ.ಇದೇ ವೇಳೆ, ಅಕ್ರಮ ಹಣ ವರ್ಗಾವಣೆ ಮತ್ತು ಹವಾಲಾ ಶಂಕೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಇತ್ತೀಚೆಗೆ ಸಾಹುಕಾರ್ ಸೇರಿದಂತೆ ಹಲವು ಸ್ಥಳಗಳಲ್ಲಿ ದಾಳಿ ನಡೆಸಿತ್ತು. ಬೆಂಗಳೂರು, ಹಾಸನ, ಚಿತ್ರದುರ್ಗ, ದಾವಣಗೆರೆ, ರಾಯಚೂರು, ಕಾರವಾರ, ಕಲಬುರಗಿ, ಬೆಳಗಾವಿ ಹಾಗೂ ಗುಜರಾತ್‌ನ ಅಹಮದಾಬಾದ್ ಸೇರಿದಂತೆ 21 ಸ್ಥಳಗಳಲ್ಲಿ ಕಾರ್ಯಾಚರಣೆ ನಡೆದಿತ್ತು. ಕೆಪಿಎಸ್‌ಸಿ ಕಚೇರಿ, ಸಾಹುಕಾರ್ ಅವರ ನಿವಾಸ, ಆಯೋಗದ ಸದಸ್ಯೆ ಶಾಂತಾ ಹೊಸಮನಿ, ಪ್ರಕರಣದ ಮಧ್ಯವರ್ತಿಗಳು, ಡಿಜಿಟಲ್ ಮೌಲ್ಯಮಾಪನ ಸಂಸ್ಥೆ ಹಾಗೂ ಕೆಲವು ಆಯ್ಕೆಯಾದ ಅಭ್ಯರ್ಥಿಗಳ ಮನೆಗಳಲ್ಲೂ ಇಡಿ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿದ್ದರು.

### ರಸ್ತೆಗಳಿಗೆ ಮಾನ್ಯತೆ

ಜಾರಿಯಲ್ಲಿರುವ ಈ ವ್ಯವಸ್ಥೆಯನ್ನು ರಾಜ್ಯದ ಇತರ ನಗರಪಾಲಿಕೆ, ಪುರಸಭೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೂ ವಿಸ್ತರಿಸಲಾಗುತ್ತಿದೆ ಎಂದು ಹೇಳಿದರು.

### ಸೌಹಾರ್ದತೆಯ ವರಮಹಾಲಕ್ಷ್ಮಿ ಪೂಜೆ



ಮೈಸೂರು: ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಲಕ್ಷ್ಮಿಪುರಂನಲ್ಲಿರುವ ಶ್ರೀ ದುರ್ಗಾ ಫೌಂಡೇಶನ್ ಕಚೇರಿಯಲ್ಲಿ ವಿಶೇಷ ಪೂಜೆ ಹಾಗೂ ಸೌಹಾ ರ್ದತಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಲಕ್ಷ್ಮಿ ವಿಗ್ರಹವನ್ನು ಭಕ್ತಿ ಭಾವದಿಂದ ಅಲಂಕರಿಸಿ ಪೂಜೆ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಮುಸ್ಲಿಂ ಬಾಂಧವರು ಹಾಗೂ ಆಶಾ ಕಾರ್ಯಕರ್ತೆಯರು ಭಾಗವಹಿಸಿ ವರಮಹಾಲಕ್ಷ್ಮಿ ಪೂಜೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಕವಿತಾ, ವೀಣಾ, ರಮ್ಯಾ, ಯಶಸ್ವಿನಿ, ಮುಸಲ್ಮಾನ್ ಬಾಂಧವರಾದ ಅಮ್ರೀನ್, ಫಾತಿಮಾ, ನಜೀರ ಬೇಗಮ್, ಐರನ್ ಇತರರು ಉಪಸ್ಥಿತರಿದ್ದರು.

**ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ**
**CHAMARAJANAGAR INSTITUTE OF MEDICAL SCIENCES**
(An Autonomous Institute of Govt of Karnataka)
Sy. No:124, Yadapura Village, Kasaba Hobli, Chamarajanagar-571313.
E-Mail: directorcimscrnagara@gmail.com Tel: 08226-226701, Website: https://cimscrnagara.karnataka.gov.in

ಸಂ. ಸರಬ/ಬುಕ್ಸ್/ಎಸ್.ಸಿ.ಪಿ./129/2026-27 ದಿನಾಂಕ: 17.08.2026

**ಅಲ್ಪಾವಧಿ ಮರು- ಇ-ಟೆಂಡರ್ ಅಧಿಸೂಚನೆ**

ವಿಷಯ: ಈ ವಿದ್ಯಾಲಯದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಖರೀದಿಸಲು ಇ-ಟೆಂಡರ್ ಕರೆದಿರುವ ಬಗ್ಗೆ.

2025-26 ನೇ ಸಾಲಿಗೆ ಈ ವಿದ್ಯಾಲಯದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ರಂತೆ ಅಧಿನಿಯಮ 2000 ರಂತೆ ಇ-ಪೋರ್ಟಲ್ **http://kppp.karnataka.gov.in** ಮುಖಾಂತರ ಅಲ್ಪಾವಧಿ ಮರು-ಇ-ಟೆಂಡರ್ ಕರೆಯಲಾಗಿದೆ. ಆಸಕ್ತ ಟೆಂಡರ್ದಾರರು ದಿನಾಂಕ 27.08.2026 ರಂದು 5.00 ಗಂಟೆಯೊಳಗೆ ನಿಗದಿತ ಇ.ಎಂ.ಡಿ. ಪಾವತಿಸಿ ಇ-ಟೆಂಡರ್ ಸಲ್ಲಿಸಬಹುದಾಗಿರುತ್ತದೆ.

ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟಲ್ಲಿ ಮುಂದಿನ ಕಾರ್ಯನಿರತ ದಿನವನ್ನು ಕಡೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಈ ಕೆಳಸಹಿದಾರರನ್ನು ಕಛೇರಿ ವೇಳೆಯಲ್ಲಿ ಭೇಟಿ ಮಾಡಬಹುದಾಗಿರುತ್ತದೆ.

ಸಂ: ವಾಸಸಂಇ: ಚಾ.ನಗರ: 307: 2026-27

ಸಹಿ/-
ನಿರ್ದೇಶಕರು ಹಾಗೂ ಡೀನ್,
ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಚಾಮರಾಜನಗರ.

### ವಿಮಾನ ಸಂಪರ್ಕ, ವಿಮಾನ ನಿಲ್ದಾಣ ವಿಸ್ತರಣೆಗೆ ಸಂಸದ ಯದುವೀರ್ ಒತ್ತಾಯ

# ಮೈಸೂರಿನಲ್ಲಿ ಮೊದಲ ನಾಗರಿಕ ವಿಮಾನಯಾನ ಇಲಾಖೆ ಸಭೆ

ಮೈಸೂರು: ಮೈಸೂರಿನಲ್ಲಿ ಇದೇ ಮೊದಲ ಬಾರಿಗೆ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯದ ಸಮಾಲೋಚನಾ ಸಮಿತಿ ಸಭೆ ನಡೆಯಿತು. ಮೈಸೂರಿನ ಹೆಚ್ಚುತ್ತಿರುವ ವಿಮಾನಯಾನ ಅಗತ್ಯತೆಗಳು ಹಾಗೂ ಭವಿಷ್ಯದ ಅಭಿವೃದ್ಧಿಯ ದೃಷ್ಟಿಯಿಂದ ವಿಮಾನ ಸಂಪರ್ಕ, ವಿಮಾನ ನಿಲ್ದಾಣ ವಿಸ್ತರಣೆಗೆ ಸಂಸದ ಯಧುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಒತ್ತಾಯಿಸಿದರು.

ಮೈಸೂರಿನ ವಿಮಾನ ಸಂಪರ್ಕವನ್ನು ಮತ್ತಷ್ಟು ಬಲಪಡಿಸುವಂತೆ ಒತ್ತಾಯಿಸಿ, ಗೌರವಾನ್ವಿತ ನಾಗರಿಕ ವಿಮಾನಯಾನ ಸಚಿವರಿಗೆ ವಿವರವಾದ ಮನವಿಪತ್ರವನ್ನು ಸಲ್ಲಿಸಿದರು. ಮೈಸೂರಿನಿಂದ ಮುಂಬೈ, ಕೊಚ್ಚಿ, ತಿರುಪತಿ ಹಾಗೂ ಗೋವಾ ಸೇರಿದಂತೆ ಪ್ರಮುಖ ದೇಶೀಯ ನಗರಗಳಿಗೆ ನೇರ ವಿಮಾನ ಸಂಪರ್ಕ ಕಲ್ಪಿಸುವಂತೆ ಅವರು ಮನವಿ ಮಾಡಿದರು. ಮೈಸೂರು ಕರ್ನಾಟಕದ ಪ್ರಮುಖ ಪ್ರವಾಸೋದ್ಯಮ ಮತ್ತು ಸಾಂಸ್ಕೃತಿಕ ತಾಣವಾಗಿದ್ದು, ಉತ್ತಮ ವಿಮಾನ ಸಂಪರ್ಕವು ಪ್ರವಾಸೋದ್ಯಮ, ವ್ಯಾಪಾರ, ಶಿಕ್ಷಣ, ಆರೋಗ್ಯ ಸೇವೆ ಹಾಗೂ ಹೂಡಿಕೆ ಕ್ಷೇತ್ರಗಳ ಅಭಿವೃದ್ಧಿಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಲಿದೆ. ವಿಮಾನ ನಿಲ್ದಾಣದ ವಿಸ್ತರಣಾ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವುದು ಅತ್ಯಂತ ಅಗತ್ಯವಾಗಿದ್ದು, ಇದರಿಂದ ಹೆಚ್ಚುತ್ತಿರುವ ಪ್ರಯಾಣಿಕರ ಸಂಖ್ಯೆಯನ್ನು ನಿರ್ವಹಿಸುವುದರ ಜೊತೆಗೆ ಹೆಚ್ಚಿನ ವಿಮಾನ ಮಾರ್ಗಗಳು ಹಾಗೂ ದೊಡ್ಡ ವಿಮಾನಗಳ ಕಾರ್ಯಾಚರಣೆಗೆ ಅವಕಾಶ ದೊರೆಯಲಿದೆ ಎಂದು ಹೇಳಿದರು.




ಮೈಸೂರು ವಿಮಾನ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ನಾನು ನಿರಂತರವಾಗಿ ಅನುಸರಣೆ ಮಾಡುತ್ತಿದ್ದೇನೆ. ನನ್ನ ಬದ್ಧತೆ ಕೇವಲ ತಾತ್ಕಾಲಿಕ ಅಗತ್ಯಗಳನ್ನು ಪೂರೈಸುವುದಕ್ಕೆ ಸೀಮಿತವಾಗಿಲ್ಲ. ಮೈಸೂರಿಗೆ ದೇಶದ ವಿವಿಧ ಭಾಗಗಳೊಂದಿಗೆ ಬಲವಾದ ವಿಮಾನ ಸಂಪರ್ಕ ಕಲ್ಪಿಸುವಂತಹ ದೀರ್ಘಕಾಲೀನ ಮತ್ತು ಶಾಶ್ವತ ಪರಿಹಾರಕ್ಕಾಗಿ ನಾನು ಕಾರ್ಯನಿರ್ವಹಿಸುತ್ತಿದ್ದೇನೆ. ಮೈಸೂರಿಗೆ ತಾತ್ಕಾಲಿಕ ಅಥವಾ ಅಲ್ಪಾವಧಿಯ ವಿಮಾನ ಸಂಪರ್ಕ ಪರಿಹಾರಗಳ ಬದಲಾಗಿ ದೀರ್ಘಕಾಲೀನ ವಿಮಾನಯಾನ ಕಾರ್ಯತಂತ್ರ ಅಗತ್ಯವಿದೆ ಎಂದು ಅವರು ಒತ್ತಿ ಹೇಳಿದರು. ದೇಶದ ಪ್ರಮುಖ ನಗರಗಳೊಂದಿಗೆ ಮೈಸೂರನ್ನು ಸಂಪರ್ಕಿಸುವ ಸಾಮರ್ಥ್ಯ ಹೊಂದಿರುವ ಬಲಿಷ್ಠ ಪ್ರಾದೇಶಿಕ ವಿಮಾನಯಾನ ಕೇಂದ್ರವಾಗಿ ಮೈಸೂರು ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸುವುದು ಅಗತ್ಯವಾಗಿದೆ ಎಂದು ತಿಳಿಸಿದರು.

ಕೇಂದ್ರ ಸಚಿವ ಕಿಂಜರಾಪು ರಾಮ್ ಮೋಹನ್ ನಾಯ್ಡು ಮಾತನಾಡಿ, "ಮೈಸೂರಿಗೆ ಇನ್ನಷ್ಟು ಉತ್ತಮ ವಿಮಾನ ಸಂಪರ್ಕದ ಅಗತ್ಯವಿದೆ. ಮೈಸೂರಿಗೆ ಶೀಘ್ರದಲ್ಲೇ ಅದರ ಯೋಗ್ಯ ಪಾಲು ದೊರೆಯಲಿದೆ ಎಂಬ ವಿಶ್ವಾಸ ನನಗಿದೆ. ಸಂಸದ ಶ್ರೀ ಯದುವೀರ್ ಜೀ ಅವರು ಎಲ್ಲಾ ರೀತಿಯ ಸಹಕಾರಕ್ಕಾಗಿ ನನ್ನೊಂದಿಗೆ ನಿರಂತರವಾಗಿ ಅನುಸರಣೆ ಮಾಡುತ್ತಿದ್ದಾರೆ. ಬಾಕಿ ಉಳಿದಿರುವ ಎಲ್ಲಾ ಕಾಮಗಾರಿಗಳನ್ನು ತಕ್ಷಣ ಕೈಗೆತ್ತಿಕೊಳ್ಳುವಂತೆ ನನ್ನ ಕಚೇರಿಗೆ ನಿರ್ದೇಶನ ನೀಡುತ್ತೇನೆ. ಕೇಂದ್ರ ಸಚಿವರ ಈ ಭರವಸೆಯು ಮೈಸೂರು ವಿಮಾನ ನಿಲ್ದಾಣದ ಅಭಿವೃದ್ಧಿ ಹಾಗೂ ವಿಮಾನ ಸಂಪರ್ಕವನ್ನು ಮತ್ತಷ್ಟು ಬಲಪಡಿಸುವ ಪ್ರಯತ್ನಗಳಿಗೆ ವೇಗ ನೀಡುವ ನಿರೀಕ್ಷೆ ಮೂಡಿಸಿದೆ ಎಂದರು. ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕಿಂಜರಾಪು ರಾಮ್ ಮೋಹನ್ ನಾಯ್ಡು ಸಭೆಯ ಅಧ್ಯಕ್ಷತೆವಹಿಸಿದ್ದರು. ನಾಗರಿಕ ವಿಮಾನಯಾನ ರಾಜ್ಯ ಸಚಿವ ಮುರಳೀಧರ್ ಮೊಹೋಲ್ ಸಹ ಅಧ್ಯಕ್ಷತೆ ವಹಿಸಿದ್ದರು.



# ಜಾಬ್‌ಕಾರ್ಡ್ ಮೇಳ ಆರಂಭ

ಮಡಿಕೇರಿ:–ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಬದಲಿಗೆ ನೂತನವಾಗಿ ಜಾರಿಗೆ ಬಂದಿರುವ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್‌ಗಾರ್ ಮತ್ತು ಅಜೀವಿಕ್ ಮಿಷನ್ ಗ್ರಾಮೀಣ–2026 ಯೋಜನೆಯಡಿ ಜಿಲ್ಲೆಯಾದ್ಯಂತ ಸೆಪ್ಟಂಬರ್ 15 ರ ವರೆಗೆ ಒಂದು ತಿಂಗಳ ಕಾಲ ಜಾಬ್ ಕಾರ್ಡ್ ಮೇಳ ನಡೆಯಲಿದೆ ಎಂದು ಕೊಡಗು ಜಿ.ಪಂ. ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ತಿಳಿಸಿದ್ದಾರೆ.

ಜಿಲ್ಲೆಯ 102 ಗ್ರಾಮ ಪಂಚಾಯತ್ ಗಳಲ್ಲಿ ಒಂದು ತಿಂಗಳ ಕಾಲ ಜಾಬ್ ಕಾರ್ಡ್ ಮೇಳ ನಡೆಯಲಿದೆ. ಗ್ರಾಮೀಣ ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ತಿಳಿಸಿದರು. ವಿಬಿ ಜಿ ರಾಮ್ ಜಿ ಯೋಜನೆಯಡಿಯಲ್ಲಿ ಸಮುದಾಯ ಆಧಾರಿತ ಮತ್ತು ವೈಯಕ್ತಿಕ ಕಾಮಗಾರಿ ಕೈಗೊಳ್ಳಲು ಅವಕಾಶವಿದೆ. ವೈಯಕ್ತಿಕ ಬಾವಿ, ದನದ ಕೊಟ್ಟಿಗೆ, ಕೋಳಿ ಶೆಡ್ ಸೇರಿದಂತೆ ಒಟ್ಟಾರೆ 318 ಕಾಮಗಾರಿಗಳಿಗೆ ಅವಕಾಶವಿದೆ ಎಂದು ತಿಳಿಸಿದರು.

ಹಿಂದಿನ ನರೇಗಾ ಯೋಜನೆಯಡಿಯಲ್ಲಿ ಗ್ರಾಮೀಣ ಭಾಗದ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಉದ್ಯೋಗ ನೀಡಲಾಗುತ್ತಿತ್ತು. ನೂತನ ವಿಬಿ ಜಿ ರಾಮ್ ಜಿ ಯಲ್ಲಿ 125 ದಿನಗಳ ಉದ್ಯೋಗವನ್ನು ನೀಡಬಹುದಾಗಿದೆ ಎಂದು ಅವರು ತಿಳಿಸಿದರು. ಈಗಾಗಲೇ ಗ್ರಾ.ಪಂ.ಗಳು ನಿಯಮಾನುಸಾರ ಕ್ರಿಯಾಯೋಜನೆ ಸಲ್ಲಿಸಿದ್ದು, ಅವುಗಳಿಗೆ ಅನುಮೋದನೆ ನೀಡಲಾಗಿದೆ. ಜಿಲ್ಲೆಯಲ್ಲಿಯೂ ವಿಬಿ ಜಿ ರಾಮ್ ಜಿ ಯೋಜನೆಯಡಿ ಕಾಮಗಾರಿಗಳು ಆರಂಭಗೊಂಡಿದ್ದು, ಗ್ರಾಮೀಣ ಜನರಿಗೆ ದಿನವೊಂದಕ್ಕೆ ರೂ. 382 ಕೂಲಿ ನಿಗದಿಪಡಿಸಲಾಗಿದೆ ಎಂದರು.

### ಮನೆ ಮನೆ ಭೇಟಿ ಕಾರ್ಯಕ್ರಮ

**ಜಾಬ್ ಕಾರ್ಡ್ ಮೇಳದ ಅಂಗವಾಗಿ 20–08–2026 ರಂದು ಕುಶಾಲನಗರ ತಾಲ್ಲೂಕಿನ ತೊರೆನೂರು ಗ್ರಾಮ ಪಂಚಾಯಿತಿಯಲ್ಲಿ ವಿಕಸಿತ ಭಾರತ– ಗ್ಯಾರಂಟಿ ಫಾರ್ ರೋಜ್ಗಾರ್ ಅಂಡ್ ಅಜೀವಿಕ ಮಿಷನ್ (ಗ್ರಾಮೀಣ) ಯೋಜನೆಯಡಿ ಜಾಬ್ ಕಾರ್ಡ್ ಮೇಳ ಹಾಗೂ ಮನೆ ಮನೆ ಭೇಟಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ವಿಬಿ–ಜಿ ರಾಮ್ ಜಿ ಯೋಜನೆಯಡಿ ದೊರಕುವ ವೈಯಕ್ತಿಕ ಹಾಗೂ ಸಮುದಾಯ ಕಾಮಗಾರಿಗಳ ಬಗ್ಗೆ ರೈತರಿಗೆ ಮಾಹಿತಿ ನೀಡಲಾಯಿತು.**

ನಮೂನೆ–6 ರಲ್ಲಿ ಕೆಲಸಕ್ಕೆ ಬೇಡಿಕೆ ಸಲ್ಲಿಸಿದಲ್ಲಿ 15ದಿನಗಳ ಒಳಗಾಗಿ ಗ್ರಾ.ಪಂ.ವತಿಯಿಂದ ಉದ್ಯೋಗ ಒದಗಿಸಲಾಗುತ್ತದೆ. ಕೊಡಗಿನ ಗ್ರಾಮೀಣ ಭಾಗದ ಜನರು ಇದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.

ಜಿಲ್ಲೆಯಾದ್ಯಂತ ಜಾಬ್ ಕಾರ್ಡ್ ಮೇಳವನ್ನು ಯಶಸ್ವಿಯಾಗಿ ಹಮ್ಮಿಕೊಳ್ಳುವ ಸಲುವಾಗಿ 5 ತಾಲೂಕುಗಳಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ. ಜಾಬ್ ಕಾರ್ಡ್ ಪಡೆದುಕೊಳ್ಳಲು ಹಾಗೂ ಕಾಮಗಾರಿ ಪಡೆಯಲು ಮತ್ತು ವಿಬಿ ಜಿ ರಾಮ್ ಜಿ ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸಲು ಇಚ್ಛಿಸುವ ಗ್ರಾಮೀಣ ಭಾಗದ ಜನರು ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯತ್ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಮಾಹಿತಿ ನೀಡಿದ್ದಾರೆ.




# ಸಮಸ್ಯೆಗಳನ್ನು ಪರಿಹರಿಸಿ

## ವಿಶೇಷಚೇತನರ ಕುಂದುಕೊರತೆಗಳಿಗೆ ಆಲಿಸಿದ ಜಿಲ್ಲಾಧಿಕಾರಿ

ಮಡಿಕೇರಿ: ವಿಶೇಷಚೇತನರ ಸಮಸ್ಯೆಗಳನ್ನು ಅಧಿಕಾರಿಗಳು ಅತ್ಯಂತ ಮಾನವೀಯ ದೃಷ್ಟಿಯಿಂದ ಪರಿಗಣಿಸಿ ಸಕಾಲದಲ್ಲಿ ಪರಿಹರಿಸಲು ಮುಂದಾಗಬೇಕು ಎಂದು ಕೊಡಗು ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ವಿಶೇಷಚೇತನರ ಕುಂದುಕೊರತೆ ಹಾಗೂ ಅಹವಾಲು ಆಲಿಸುವ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಎರಡು ಗಂಟೆಗೂ ಹೆಚ್ಚು ಕಾಲ ಸ್ವತಃ ವಿಶೇಷಚೇತನರ ಅಹವಾಲುಗಳನ್ನು ಆಲಿಸಿದ ಅವರು, ಇಂತಹ ಸಭೆಗಳನ್ನು ಕಡ್ಡಾಯವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ನಡೆಸಬೇಕು ಹಾಗೂ ತಾಲೂಕು ಮಟ್ಟದಲ್ಲಿ ಬಗೆಹರಿಯದ ಸಮಸ್ಯೆಗಳನ್ನು ನೇರವಾಗಿ ಜಿಲ್ಲಾಡಳಿತದ ಗಮನಕ್ಕೆ ತರಬೇಕು ಎಂದು ತಿಳಿಸಿದರು. ವಿವಿಧ ಇಲಾಖೆಗಳು ವಿಶೇಷಚೇತನರಿಗೆ ನಿಗದಿಪಡಿಸಿರುವ ಕಾರ್ಯಕ್ರಮಗಳನ್ನು ಆದ್ಯತೆಯ ಮೇರೆಗೆ ಅನುಷ್ಠಾನಗೊಳಿಸಬೇಕು ಎಂದರು.

**ಕಚೇರಿಗಳಲ್ಲಿ ಗೌರವಯುತ ನಡವಳಿಕೆ ಹಾಗೂ ಮೂಲಸೌಕರ್ಯ ವ್ಯವಸ್ಥೆ**

ವಿಶೇಷಚೇತನರನ್ನು ಸರ್ಕಾರಿ ಕಚೇರಿಗಳಲ್ಲಿ ಗೌರವದಿಂದ ನಡೆಸಿಕೊಳ್ಳಬೇಕು, ಅವರನ್ನು ಪದೇ ಪದೇ ಅಲೆದಾಡಿಸುವುದು ಅಥವಾ ಸತಾಯಿಸುವುದು ತರವಲ್ಲ ಎಂದು ಜಿಲ್ಲಾಧಿಕಾರಿಗಳು ಎಚ್ಚರಿಸಿದರು. ಪ್ರತಿಯೊಂದು ಸರ್ಕಾರಿ ಕಚೇರಿ ಹಾಗೂ ಶಾಲೆಗಳಲ್ಲಿ ವಿಶೇಷಚೇತನರ ಸುಲಭ ಓಡಾಟಕ್ಕಾಗಿ ಇಳಿಜಾರು ಪಥದ ವ್ಯವಸ್ಥೆ ಇರಬೇಕು. ಒಂದು ವೇಳೆ ಅವರಿಗೆ ಕಚೇರಿಯ ಒಳಗೆ ಬರಲು ಸಾಧ್ಯವಾಗದಿದ್ದರೆ, ಸಂಬಂಧಪಟ್ಟ ಸಿಬ್ಬಂದಿಯೇ ಅವರ ಬಳಿಗೆ ತೆರಳಿ ಅಗತ್ಯ ಕೆಲಸಗಳನ್ನು ಮಾಡಿಕೊಡಬೇಕು. ಇದರೊಂದಿಗೆ ತಾಲೂಕು ಮಟ್ಟದಲ್ಲಿಯೂ ವಿಶೇಷಚೇತನರಿಗಾಗಿ ಪ್ರತ್ಯೇಕ ಆಧಾರ್ ನೋಂದಣಿ ಶಿಬಿರಗಳನ್ನು ಏರ್ಪಡಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಈ ಸಭೆಯಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ನಂಜುಂಡಯ್ಯ, ಸಾರಿಗೆ ಅಧಿಕಾರಿ ಸತೀಶ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಹೇಶ್, ಪದವಿಪೂರ್ವ ಶಿಕ್ಷಣ ಉಪನಿರ್ದೇಶಕ ಗಣಪತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಸುಮಂಗಲಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕುಮಾರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



### ಶೈಕ್ಷಣಿಕ ನೆರವು ಮತ್ತು ಮಾಸಾಶನ ವಿವಾದ

**ಕೊಡಗು ವಿದ್ಯಾಲಯದ ವೀಣಾ ಚಂಗಪ್ಪ ಹಾಗೂ ಸ್ವಸ್ಥ ಸಂಸ್ಥೆಯ ಆರತಿ ಸೋಮಯ್ಯ ಮಾತನಾಡಿ, ಪ್ರೌಢಶಾಲಾ ಹಾಗೂ ಪದವಿಪೂರ್ವ ಪರೀಕ್ಷೆ ಬರೆಯುವ ವಿಶೇಷಚೇತನ ವಿದ್ಯಾರ್ಥಿಗಳಿಗೆ ಹತ್ತಿರದ ಪರೀಕ್ಷಾ ಕೇಂದ್ರಗಳನ್ನೇ ನಿಗದಿಪಡಿಸಬೇಕು ಮತ್ತು ಅವರ ಅನುಕೂಲಕ್ಕಾಗಿ ಆಂತರಿಕ ಅಂಕಗಳನ್ನು ನೀಡುವಂತಾಗಬೇಕು ಎಂದು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ವಿಶೇಷಚೇತನರ ಕಲ್ಯಾಣಾಧಿಕಾರಿ ವಿಮಲಾ, ಶಿಕ್ಷಣ ಇಲಾಖೆಯೊಂ ದಿಗೆ ಸಮನ್ವಯ ಸಾಧಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ವಿಶೇಷ ಚೇತನರ ಸಂಘದ ಜಿಲ್ಲಾಧ್ಯಕ್ಷ ಬಿ.ಎಂ. ತಿರುಮಲೇಶ್ ಮಾತನಾಡಿ, ವಾರ್ಷಿಕ ಆದಾಯ ಮಿತಿಯ ಕಾರಣದಿಂದ ಕಳೆದ ನಾಲ್ಕು ತಿಂಗಳಿಂದ ಮಾಸಾಶನ ಸ್ಥಗಿತಗೊಂಡಿದೆ ಎಂದು ಗಮನ ಸೆಳೆದರು. ಇದಕ್ಕೆ ಉತ್ತರಿಸಿದ ಜಿಲ್ಲಾಧಿಕಾರಿಗಳು, ಸರ್ಕಾರವು ಆದಾಯ ಮಿತಿ ಹೆಚ್ಚಳಕ್ಕೆ ಪ್ರಸ್ತಾವನೆ ಕೈಗೆತ್ತಿಕೊಂಡಿದ್ದು ಶೀಘ್ರವೇ ಸಮಸ್ಯೆ ಇತ್ಯರ್ಥವಾಗಲಿದೆ ಎಂದರು.**

### ಆಸ್ಪತ್ರೆ, ಸಾರಿಗೆ ಮತ್ತು ವಸತಿ ಸಮಸ್ಯೆಗಳ ಚರ್ಚೆ

**ಸಾರ್ವಜನಿಕ ಸಾರಿಗೆ ಬಸ್ಗಳಲ್ಲಿ ವಿಶೇಷಚೇತನರಿಗೆ ಮೀಸಲಿಟ್ಟ ಆಸನಗಳು ಸಿಗುತ್ತಿಲ್ಲ ಹಾಗೂ ತಾಲೂಕು ಆಸ್ಪತ್ರೆಗಳಲ್ಲಿ ಆದ್ಯತೆಯ ಮೇರೆಗೆ ಚಿಕಿತ್ಸೆ ಸಿಗುತ್ತಿಲ್ಲ ಎಂದು ಹಲವು ವಿಶೇಷಚೇತನರು ಬೇಸರ ವ್ಯಕ್ತಪಡಿಸಿದರು. ವಸತಿ ರಹಿತರಿಗೆ ನಿವೇಶನ ಮತ್ತು ಮನೆ ನಿರ್ಮಿಸಿಕೊಡಬೇಕೆಂದು ಮೂರ್ನಾಡು ಗ್ರಾಮದ ಫಲಾನುಭವಿಗಳು ಕೋರಿದರು. ಕುಶಾಲನಗರ ಹಾಗೂ ಮಡಿಕೇರಿಯ ಪುನರ್ವಸತಿ ಕೇಂದ್ರಗಳಲ್ಲಿ ಅಂಗವಿಕಲರಿಗೆ ಉಚಿತ ಭೌತಚಿಕಿತ್ಸೆ ನೀಡಲಾಗುತ್ತಿದೆ ಎಂದು ವಿವೇಕಾನಂದ ಯುವ ಸಂಸ್ಥೆಯ ಅಂಕಾಚಾರಿ ಮಾಹಿತಿ ನೀಡಿದರು.**



# ವಿಬಿಜಿ ರಾಮ್ ಜಿ ಬಲಗೊಳಿಸಲು ಜಾಬ್‌ಕಾರ್ಡ್ ಮೇಳ

ಮೈಸೂರು: ಪ್ರತಿ ಕುಟುಂಬಕ್ಕೆ ಉದ್ಯೋಗ ಭದ್ರತೆ ನೀಡುವ ಉದ್ದೇಶದೊಂದಿಗೆ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್ಗಾರ್ ಅಂಡ್ ಅಜೀವಿಕ ಮಿಷನ್(ಗ್ರಾಮೀಣ) (ವಿಬಿಜಿರಾಮ್ ಜಿ) ಅನ್ನು ಮತ್ತಷ್ಟು ಬಲಪಡಿಸಿ ವಿಸ್ತರಿಸಲು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲೂ ಜಾಬ್ ಕಾರ್ಡ್ ಮೇಳ ಆರಂಭವಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸೂಚನೆ ಮೇರೆಗೆ ಜಿಲ್ಲಾ ಪಂಚಾಯಿತಿ ನಿರ್ದೇಶನದಲ್ಲಿ ಜಿಲ್ಲೆಯ 255 ಗ್ರಾಮ ಪಂಚಾಯಿತಿಗಳಲ್ಲಿ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್ಗಾರ್ ಅಂಡ್ ಅಜೀವಿಕ ಮಿಷನ್(ಗ್ರಾಮೀಣ)(ವಿಬಿ ಜಿ ರಾಮ್ ಜಿ) ಜಾಬ್ ಕಾರ್ಡ್ ಮೇಳ ನಡೆಸಲು ಮುಂದಾಗಿದೆ.

ಅಭಿಯಾನದ ಉದ್ದೇಶ: ಸದರಿ ಯೋಜನೆಯಡಿಯಲ್ಲಿ ಲಭ್ಯವಿರುವ ಅನೂಕೂಲಗಳ ಬಗ್ಗೆ ಜಾಗೃತಿ ಮೂಡಿಸಿ ಗ್ರಾಮೀಣ ಜನರ ಭಾಗವಹಿಸುವಿಕೆ ಹೆಚ್ಚಿಸುವುದು. ಗ್ರಾಮೀಣ ಜನರ ಜೀವನೋಪಾಯಕ್ಕೆ ಭದ್ರತೆ ಒದಗಿಸುವುದು. ಜಲಸಂರಕ್ಷಣೆ, ಅಂತರ್ಜಲ, ಮರುಪೂರಣ ಹಾಗೂ ದೀರ್ಘಕಾಲೀನ ಜೀವನೋಪಾಯಕ್ಕೆ ಆದ್ಯತೆ ನೀಡುವ ಮೂಲಕ ಬರ ನಿರ್ವಹಣೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಪಡಿಸಲಾಗುವುದು. ಸ್ವಗ್ರಾಮದಲ್ಲೇ ಉದ್ಯೋಗಾವಕಾಶ ಕಲ್ಪಿಸುವ ಮೂಲಕ ನಗರಗಳಿಗೆ ವಲಸೆ ಹೋಗುವುದನ್ನು ತಡೆಯುವುದು ಮೇಳದ ಉದ್ದೇಶವಾಗಿದೆ.




**ಹೇಗಿರುತ್ತೇ ಮೇಳ**

ಪ್ರತಿ ಮನೆ ಮನೆಗೂ ಭೇಟಿ ನೀಡಿ ಹಾಗೂ ಬೇಡಿಕೆಗಳ ಸ್ವೀಕರಿಸುವುದು. ಈವರೆಗೂ ನೋಂದಣಿಯಾಗದ ದುರ್ಬಲವರ್ಗದ ಕುಟುಂಬಗಳಿಗೆ ರೋಜ್ಗಾರ್ ಗ್ಯಾರಂಟಿ ಕಾರ್ಡ್ ವಿತರಣೆ ವಿತರಿಸುವುದು. ವಿಶೇಷಚೇತನರಿಗೆ ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ರೋಜ್ಗಾರ್ ಗ್ಯಾರಂಟಿ ಕಾರ್ಡ್ ನೀಡುವುದು. ಸ್ಥಳದಲ್ಲೇ ಜಾಬ್ ಕಾರ್ಡ್ ನವೀಕರಣ, ಇ–ಕೆವೈಸಿ ಅಪ್ಡೇಟ್ ಮಾಡುವುದು. ಅಕುಶಲ ಕೆಲಸದ ಬೇಡಿಕೆ ಸ್ವೀಕೃತಿ ಮಾಡುವುದು. ವಿಬಿಜಿರಾಮ್ ಜಿ ಯೋಜನೆ ಕುರಿತು ಜಾಗೃತಿ ಮೂಡಿಸಲಾಗುವುದು.



**ಪ್ರತಿದಿನಕ್ಕೆ 382ರೂ. ದರದಲ್ಲಿ ಕೂಲಿ ನೀಡುವ ಜತೆಗೆ ಜಾಬ್ ಕಾರ್ಡ್ ಮೂಲಕ ಪ್ರತಿ ಕುಟುಂಬಕ್ಕೆ 125 ದಿನಗಳ ಕೆಲಸ ನೀಡುವ ದಿಸೆಯಲ್ಲಿ ಪ್ರತಿ ಮನೆ ಮನೆಗೆ ಭೇಟಿ ನೀಡುವುದು ಅಭಿಯಾನದ ಮೊದಲ ಆದ್ಯತೆಯಾಗಿದೆ. ಪ್ರತಿ ಕುಟುಂಬಕ್ಕೆ ಉದ್ಯೋಗ ಭದ್ರತೆ ನೀಡುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ಜಾಬ್ ಕಾರ್ಡ್ ಮೇಳವನ್ನು ಮೈಸೂರು ಜಿಲ್ಲೆಯಾದ್ಯಂತ ಎಲ್ಲಾ ಗ್ರಾಮ ಪಂಚಾಯಿತಿಯಲ್ಲಿ ಯಶಸ್ವಿಯಾಗಿ ನಡೆಸಲಾಗುತ್ತಿದೆ.**

▸▸ **–ಎಸ್. ಯುಕೇಶ್ ಕುಮಾರ್** ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿ.ಪಂ, ಮೈಸೂರು.



**ಸಮಾನ ಕೂಲಿಯೊಂದಿಗೆ ಸಮಾನವೇತನ ನೀಡುವ ದಿಸೆಯಲ್ಲಿ ಜಿಲ್ಲೆಯ 255 ಗ್ರಾಮ ಪಂಚಾಯಿತಿಗಳಲ್ಲಿಯೂ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್ಗಾರ್ ಅಂಡ್ ಅಜೀವಿಕ ಮಿಷನ್(ಗ್ರಾಮೀಣ) (ವಿಬಿ ಜಿ ರಾಮ್ ಜಿ) ಜಾಬ್ ಕಾರ್ಡ್ ಮೇಳ ಪ್ರಾರಂಭಗೊಂಡಿವೆ. ಗ್ರಾಮೀಣ, ದುರ್ಬಲ ಜನರ ಜೀವನೋಪಾಯ ಭದ್ರತೆ ಒದಗಿಸಲು ಸಹಕಾರಿಯಾಗಲಿದೆ. ಜತೆಗೆ ಗ್ರಾಮೀಣ ಭಾಗ ಜನರ ಆರ್ಥಿಕ ಜೀವನ ಸುಧಾರಣೆಯೊಂದಿಗೆ ಜಲ ಸಂರಕ್ಷಣೆ ಪ್ರಮುಖ ಧ್ಯೇಯವಾಗಿದೆ.**

▸▸ **–ಭೀಮಪ್ಪ ಕ.ಲಾಳಿ** ಉಪಕಾರ್ಯದರ್ಶಿ(ಅಭಿವೃದ್ಧಿ), ಜಿಪಂ, ಮೈಸೂರು

# 6 ಕಿಶೋರ ಕಾರ್ಮಿಕರ ರಕ್ಷಣೆ

ಚಾಮರಾಜನಗರ: ಕಾರ್ಮಿಕ ಇಲಾಖೆ ಮತ್ತು ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ಅಧಿಕಾರಿಗಳು ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲೂಕುಗಳಲ್ಲಿ ದಾಳಿ, ತಪಾಸಣೆ ನಡೆಸಿ 6 ಕಿಶೋರ ಕಾರ್ಮಿಕರನ್ನು ಗುರುತಿಸಿ ಕಿಶೋರ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡ ಮಾಲೀಕರ ವಿರುದ್ಧ ಮೊಕದ್ದಮೆ ಹೂಡಲು ಕ್ರಮ ವಹಿಸಿದ್ದಾರೆ.

ಗುಂಡ್ಲುಪೇಟೆ ಪಟ್ಟಣದ ಇಟ್ಟಿಗೆ ಕಾರ್ಖಾನೆ, ಪೆಟ್ರೋಲ್ ಬಂಕ್, ಚಾಮರಾಜನಗರದ ಲೇಔಟ್ ಮತ್ತು ಒಳಚರಂಡಿ ನಿರ್ಮಾಣ ಕಾಮಗಾರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ನಾಲ್ವರು ಬಾಲಕರು ಹಾಗೂ ಇಬ್ಬರು ಬಾಲಕಿಯರು ಸೇರಿದಂತೆ ಒಟ್ಟು 6 ಕಿಶೋರ ಕಾರ್ಮಿಕರನ್ನು ಗುರುತಿಸಿ ಕೆಲಸದಿಂದ ಬಿಡಿಸಿ ಅವರ ಆರೈಕೆ, ರಕ್ಷಣೆ, ಪೋಷಣೆ ಹಾಗೂ ಪುನರ್ವಸತಿಗಾಗಿ ಬಾಲಮಮದಿರಕ್ಕೆ ದಾಖಲಿಸಿದ್ದಾರೆ.

ಕಿಶೋರ ಕಾರ್ಮಿಕರನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಲಾಗಿದೆ. ಕಿಶೋರ ಕಾರ್ಮಿಕರನ್ನು ನೇಮಿಸಿಕೊಂಡ ಮಾಲೀಕರ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಕ್ರಮ ತೆಗೆದುಕೊಳ್ಳಲಾಗಿದೆ.

ದಾಳಿ, ತಪಾಸಣೆ ತಂಡದಲ್ಲಿ ಜಿಲ್ಲಾ ಕಾರ್ಮಿಕ ಅಧಿಕಾರಿ ರಾಮಚಂದ್ರಯ್ಯ, ಹಿರಿಯ ಕಾರ್ಮಿಕ ನಿರೀಕ್ಷಕರಾದ ವಿ.ಎಲ್. ಪ್ರಸಾದ್, ಆರ್. ನಾರಾಯಣಮೂರ್ತಿ, ಯೋಜನಾ ನಿರ್ದೇಶಕರಾದ ಎಂ. ಮಹೇಶ್ ಇದ್ದರು. ಜಿಲ್ಲೆಯಾದ್ಯಂತ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಮಕ್ಕಳ ದುಡಿಮೆಯನ್ನು ನಿಷೇಧಿಸಲಾಗಿದೆ. ಯಾವುದೇ ಕಾರಣಕ್ಕೂ 18 ವರ್ಷದೊಳಗಿನ ಮಕ್ಕಳನ್ನು ದುಡಿಮೆಗೆ ನೇಮಿಸಿಕೊಳ್ಳಬಾರದು. ತಪ್ಪಿದಲ್ಲಿ ಮಾಲೀಕರ ವಿರುದ್ಧ ಬಾಲಕಾರ್ಮಿಕ ನಿಷೇದ ಮತ್ತು ನಿಯಂತ್ರಣ ಕಾಯ್ದೆ ಅನ್ವಯ 20 ಸಾವಿರದಿಂದ 50 ಸಾವಿರ ರೂ. ವರೆಗೆ ದಂಡ ಹಾಗೂ ಆರು ತಿಂಗಳಿಂದ 2 ವರ್ಷದವರೆಗೂ ಸೆರೆವಾಸ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ರಾಮಚಂದ್ರಯ್ಯ ಅವರು ತಿಳಿಸಿದ್ದಾರೆ.



# ವರಮಹಾಲಕ್ಷ್ಮಿ ಹಬ್ಬದ ಸಂಭ್ರಮ



ಗುಂಡ್ಲುಪೇಟೆ: ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಶುಕ್ರವಾರ ವರಮಹಾಲಕ್ಷ್ಮಿ ಹಬ್ಬವನ್ನು ಮಹಿಳೆಯರು ಸಡಗರ–ಸಂಭ್ರಮದಿಂದ ಆಚರಿಸಿದರು.

ಬೆಳಗ್ಗೆಯಿಂದಲೇ ಗೃಹಿಣಿಯರು ಮನೆಗಳನ್ನು ಹೂವುಗಳಿಂದ ಅಲಂಕರಿಸಿ, ಕಳಸ ಪ್ರತಿಷ್ಠಾಪಿಸಿ ಮಹಾಲಕ್ಷ್ಮಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಹಣ, ಚಿನ್ನಾಭರಣ ಹಾಗೂ ವಿವಿಧ ಸಿಹಿ–ತಿನಿಸುಗಳನ್ನು ಇಟ್ಟು ಕುಟುಂಬದ ಸುಖ, ಶಾಂತಿ ಹಾಗೂ ಸಂಪತ್ತು ವೃದ್ಧಿಯಾಗಲಿ ಎಂದು ಪ್ರಾರ್ಥಿಸಿದರು.

ಬಳಿಕ ಅಕ್ಕಪಕ್ಕದ ಮಹಿಳೆಯರಿಗೆ ಅರಿಶಿಣ, ಕುಂಕುಮ ಹಾಗೂ ಸಿಹಿ ನೀಡಿ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ತಾಲೂಕಿನ ತೆರಕಣಾಂಬಿ ಲಕ್ಷ್ಮೀವರದರಾಜ ದೇವಾಲಯ ಹಾಗೂ ಪಟ್ಟಣದ ಶ್ರೀರಾಮೇಶ್ವರ ಸ್ವಾಮಿ ದೇವಾಲಯಗಳಲ್ಲಿ ವಿಶೇಷ ಅಭಿಷೇಕ, ಅಲಂಕಾರ ಹಾಗೂ ಮಹಾಮಂಗಳಾರತಿ ನೆರವೇರಿಸಲಾಯಿತು. ಭಕ್ತರಿಗೆ ಅರಿಶಿಣ, ಕುಂಕುಮ, ಬಳೆ ಹಾಗೂ ಪ್ರಸಾದ ವಿತರಿಸಲಾಯಿತು. ಹಬ್ಬದ ಹಿನ್ನೆಲೆಯಲ್ಲಿ ಪಟ್ಟಣ ಹಾಗೂ ಗ್ರಾಮೀಣ ಭಾಗಗಳಲ್ಲಿ ದಿನವಿಡೀ ಸಂಭ್ರಮದ ವಾತಾವರಣ ಕಂಡುಬಂತು.

# 5ನೇ ದಿನಕ್ಕೆ ಬಿಜೆಪಿ ಪ್ರತಿಭಟನೆ ಅಂತ್ಯ



ಮೈಸೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಬಿ.ನಾಗೇಂದ್ರ ಅವರ ರಾಜೀನಾಮೆಗೆ ಒತ್ತಾಯಿಸಿ ಭಾರತೀಯ ಜನತಾ ಪಾರ್ಟಿ ವತಿಯಿಂದ ಮೈಸೂರಿನಲ್ಲಿ ನಡೆಯುತ್ತಿರುವ ನಿರಂತರ ಹೋರಾಟವು ಶುಕ್ರವಾರ ಐದನೇ ದಿನಕ್ಕೆ ಅಂತ್ಯವಾಯಿತು.

ನಗರದಲ್ಲಿ ನಡೆದ ಪ್ರತಿಭಟನೆಯಲ್ಲಿ ಮೈಸೂರು ವಿಭಾಗದ ಬಿಜೆಪಿ ಸಹ ಪ್ರಭಾರಿ ಡಾ.ಈ.ಸಿ.ನಿಂಗರಾಜ್ ಗೌಡ ಭಾಗವಹಿಸಿ, ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸಬೇಕು ಹಾಗೂ ನೈತಿಕ ಹೊಣೆ ಹೊತ್ತು ಸಚಿವ ಬಿ.ನಾಗೇಂದ್ರ ರಾಜೀನಾಮೆ ನೀಡಬೇಕು ಎಂದು ಅವರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಜಿಲ್ಲಾಧ್ಯಕ್ಷ ಸುಬ್ಬಣ್ಣ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ಬಿ.ಹರ್ಷವರ್ಧನ್ ಸೇರಿ ಇತರರು ಭಾಗವಹಿಸಿದ್ದರು.

## ಟೆಂಡರ್ ಹಣ ಪಾವತಿಸದ ಕಾರಣ ಕೊಟ್ಟ ಅಧಿಕಾರಿಗಳು | ಬಂಡವಾಳ ಹೂಡಿದ್ದೇವೆ, ಬದುಕಲು ಬಿಡಿ, ಅಲವತ್ತುಕೊಂಡ ಮಾಲೀಕರು

# ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ 12 ಅಂಗಡಿ ಮಳಿಗೆಗಳಿಗೆ ಬೀಗ


ರಾಮನಗರ: ನಗರದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿರುವ 12 ಅಂಗಡಿ ಮಳಿಗೆಗಳಿಗೆ ಅಧಿಕಾರಿಗಳು ಬೀಗ ಜಡಿದಿದ್ದಾರೆ. ಬಾಡಿಗೆ ಪಾವತಿ ಮಾಡದ ಕಾರಣ ಅಂಗಡಿಗಳಿಗೆ ಬೀಗ ಜಡಿಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಅಧಿಕಾರಿಗಳೊಂದಿಗೆ ವಾಗ್ವಾದ**

ಬಸ್ ನಿಲ್ದಾಣದಲ್ಲಿರುವ ಅಂಗಡಿ ಮಳಿಗೆಗಳಿಗೆ ಬೀಗ ಜಡಿಯಲು ಅಧಿಕಾರಿಗಳು ಬಂದಾಗ ಅಂಗಡಿ ಮಾಲೀಕರು ವಿರೋಧ ವ್ಯಕ್ತಪಡಿಸಿದರು. ಇಬ್ಬರ ನಡುವೆ ಮಾತಿನ ಚಕಮಕಿ, ವಾಗ್ವಾದ ನಡೆಯಿತು. ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳು ಪೊಲೀಸರ ಸಹಕಾರದಲ್ಲಿ ಕೊನೆಗು ಬೀಗ ಹಾಕುವುದರಲ್ಲಿ ಯಶಸ್ವಿಯಾದರು.

**ಅಂಗಡಿ ಮಾಲೀಕರ ವಾದವೇನು?**

ನಿಲ್ದಾಣದಲ್ಲಿರುವ 12 ಅಂಗಡಿಗಳಿವೆ. ತಾವು ಸರಿಯಾಗಿ ಬಾಡಿಗೆ ಪಾವತಿ ಮಾಡುತ್ತಿದ್ದರು ತಮ್ಮ ಮಳಿಗೆಗಳಿಗೆ ಬೀಗ ಜಡೆಯಲಾಗಿದೆ. ಟೆಂಡರ್ ಪಡೆದವರು ತಮಗೆ ಹಣ ಕಟ್ಟಿಲ್ಲ ಎಂದು ಅಧಿಕಾರಿಗಳು ವಾದಿಸುತ್ತಿದ್ದಾರೆ. ತಮ್ಮದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುವಂತಾಗಿದೆ ಎಂದರು. ತಮ್ಮನ್ನು ಬಲವಂತವಾಗಿ ಅಂಗಡಿಗಳಿಂದ ಹೊರಹಾಕಿದ್ದಾರೆ. ಯಾವುದೇ ಮಾಹಿತಿ ನೀಡದೆ ಬೀಗ ಹಾಕಿದ್ದಾರೆ. ಲಕ್ಷಾಂತರ ರೂ ಬಂಡವಾಳ ಹಾಕಿದ್ದೇವೆ. ಇಲ್ಲಿನ ವ್ಯಾಪಾರವನ್ನೇ ನಂಬಿ ನಮ್ಮ ಬದುಕು ಸಾಗುತ್ತಿದೆ. ಹೀಗಾಗಿ ವ್ಯಾಪಾರ ಮಾಡಿಕೊಡಲು ಅಧಿಕಾರಿಗಳು ಮುಂದಾಗಬೇಕು ಎಂದು ಅಲವತ್ತುಕೊಂಡರು.



**ಅಧಿಕಾರಿಗಳ ವಾದವೇನು?**

ಅಂಗಡಿಗಳಿಗೆ ಬೀಗ ಹಾಕುವ ವೇಳೆ ನೂರಾರು ನಾಗರೀಕರು ಜಮಾಯಿಸಿದ್ದರು. ಅಧಿಕಾರಿಗಳು ಮತ್ತು ಅಂಗಡಿ ಮಾಲೀಕರ ನಡುವೆ ವಾಗ್ವಾದ ಜೋರಾಗಿತ್ತು. ಪೊಲೀಸರು ಅಂಗಡಿಗಳನ್ನು ತೆರವುಗೊಳಿಸಲು ಸಹಕಾರ ನೀಡುತ್ತಿದ್ದರು. ಈ ವೇಳೆ ಮಾಧ್ಯಮ ಪ್ರತಿನಿಧಿಗಳ ಬಳಿಮಾತನಾಡಿದ ಕೆಎಸ್‌ಆರ್‌ಟಿಸಿ ರಾಮನಗರ ವಿಭಾಗ ನಿಯಂತ್ರಣಾಧಿಕಾರಿ ಪುರುಷೋತ್ತಮ್, ನಿಲ್ದಾಣದಲ್ಲಿರುವ ಅಂಗಡಿಗಳಿಗೆ ಮೂಲ ಟೆಂಡರ್ ಉಮೇಶ್ ಎನ್ನುವವರಿಗೆ ಆಗಿದೆ. ಅವರು ನಟೇಶ್ ಎಂಬುವವರಿಗೆ ಸಬ್ ಟೆಂಡರ್ ಕೊಟ್ಟಿದ್ದಾರೆ. ಆದರೆ ಅವರು ಸಂಸ್ಥೆಗೆ ಪಾವತಿಸಬೇಕಾದ ಹಣ ಪಾವತಿಸಲಿಲ್ಲ. ಈ ಹಿಂದೆಯೆ ಒಂದೂವರೆ ಕೋಟಿ ಹಣ ಉಳಿಸಿಕೊಂಡಿದ್ದಾರೆ. ಆ ಮೊತ್ತ ಈಗ ಎರಡು ಕೋಟಿಗೂ ಹೆಚ್ಚಾಗಿದೆ. ಅವರು ಕಳೆದ ಕೆಲವು ತಿಂಗಳ ಹಿಂದೆ ಹೈಕೋರ್ಟ್‌ಗೆ ಹೋಗಿದ್ದರು. ಕೋರ್ಟ್ ಕೂಡ ಅವರಿಗೆ 50 ಲಕ್ಷ ಪಾವತಿಸಲು ತಿಳಿಸಿತ್ತು ಆದರೆ ಅವರು 25 ಲಕ್ಷ ಕಟ್ಟಿದ್ದಾರೆ. ಉಳಿದ ಹಣ ಇನ್ನು ಪಾವತಿಯಾಗಿಲ್ಲ ಎಂದು ಮಾಹಿತಿ ಕೊಟ್ಟರು.

ಸಂಸ್ಥೆ ಪರವಾಗಿ ಆದೇಶ ಬಂದ ಕಾರಣ ಇಂದು ತೆರವು ಕಾರ್ಯಚರಣೆ ಮಾಡಲಾಗಿದೆ. ಯಾವುದೇ ಪರವಾನಗಿ ಇಲ್ಲದಿದ್ದರೆ ಅಥವಾ ಒಪ್ಪಂದದ ಪ್ರಕಾರ ಅನುಮತಿ ಪಡೆಯದಿದ್ದರೆ ಅವರಿಗೆ ಯಾವುದೇ ಅಧಿಕಾರವಿಲ್ಲ. ರದ್ದತಿ ಆದೇಶದ ನಂತರ ಆ ಜಾಗವನ್ನು ಖಾಲಿ ಮಾಡಿಕೊಳ್ಳಬೇಕೆಂದು ರಿಜಿಸ್ಟರ್ಡ್ ಅಗ್ರಿಮೆಂಟ್ ಆಗಿದೆ ಆ ಹಿನ್ನಲೆಯಲ್ಲಿ ನಾವು ಅಂಗಡಿ ಬಾಡಿಗೆದಾರರಿಗೆ ಮೊದಲೇ ತಿಳಿಸಿದ್ದರೂ ಅವರು ಖಾಲಿ ಮಾಡದ ಕಾರಣ ಪೋಲೀಸರ ಸಹಾಯ ನಮ್ಮ ಅಧಿಕಾರಿ, ಸಿಬ್ಬಂದಿಗಳ ಮೂಲಕ ಅಂಗಡಿಗಳನ್ನು ತೆರವುಗೊಳಿಸಲಾಗಿದೆ ಎಂದರು.

**ಮಾನವೀಯ ಅವಕಾಶ ಇದೆ**

ಮುಂದಿನ ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೆ ಅಂಗಡಿ ಮಾಲೀಕರು ಅಲ್ಲಿಯೇ ಮಳಿಗೆ ತೆರೆದು ವ್ಯಾಪಾರ ಮಾಡಲು ಇಚ್ಛೆ ಪಟ್ಟರೆ ಸಂಸ್ಥೆ ನಿಯಮಾವಳಿ ಪ್ರಕಾರ ಈಗ ಅವರು ಟೆಂಡರ್‌ದಾರರಿಗೆ ನೀಡುತ್ತಿರುವ ಬಾಡಿಗೆ ದರದಂತೆ ಸಂಸ್ಥೆಗೆ ತಾತ್ಕಲಿಕ ಒಪ್ಪಂದ ನೀಡಿ ಅಂಗಡಿ ತೆರೆದು ಮುಂದುವರಿಯಲು ಅವರಿಗೆ ಮಾನವೀಯ ಅವಕಾಶ ಕಲ್ಪಿಸಲಾಗುತ್ತದೆ ಎಂದರು. ಈ ವೇಳೆ ಕೆ.ಎಸ್.ಆರ್.ಟಿ.ಸಿ. ಕಾರ್ಮಿಕ ಘಟಕ ಅಧಿಕಾರಿ ಕೆ.ಕೆ. ಸೋಮಶೇಖರ, ಯಾಂತ್ರಿಕ ಶಿಲ್ಪಿ ಮುತ್ತುರಾಜು, ಕಾನೂನು ಅಧಿಕಾರಿ ಸೌಮ್ಯ, ಲೆಕ್ಕಾಧಿಕಾರಿ ಶಿವಾಜಿ, ಆಡಳಿತಾಧಿಕಾರಿ ಜಯರಾಮ್, ಭದ್ರತಾ ಜಾಗೃತ ಅಧಿಕಾರಿ ಸ್ಮಿತಾ, ಘಟಕ ವ್ಯವಸ್ಥಾಪಕ ಶಂಕರ್, ಭದ್ರತಾ ಅಧಿಕಾರಿ ಶೀಲಾ ಇದ್ದರು.

ಅಧಿಕಾರಿಗಳು ಮತ್ತು ಅಂಗಡಿ ಮಾಲೀಕರ ನಡುವೆ ವಾಗ್ವಾದ ನಡೆದಾಗ ಪೋಲೀಸರು ಮಧ್ಯೆ ಪ್ರವೇಶಿಸಿ ವಾತಾವರಣ ತಿಳಿಗೊಳಿಸಿದರು. ಡಿಎಸ್‌ಪಿ ಶ್ರೀನಿವಾಸ್, ವೃತ್ತ ನಿರೀಕ್ಷಕ ರಮೇಶ್, ಐಜೂರು ಠಾಣೆ ಸಬ್ ಇನ್‌ಸ್ಪೆಕ್ಟರ್ ಜಾರ್ಜ್ ಪ್ರಕಾಶ್, ಚನ್ನಕೇಶವ ನೇತೃತ್ವದಲ್ಲಿ ಪೋಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

# ಸಾವಿಗೀಡಾದವರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಿ

ಕೊಳ್ಳೇಗಾಲ: ಹನೂರು ಶೂಟೌಟ್ ಪ್ರಕರಣದಲ್ಲಿ ಸಾವಿಗೀಡಾದವರ ಕುಟುಂಬಕ್ಕೆ ಸೂಕ್ತ ಪರಿಹಾರ ಒದಗಿಸಬೇಕೆಂದು ಒತ್ತಾಯಿಸಿ ಕೊಳ್ಳೇಗಾಲದಲ್ಲಿ ಇದೇ ತಿಂಗಳ 24 ರಂದು ವಿವಿಧ ಪ್ರಗತಿಪರ ಸಂಘಟನೆಯ ವತಿಯಿಂದ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಯಕರ್ನಾಟಕ ಜನಪರ ವೇದಿಕೆಯ ಜಿಲ್ಲಾಧ್ಯಕ್ಷ ಜಕಾವುಲ್ಲಾ ಅವರು ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆ.15ರಂದು ಹನೂರಿನಲ್ಲಿ ನಡೆದ ಶೂಟೌಟ್ ಪ್ರಕರಣದ ವಿಚಾರಣೆಯನ್ನು ಸಿಬಿಐ ತನಿಖೆಗೆ ಒಳಪಡಿಸಬೇಕೆಂದು. ಜೊತೆಗೆ ಸಾವನ್ನಪ್ಪಿದ ಕುಟುಂಬಕ್ಕೆ ಸೂಕ್ತ ನ್ಯಾಯ ಕೊಡಬೇಕೆಂಬ ನಿಟ್ಟಿನಲ್ಲಿ ಆ.24 ರಂದು ಹೋರಾಟ ಹಮ್ಮಿಕೊಂಡಿದ್ದೇವೆ. ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ನಡೆಸುವ ಮೂಲಕ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ರೈತ ಸಂಘದ ರಾಜ್ಯಾಧ್ಯಕ್ಷ ಶೈಲೇಂದ್ರ ಮಾತನಾಡಿ, ಆ.15 ರಂದು ಹನೂರಿನ ಅರಣ್ಯದಲ್ಲಿ ನಡೆದ ಶೂಟೌಟ್ ದಲ್ಲಿ ಸಾವನ್ನಪ್ಪಿದವ ಕುಟುಂಬದವರಿಗೆ ಎರಡು ಕೋಟಿ ಪರಿಹಾರ, ಐದು ಎಕರೆ ಜಮೀನು ನೀಡಬೇಕು, ಕುಟುಂಬಕ್ಕೆ ಸರ್ಕಾರಿ ಹುದ್ಧೆ, ಮಕ್ಕಳ ಶಿಕ್ಷಣಕ್ಕೆ ಎಲ್ಲಾ



ಸವಲತ್ತು ಒದಗಿಸಬೇಕು. ಶೂಟೌಟ್ ನಡೆಸಿದ್ದವರನ್ನು ಕೆಲಸದಿಂದ ವಜಾಗೊಳಿಸಬೇಕು ಎಂದು ಪ್ರತಿಭಟನೆಯನ್ನು ನಡೆಸಲಾಗುವುದು ಎಂದು ತಿಳಿಸಿದರು.

ಪ್ರಜಾವಿಮೋಚನಾ ಸಮಿತಿ ಸಾಮಾಜಿಕ ನ್ಯಾಯ ಸಂಘ ವಿಭಾಗೀಯ ಅಧ್ಯಕ್ಷ ಕೆಸ್ತೂರು ಸಿದ್ದರಾಜು ಮಾತನಾಡಿ, ಶೂಟೌಟ್ ಪ್ರಕರಣದಲ್ಲಿ ಸಾವನ್ನಪ್ಪಿದ್ದ ಕುಟುಂಬದವರಿಗೆ ತಲಾ ಹತ್ತು ಲಕ್ಷ ರೂ.ನ್ನು ತಮಿಳುನಾಡಿನ ಮುಖ್ಯಮಂತ್ರಿ ಜೋಸೆಫ್ ವಿಜಯ್ ನೀಡುತ್ತಿರುವುದನ್ನು ನಾವು ಸ್ವಾಗತ ಮಾಡುತ್ತೇವೆ. ಇದರ ಜೊತೆಗೆ ಕರ್ನಾಟಕದಲ್ಲಿ ತಮಿಳರ ಮೇಲೆ ಕನ್ನಡಿಗರು ದೌರ್ಜನ್ಯ ಎಸಗುತ್ತಿದ್ದಾರೆ ಎಂದು ಹೇಳಿರುವುದನ್ನು ನಾವು ಖಂಡಿಸುತ್ತೇವೆ. ಆದ್ದರಿಂದ ಭಾಷಾ ದ್ವೇಷವನ್ನು ಬಿತ್ತುವುದನ್ನು ಬಿಟ್ಟು ನಿಮ್ಮ ಹೇಳಿಕೆಯನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭ ದಲ್ಲಿ ಜಯ ಕರ್ನಾಟಕ ಜನಪರ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಮಹಾಜನ್, ಜಿಲ್ಲಾ ಉಪಾಧ್ಯಕ್ಷರು ಶ್ರೀನಿವಾಸ್ ರಾವ್, ಚಂದ್ರಶೇಖರ್.ಎಸ್, ಸದಸ್ಯರು ಸುಂದರ್, ರೈತ ಸಂಘದ ರಾಜ್ಯ ಕಾರ್ಯದರ್ಶಿ ಸಾಲೊಮನ್, ತಾಲ್ಲೂಕು ಅಧ್ಯಕ್ಷ ಮೋಳೆ ರಾಜು, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಪೆರಿಯಾನಾಯಗಂ, ಜಿಲ್ಲಾ ಕಾರ್ಯಧ್ಯಕ್ಷ ವಸಂತ್ ಕುಮಾರ್, ಲಾರೆನ್ಸ್, ಪ್ರಜಾವಿಮೋಚನಾ ಸಮಿತಿ ಸಾಮಾಜಿಕ ನ್ಯಾಯ ಸಂಘ ವಿಭಾಗೀಯ ಹನೂರು ತಾಲ್ಲೂಕು ಅಧ್ಯಕ್ಷ ಮಹಾಲಿಂಗಯ್ಯ, ರಾಮಪುರ ಹೊಬಳಿ ಅಧ್ಯಕ್ಷ ಗೋವಿಂದರಾಜು, ಉಪಾಧ್ಯಕ್ಷರ ಉಮೇಶ್ ಹಾಗೂ ಇತರರು ಇದ್ದರು.

# ಸ್ಥಳ ಶುದ್ದೀಕರಣ ಖಂಡಿಸಿ ಪ್ರತಿಭಟನೆ

ಚಾಮರಾಜನಗರ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಸ್ಥಳವನ್ನು ಶುದ್ದೀಕರಣ ಗೊಳಿಸಿದ ಘಟನೆಯನ್ನು ಖಂಡಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಡಿ.ಜಿ.ನಾಗರ್‌ಬಣದ ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಸಮಿತಿ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಉತ್ತರಾಖಂಡ ಸರ್ಕಾರ, ಮುಖ್ಯಮಂತ್ರಿ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತ ಪಡಿಸಿದರು. ಸ್ಥಳಕ್ಕೆ ಆಗಮಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆ ನೇತೃತ್ವ ವಹಿಸಿದ್ದ ಸಮಿತಿಯ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ ಮಾತನಾಡಿ, ಉತ್ತರಾಖಂಡದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ ಅವರು ಭಾಷಣದ ನಂತರ ಅವರು ಕುಳಿತಿದ್ದ ವೇದಿಕೆಯನ್ನು ಮನುವಾದಿ ಸಂಘಟನೆಗಳು ಶುದ್ದೀಕರಣಗೊಳಿಸಿರುವುದು ಅತ್ಯಂತ ಖಂಡನೀಯವಾಗಿದೆ. ಇದನ್ನು ಖಂಡಿಸಿ ಕರ್ನಾಟಕ' ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯಾದ್ಯಂತ ಪ್ರತಿಭಟನೆ ನಡೆಸುತ್ತಿದೆ. ಈ ಘಟನೆಯು 21ನೇ ಶತಮಾನದ ಪ್ರಜಾಪ್ರಭುತ್ವದ ಭಾರತದಲ್ಲಿ ಇನ್ನೂ ಜೀವಂತವಾಗಿರುವ




ದಲಿತ ವಿರೋಧಿ, ಅಸ್ಪಶ್ಯತೆಯ ಅಮಾನುಷ ಕೃತ್ಯದ ಮುಖವನ್ನು ಬಯಲು ಮಾಡಿದೆ. ದಲಿತ ನಾಯಕರು ಉನ್ನತ ಮಟ್ಟದ ಅಧಿಕಾರಕ್ಕೆ ಏರಿದರು ಇಂತಹ ಜಾತಿ ತಾರತಮ್ಯ ದೌರ್ಜನ್ಯ ಮರುಕಳಿಸುತ್ತಿವೆ ಇದು ಶೋಚನೀಯ ಸಂಗತಿಯಾಗಿದೆ. ಅಸ್ಪೃಶ್ಯತೆಯ ಆಚರಣೆ ಮಾಡಿರುವ ಉತ್ತರಾಖಂಡ ಸರ್ಕಾರವನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಡಿ.ಜಿ.ನಾಗರ್‌ಬಣದ ಜಿಲ್ಲಾ ಸಮಿತಿಯ ಸಂಘಟನಾ ಸಂಚಾಲಕ ರಂಗಸ್ವಾಮಿ, ಚಂದ್ರಶೇಖರ್, ನಂಜುಂಡ, ಮಹಾದೇವಸ್ವಾಮಿ, ಯ.ಚಿನ್ನಸ್ವಾಮಿ, ಶಿವಣ್ಣ, ಮಂಜು, ವೆಂಕಟರಮಣಸ್ವಾಮಿ, ಇತರರು ಭಾಗವಹಿಸಿದ್ದರು.

ದಸರಾ ಮಹೋತ್ಸವ-2026

## ಮಹಾರಾಜ ಮೈದಾನದಲ್ಲಿ ಆಹಾರ ಮೇಳ ಆಯೋಜನೆ



ಮೈಸೂರು: ಮೈಸೂರು ದಸರಾ ಮಹೋತ್ಸವ-2026ರ ಅಂಗವಾಗಿ ನಗರದ ಮಹಾರಾಜ ಮೈದಾನದಲ್ಲಿ ಅಕ್ಟೋಬರ್ 11 ರಿಂದ 25 ರವರೆಗೆ ಆಯೋಜಿಸಲಾಗಿರುವ ಜನಪ್ರಿಯ ಆಹಾರ ಮೇಳದಲ್ಲಿ ಭಾಗವಹಿಸಲು ಅರ್ಹ ವ್ಯಕ್ತಿಗಳು, ರೆಸ್ಟೋರೆಂಟ್‌ಗಳು, ಸಾವಯವ ಕೃಷಿಕರು ಹಾಗೂ ಸಂಘ-ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಮೇಳವು ದಕ್ಷಿಣ ಮತ್ತು ಉತ್ತರ ಕರ್ನಾಟಕದ ಸಾಂಪ್ರದಾಯಿಕ ಶೈಲಿ, ಭಾರತದ ವಿವಿಧ ರಾಜ್ಯಗಳ ಖಾದ್ಯಗಳು ಹಾಗೂ ಅಂತರರಾಷ್ಟ್ರೀಯ ಮಟ್ಟದ ಚೈನೀಸ್, ಇಟಾಲಿಯನ್, ಫ್ರೆಂಚ್, ಟಿಬೆಟಿಯನ್ ಮತ್ತು ಆಫ್ರಿಕನ್ ಆಹಾರ ಪದ್ಧತಿಗಳನ್ನು ಒಂದೇ ಸೂರಿನಡಿ ಉಣಬಡಿಸುವ ವೈವಿಧ್ಯಮಯ ಉದ್ದೇಶವನ್ನು ಹೊಂದಿದೆ.

ಇಂದಿನ ಆಧುನಿಕ ಆಹಾರ ಪದ್ಧತಿಯಿಂದ ಸಾರ್ವಜನಿಕರ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲಾಗುತ್ತಿರುವ ದುಷ್ಪರಿಣಾಮಗಳನ್ನು ತಡೆಯುವ ಸಲುವಾಗಿ ಈ ಬಾರಿಯ ಮೇಳದಲ್ಲಿ ನೈಸರ್ಗಿಕ, ಸಾವಯವ ಕೃಷಿ ಉತ್ಪನ್ನಗಳು ಹಾಗೂ ಸಿರಿಧಾನ್ಯಗಳಿಂದ ತಯಾರಿಸಿದ ಖಾದ್ಯಗಳಿಗೆ ವಿಶೇಷ ಆದ್ಯತೆ ನೀಡಲಾಗಿದೆ. ರಾಜ್ಯದ ಸಿರಿಧಾನ್ಯ ಬೆಳೆಗಾರರು, ಸಾವಯವ ಕೃಷಿಕರು, ಹಣ್ಣು-ತರಕಾರಿ ಮಾರಾಟಗಾರರು ಮತ್ತು ರೈತ ಒಕ್ಕೂಟಗಳು ಆಹಾರ ಮೇಳದಲ್ಲಿ ಮಳಿಗೆಗಳನ್ನು ತೆರೆದು ತಮ್ಮ ಉತ್ಪನ್ನ ಹಾಗೂ ಅಡುಗೆಗಳನ್ನು ಸಾರ್ವಜನಿಕರಿಗೆ ಪರಿಚಯಿಸಲು ಉತ್ತಮ ಅವಕಾಶ ಕಲ್ಪಿಸಲಾಗಿದೆ.

ಪಾರಂಪರಿಕ ಹಾಗೂ ವಿಶೇಷ ರುಚಿಯ ಖಾದ್ಯಗಳನ್ನು ಸಿದ್ಧಪಡಿಸುವ ಗೃಹಿಣಿಯರು, ಅಡುಗೆಯವರು, ಹೋಟೆಲ್‌ಗಳು ಮತ್ತು ಸಂಸ್ಥೆಗಳು ಈ ಆಹಾರ ಮೇಳದಲ್ಲಿ ಭಾಗವಹಿಸಬಹುದು. ಜಾಗತಿಕ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿರುವ ಮೈಸೂರು ಪಾಕ್ ರೀತಿಯಲ್ಲೇ ತಮ್ಮ ಖಾಸಗಿ ಖಾದ್ಯಗಳ ಮೌಲ್ಯ ಹಾಗೂ ರುಚಿಯನ್ನು ಜಗತ್ತಿಗೆ ವಿಸ್ತರಿಸಲು ಮತ್ತು ದಸರಾ ಮಹೋತ್ಸವದ ವೈಭವವನ್ನು ಹೆಚ್ಚಿಸಲು ಶ್ರಮಿಸುವ ಸ್ಥಳೀಯ ಹಾಗೂ ಹೊರರಾಜ್ಯದ ಆಸಕ್ತರಿಗೆ ಇದೊಂದು ಸುವರ್ಣಾವಕಾಶವಾಗಿದೆ.

ಆಸಕ್ತರು ಸೆಪ್ಟೆಂಬರ್ 01 ರಿಂದ 16 ರವರೆಗೆ ಮೈಸೂರು ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರ ಕಚೇರಿಯಲ್ಲಿ ಅರ್ಜಿಗಳನ್ನು ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಸೆಪ್ಟೆಂಬರ್ 19 ರ ಸಂಜೆ 5:30 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಆಹಾರ ಮೇಳ ಉಪಸಮಿತಿಯ ಉಪ ವಿಶೇಷಾಧಿಕಾರಿ ವೀಣಾ ಬಿ. ಎನ್., ಕಾರ್ಯಾಧ್ಯಕ್ಷ ಜಿ. ಶ್ರೀನಿವಾಸಮೂರ್ತಿ ಅಥವಾ ಕಾರ್ಯದರ್ಶಿ ರವಿಕುಮಾರ್ ಕೆ. ಎಂ. ಅವರನ್ನು ಸಂಪರ್ಕಿಸಬಹುದು. ಸಾಫ್ಟ್ ಡ್ರಿಂಕ್ಸ್, ಐಸ್‌ಕ್ರೀಂ ಮತ್ತು ಮಿನರಲ್ ವಾಟರ್ ಪದಾರ್ಥಗಳಿಗೆ ಪ್ರಾಯೋಜಕತ್ವ ಇರುವುದರಿಂದ ಸದರಿ ಪದಾರ್ಥಗಳಿಗೆ ಅರ್ಜಿಗಳ ವಿತರಣೆ ಇರುವುದಿಲ್ಲ.

ಸಲ್ಲಿಕೆಯಾದ ಅರ್ಜಿಗಳನ್ನು ಖಾದ್ಯಗಳ ಆಧಾರದ ಮೇಲೆ ವಿಂಗಡಿಸಿ, ಸೆಪ್ಟಂಬರ್ 22 ರಂದು ಬೆಳಿಗ್ಗೆ 11:00 ಗಂಟೆಗೆ ಟೌನ್‌ಹಾಲ್‌ನಲ್ಲಿ ಲಾಟರಿ ಮುಖಾಂತರ ಮಳಿಗೆದಾರರನ್ನು ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಅರ್ಜಿದಾರರ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ನಿಗದಿತ ದಿನಾಂಕದೊಳಗೆ ಆಯ್ಕೆಯಾದವರು ಡಿ.ಡಿ ಸಲ್ಲಿಸಬೇಕು. ಡಿ.ಡಿ ನೀಡಲು ತಪ್ಪಿದಲ್ಲಿ ಇತರ ಅರ್ಜಿದಾರರಿಗೆ ಲಾಟರಿ ಮೂಲಕ ಅವಕಾಶ ಕಲ್ಪಿಸಲಾಗುವುದು ಎಂದು ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರು ಹಾಗೂ ಆಹಾರ ಮೇಳ ಉಪಸಮಿತಿಯ ಉಪ ವಿಶೇಷಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಸಪ್ಪ ರಾಜಕಾರಣಿಗಳಿಗೆ ಮಾದರಿ

## ಸುತ್ತೂರು ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ ಅಭಿಮತ

ಚಾಮರಾಜನಗರ: ಮಾಜಿ ಶಾಸಕ ದಿವಂಗತ ಎಂ.ಸಿ. ಬಸಪ್ಪ ಅವರು ರಾಜಕಾರಣಿಗಿಂತ ಹೆಚ್ಚಾಗಿ ಸಮಾಜ ಸೇವಕರಾಗಿ ತಮ್ಮನ್ನು ಗುರುತಿಸಿಕೊಂಡಿದ್ದರು. ಅವರ ಸರಳತೆ, ಸಜ್ಜನಿಕೆ ಹಾಗೂ ನಿಸ್ವಾರ್ಥ ಸೇವಾ ಬದುಕು ಇಂದಿನ ಯುವ ಪೀಳಿಗೆಯ ರಾಜಕಾರಣಿಗಳಿಗೆ ಸದಾ ದಾರಿದೀಪವಾಗಿದೆ ಎಂದು ಸುತ್ತೂರು ಶ್ರೀಕ್ಷೇತ್ರದ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು. ನಗರದ ಜೆಎಸ್‌ಎಸ್ ವಿಚಾರ ಸಂಕಿರಣ ಭವನದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಹಾಗೂ ಕದಳಿ ಮಹಿಳಾ ವೇದಿಕೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಮಾಜಿ ಶಾಸಕ ಎಂ.ಸಿ. ಬಸಪ್ಪ ಸಮಾಜ ಸೇವಾ ಪ್ರಶಸ್ತಿ ಪ್ರದಾನ ಹಾಗೂ ದತ್ತಿ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಶ್ರೀಮಂತ ಕುಟುಂಬದ ಹಿನ್ನೆಲೆಯಿದ್ದರೂ ಜನಸಾಮಾನ್ಯರಂತೆ ಸಾಮಾನ್ಯ ಸಾರಿಗೆ ಬಸ್ಗಳಲ್ಲಿ ಪ್ರಯಾಣಿಸುತ್ತಾ ಜನರ ಕಷ್ಟ-ಸುಖಗಳಿಗೆ ಸ್ಪಂದಿಸುತ್ತಿದ್ದ ಅಪರೂಪದ ಜನನಾಯಕ ಬಸಪ್ಪ ಅವರಾಗಿದ್ದರು ಎಂದು ಸ್ಮರಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ.ಕೆ. ರವಿಕುಮಾರ್, ಶರಣರ ತತ್ವ ಚಿಂತನೆಗಳನ್ನು ಮನೆಮನೆಗೆ ತಲುಪಿಸುವ ಕಾರ್ಯವನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಸಮಾರಂಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಾದ ನಾಗದೇವ್, ಚಂದನ್ ಹಾಗೂ ಮನೋಜ್ ಅವರನ್ನು ಸನ್ಮಾನಿಸಲಾಯಿತು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಿ. ಸೋಮಶೇಖರ್, ಸಾಹಿತಿ ಚಂದ್ರಶೇಖರಯ್ಯ, ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಪ್ರಮುಖರಾದ ವಿ. ಮಲ್ಲಿಕಾರ್ಜುನಸ್ವಾಮಿ, ಎಂ.ಬಿ. ಸೋಮಶೇಖರ್, ವಸಂತಮ್ಮ, ರಾಜೇಶ್ವರಿ, ಬಿ.ಎಸ್. ವಿನಯ್, ಅರುಣಶ್ರೀ, ಯೋಗೀಶ್, ಮಹದೇವಸ್ವಾಮಿ, ಎಂ.ಬಿ. ರೇವಣ್ಣ, ಸುಂದರ್ ಹಾಗೂ ಆರ್.ಎಸ್. ಲಿಂಗರಾಜು ಸೇರಿದಂತೆ ಹಲವು ಸಾಹಿತ್ಯಾಸಕ್ತರು ಉಪಸ್ಥಿತರಿದ್ದರು.

### ಸೇವೆಯ ಸ್ಮರಣೆ ಮತ್ತು ಪರಿಷತ್ ಭವನಕ್ಕೆ ನಿವೇಶನದ ಭರವಸೆ

ಪಡಗೂರು ಮಠದ ಶ್ರೀ ಶಿವಲಿಂಗೇಂದ್ರ ಸ್ವಾಮೀಜಿ ಮಾತನಾಡಿ, ಬಸಪ್ಪ ಅವರು ಅಸಂಖ್ಯಾತ ಜನರಿಗೆ ಉದ್ಯೋಗ ಹಾಗೂ ಆಶ್ರಯ ಕಲ್ಪಿಸಿ ಉಪಕಾರ ಮಾಡಿದ್ದು, ಅವರ ಸಹಾಯ ಪಡೆದವರೆಲ್ಲರೂ ಇಂದಿಗೂ ಅವರನ್ನು ಗೌರವದಿಂದ ನೆನೆಯುತ್ತಿದ್ದಾರೆ ಎಂದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೇಯಾ ರೂಪಾ, ಬಸಪ್ಪ ಅವರ ಜನಪರ ಆದರ್ಶಗಳು ಹಾಗೂ ಶರಣ ಸಾಹಿತ್ಯ ಪರಿಷತ್ತಿನ ಸಮಾಜಮುಖಿ ಚಟುವಟಿಕೆಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ಪರಿಷತ್ತಿನ ಕಾರ್ಯವೈಖರಿಗೆ ಪೂರಕವಾಗಿ ನಗರದಲ್ಲಿ ಸೂಕ್ತ ನಿವೇಶನ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.



### ಪರಿಸರವಾದಿ ದೊರೆಸ್ವಾಮಿ ಅವರಿಗೆ ಪ್ರಶಸ್ತಿ ಗೌರವ

ಗ್ರಾಮೀಣ ಭಾಗದ ಕೃಷಿಕರ ನಾಡಿಮಿಡಿತವನ್ನು ಬಲ್ಲವರಾಗಿದ್ದ ಬಸಪ್ಪ ಅವರು ಚಾಮರಾಜನಗರ ಭಾಗದಲ್ಲಿ ರೇಷ್ಮೆ ಕೃಷಿಯ ವಿಸ್ತರಣೆಗೆ ಅಪಾರ ಶ್ರಮ ವಹಿಸಿದ್ದರು. ವಿಧಾನ ಸಭೆಯ ಕಲಾಪದಲ್ಲಿ ರೇಷ್ಮೆ ಬೆಳೆಗಾರರ ಪರವಾಗಿ ಸುದೀರ್ಘ ಏಳು ಗಂಟೆಗಳ ಕಾಲ ಮಾತನಾಡಿ ಗಮನ ಸೆಳೆದಿದ್ದು ಅವರ ಕೃಷಿ ಪ್ರೀತಿಗೆ ನಿದರ್ಶನವಾಗಿದೆ ಎಂದು ಶ್ರೀಗಳು ಬಣ್ಣಿಸಿದರು. ಇದೇ ಸಂದರ್ಭದಲ್ಲಿ ಗಾಂಧಿವಾದಿ ಹಾಗೂ ಪರಿಸರ ಸಂರಕ್ಷಣೆಯಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಪುಣಜನೂರು ದೊರೆಸ್ವಾಮಿ ಅವರಿಗೆ ಎಂ.ಸಿ. ಬಸಪ್ಪ ಸಮಾಜ ಸೇವಾ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಹಾಗೂ ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಿಸುವ ಮೂಲಕ ಬಸಪ್ಪ ಅವರ ಕುಟುಂಬದವರು ಸಮಾಜಮುಖಿ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ ಎಂದರು.

## ವಿದ್ಯುತ್ ವ್ಯತ್ಯಯ

ಮೈಸೂರು: ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ 66/11 ಕೆ.ವಿಜಯಪುರ ವಿದ್ಯುತ್ ವಿತರಣಾಕೇಂದ್ರ ಹಾಗೂ 66/11 ಕೆ.ವಿ ಉದ್ಬೂರು ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ 2ನೇ ತ್ರೈಮಾಸಿಕ ನಿರ್ವಹಣಾ ಕೆಲಸದ ನಿಮಿತ್ತ 23 ರಂದು ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಜಯಪುರ ಗ್ರಾಮಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಮಾರ್ಬಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಗೋಪಾಲಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಉದ್ಬೂರು ಗ್ರಾಮಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಧನಗಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು, ಹಾರೋಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಗ್ರಾಮಗಳು ಹಾಗೂ 2. 66/11 ಕೆ.ವಿಉದ್ಬೂರು ವಿ.ವಿಕೇಂದ್ರದ ಪ್ರದೇಶಗಳು ಪ್ರದೇಶಗಳು:- ಧನಗಳ್ಳಿ, ಸಾಲುಂಡಿ, ಕೆಲ್ಲಹಳ್ಳಿ, ಉದ್ಬೂರು, ಟಿ ಕಾಟೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ

ಮಂಡಕಳ್ಳಿ, ಗೆಜ್ಜಗಳ್ಳಿ ಐ.ಪಿ ಪ್ರದೇಶ, ಸರ್ಕಾರಿ ಉತ್ತನಹಳ್ಳಿ ಗ್ರಾಮ, ಶ್ರೀನಗರ, ರೇಷ್ಮೆ ನಗರ, ಟೀರಸ್ ಕಾಲೋನಿ, ಮಹಾಲಕ್ಷ್ಮಿ ಬಡಾವಣೆ, ಆರ್.ಕೆ ಬಡಾವಣೆ, ಭವಾನಿ ಬಡಾವಣೆ, ವಿನಾಯಕ ಬಡಾವಣೆ, ಮಹಾಲಕ್ಷ್ಮಿ ?ಮದೃಷ್ಟಿ ಬಡಾವಣೆ, ಕೊಪ್ಪಲೂರು ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ನ.ರಾ. ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿನಾಂಕ 24-08-2026 ರಂದು ವಿದ್ಯುತ್ ವ್ಯತ್ಯಯವಾಗಲಿರುವ ಪ್ರದೇಶಗಳು: ಎಲೆತೋಟ ವೃತ್ತ, ಗೌರಿಶಂಕರನಗರ, ದತ್ತನಗರ, ಮುನೇಶ್ವರ ನಗರ, ಹೋಯ್ಸಳನಗರ, ಕನಕಗಿರಿ, ಗುಂಡುರಾವ್‌ನಗರ, ಭೂತಾಳೆ ಮೈದಾನ, ರಾಮಕೃಷ್ಣ ಆಸ್ಪತ್ರೆ ಸುತ್ತಾ-ಮುತ್ತ, ರಾಮಲಿಂಗೇಶ್ವರ ದೇವಸ್ಥಾನ ಸುತ್ತಾ-ಮುತ್ತಾ ಹಾಗೂ ಟೋಲ್‌ಗೇಟ್ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ನ.ರಾ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಕ್ರಮವಾಗಿ ಕೇರಳ ಲಾಟರಿ ಮಾರಾಟ ಮಾಡುತ್ತಿದ್ದವನ ಬಂಧನ

ಚಾಮರಾಜನಗರ: ಯಳಂದೂರು ಬಸ್ ನಿಲ್ದಾಣದಲ್ಲಿ ಅಕ್ರಮವಾಗಿ ಕೇರಳ ಲಾಟರಿ ಮಾರಾಟ ಮಾಡುತ್ತಿದ್ದವನನ್ನು ಪೊಲೀಸರು ಬಂಧಿಸಿ, ಕೇರಳ ಲಾಟರಿಯನ್ನು ವಶಪಡಿಸಿಕೊಂಡಿದ್ದಾರೆ.



ಯಳಂದೂರು ಎಲೆಕೇರಿ ಬೀದಿಯ ಶ್ರೀನಿವಾಸ ಬಂಧಿತ ಆರೋಪಿ. ಈತ ಯಳಂದೂರು ಬಸ್ ನಿಲ್ದಾಣದಲ್ಲಿ ಅಕ್ರಮವಾಗಿ ಕೇರಳ ಲಾಟರಿ ಟಿಕೆಟ್ ಗಳನ್ನು ಮಾರಾಟ ಮಾಡುತ್ತಿದ್ದನು. ಯಳಂದೂರು ಠಾಣೆಯ ಇನ್ಸ್ಪೆಕ್ಟರ್ ಸುಬ್ರಹ್ಮಣ್ಯ ಅವರಿಗೆ ದೊರೆತ ಮಾಹಿತಿಯ ಮೇರೆಗೆ ಗುರುವಾರ ದಾಳಿ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದುಕೊಂಡಿದ್ದಾರೆ.ದಾಳಿಯ ವೇಳೆ ಆರೋಪಿಯ ಬಳಿ ಇದ್ದ 4500 ರೂ, ಮೌಲ್ಯದ ಸುಮಾರು 90 ಲಾಟರಿ ಟಿಕೆಟ್ ಹಾಗೂ ಲಾಟರಿ ಮಾರಾಟ ಮಾಡಿ ಆತನ ಬಳಿ ಇದ್ದ 6960 ರೂ, ಹಣವನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಈ ಸಂಬಂಧ ಯಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬಿಜಿಎಸ್ ಪದವಿ ಪೂರ್ವ ಕಾಲೇಜಿನಲ್ಲಿ ಆಹಾರ ಮೇಳ

**ರಾಮನಗರ:** ನಗರದ ಹೊರವಲಯದಲ್ಲಿರುವ ಬಿಜಿಎಸ್ ವರ್ಲ್ಡ್ ಸ್ಕೂಲ್‌ನ ಆವರಣದಲ್ಲಿ ಆಹಾರ ಮೇಳ ಆಯೋಜನೆಯಾಗಿತ್ತು. ಕಾಲೇಜಿನ ಆಡಳಿತ ಮಂಡಳಿ ಈ ಮೇಳವನ್ನು ಆಯೊಜಿಸಿತ್ತು. ಪದವಿ ಪೂರ್ವ ವಿಭಾಗದ ವಾಣಿಜ್ಯ ತರಗತಿಗಳ ವಿದ್ಯಾರ್ಥಿಗಳು ಮೇಳದಲ್ಲಿ ಬಗೆಬಗೆಯ ತಿಂಡಿ ತಿನಿಸುಗಳನ್ನು ತಯಾರಿಸಿ, ಮಾರಾಟ ಮಾಡಿ ತಮ್ಮ ವ್ಯಾಪಾರ ಕೌಶಲವನ್ನು ಪ್ರದರ್ಶಿಸಿದರು.

ಆಹಾರ ಮೇಳವನ್ನು ಉದ್ಘಾಟಿಸಿದ ಕಾಲೇಜಿನ ಪ್ರಾಂಶುಪಾಲ ಎಂ.ಸಿ.ಸುರೇಶ್ ಮಾತನಾಡಿ, ಆಹಾರ ಮೇಳದಲ್ಲಿ ಭಾಗವಹಿಸುವುದರ ಮೂಲಕ ವಿದ್ಯಾರ್ಥಿಗಳು ಮಾರಾಟ ಕೌಶಲವನ್ನು ಅರ್ಥಮಾಡಿಕೊಂಡಿದ್ದಾರೆ. ಬಂಡವಾಳ ಹೂಡಿ, ಲಾಭ ಗಳಿಕೆ ಮಾಡಿದ್ದಾರೆ. ಇದರೊಟ್ಟಿಗೆ ಮಾರುಕಟ್ಟೆ ಜ್ಞಾನವನ್ನು ಸಂಪಾದಿಸಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಆಹಾರವನ್ನು ವ್ಯರ್ಥ ಮಾಡಬಾರದು ಎಂದು ಈ ವೇಳೆ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದ ಅವರು, ವಿದ್ಯಾರ್ಥಿಗಳು




ತಾವೇ ಸ್ವತಃ ತಯಾರಿಸಿದ ಬಗೆಬಗೆಯ ಸ್ವಾದಿಷ್ಟ, ಶುಚಿಯಾದ ಆಹಾರ ಪದಾರ್ಥಗಳನ್ನು ಸವಿದರು.ಎಲ್ಲರಿಗೂ ಸರ್ಕಾರಿ ಉದ್ಯೋಗ ಸಿಗುವುದು ಸಾಧ್ಯವಿಲ್ಲ. ಹೀಗಾಗಿ ವ್ಯಾಸಂಗದ ಮೂಲಕ ಗಳಿಸಿದ ಜ್ಞಾನವನ್ನು ಉಪಯೋಗಿಸಿಕೊಂಡು ಒಂಡವಾಳ ಹೂಡಿ ಸ್ವಯಂ ಉದ್ಯೋಗ ಸ್ಥಾಪಿಸಿ ಯಶಸ್ವಿಯಾಗಿ, ಸ್ವಾವಲಂಭೀ ಬದುಕು ಸಾಗಿಸಿ ಎಂದರು.

ಆಹಾರ ಮೇಳದಲ್ಲಿ ಎಳನೀರು ಮಾರಾಟವೂ ಇತ್ತು. 50 ವಿವಿಧ ಬಗೆಯ ತಿನಿಸುಗಳು ಗಮನ ಸೆಳೆಯಿತು. ಲಾಭಗಳಿಕೆಯಿಂದ ವಿದ್ಯಾರ್ಥಿಗಳು ಸಹ ಸಂತಸ ವ್ಯಕ್ತಪಡಿಸಿದುರ. ಬಿಜಿಎಸ್ ವರ್ಲ್ಡ್ ಶಾಲೆಯ ಪ್ರಾಂಶುಪಾಲರಾದ ಸುಮ ಕುಂಡೂರು, ಬೋಧಕರು ಹಾಗೂ ಬೋಧಕೇತರ ಸಿಬ್ಬಂದಿಗಳು ಈ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಸಲಹೆ

# ವಿಬಿಜಿ ರಾಮ್ ಜಿ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಿ

ಚಾಮರಾಜನಗರ: ಭಾರತ ಗ್ಯಾರಂಟಿ ಫಾರ್ ರೋಜಗಾರ್ ಮತ್ತು ಆಜೀವಿಕ ಮಿಷನ್(ಗ್ರಾಮೀಣ) ಯೋಜನೆಯಡಿ ಕೊಳ್ಳೇಗಾಲ ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಯ ಕ್ರಿಯಾ ಯೋಜನೆ ಅನುಮೋದನೆಗೊಂಡಿದ್ದು, ತಮ್ಮ ಗ್ರಾಮ ಪಂಚಾಯಿತಿಯಲ್ಲಿಯೇ ಕೂಲಿ ಕೆಲಸ ದೊರೆಯಲಿದ್ದು, ಎಲ್ಲರೂ ಸದುಪಯೋಗ ಪಡಿಸಿಕೊಳ್ಳುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ತಿಳಿಸಿದರು.

ಕೊಳ್ಳೇಗಾಲ ತಾಲೂಕಿನ ಸಿದ್ದಯ್ಯನಪುರ ಮತ್ತು ಮಧುವನಹಳ್ಳಿ ಗ್ರಾಮ ಪಂಚಾಯಿತಿಯ ಹೊಂಡರಬಾಳುವಿನಲ್ಲಿ ನಡೆಯುತ್ತಿರುವ ಕೆರೆ ಹಾಗೂ ಕಾಲುವೆ ಹೂಳೆತ್ತುವ ಕಾಮಗಾರಿಯನ್ನು ಪರಿಶೀಲಿಸಿದ ಜಿ.ಪಂ ಸಿಇಒ ಮೋನಾ ರೋತ್ ಅವರು ವಿಬಿ ಜಿ ರಾಮ್ ಜಿ ಯೋಜನೆಯಡಿ ದೊರೆಯುವ ಉದ್ಯೋಗಾವಕಾಶ ಹಾಗೂ ಸೌಲಭ್ಯಗಳ ಕುರಿತು ಕೂಲಿ ಕಾರ್ಮಿಕರಿಗೆ ಮಾಹಿತಿ ನೀಡಿದರು. ಬಳಿಕ ಕಾಯಕ ಬಂಧುಗಳ ಜೊತೆ ಸಂವಾದ ನಡೆಸಿ,



ಯೋಜನೆಯಡಿ ಕೈಗೊಳ್ಳಲಾಗುವ ವಿವಿಧ ಕಾಮಗಾರಿಗಳು, ಉದ್ಯೋಗದ ಅವಕಾಶಗಳು ಹಾಗೂ ಯೋಜನೆಯ ಪ್ರಯೋಜನಗಳ ಕುರಿತು ವಿವರಿಸಿದರು. ಕಡ್ಡಾಯ ಎನ್.ಎಂ.ಎಂ.ಎಸ್ ಹಾಜರಾತಿಗೆ ಸೂಚಿಸಿದರು.

ಜಿಲ್ಲೆಯಾದ್ಯಂತ ಸೆಪ್ಟಂಬರ್ 15ರ ವರೆಗೆ ಜಾಬ್ ಕಾರ್ಡ್ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಕೂಲಿಕಾರರು ಅಭಿಯಾನದಲ್ಲಿ ಭಾಗವಹಿಸಬೇಕು. ವಿಬಿ ಜಿ ರಾಮ್ ಜಿ ಯೋಜನೆಯಡಿ ಜಾಬ್ ಕಾರ್ಡ್ ಇಲ್ಲದವರು ಹೊಸ ಜಾಬ್ ಕಾರ್ಡ್ ಮಾಡಿಸಿಕೊಳ್ಳಬೇಕು. ಅಗತ್ಯವಿದ್ದರೆ ಜಾಬ್ ಕಾರ್ಡ್ ತಿದ್ದುಪಡಿ ಮಾಡಿಸಿಕೊಳ್ಳಬಹುದು. ಇ-ಕೆವೈಸಿ ನವೀಕರಣಕ್ಕೆ ಅವಕಾಶ ನೀಡಲಾಗಿದೆ ಎಂದರು. ತಾಲ್ಲೂಕು ಐ.ಇ.ಸಿ ಸಂಯೋಜಕರು, ಬಿ.ಎಫ್.ಟಿ, ಕಾಯಕ ಬಂಧುಗಳು ಮತ್ತು ಗ್ರಾಮ ಪಂಚಾಯಿತಿ ಸಿಬ್ಬಂದಿ ಮನೆ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಎಲ್ಲ ಕೂಲಿಕಾರರು ಸಹಕರಿಸಿ ಅಭಿಯಾನವನ್ನು ಯಶಸ್ವಿಗೊಳಿಸಬೇಕು. ಕೂಲಿ ಕೆಲಸಕ್ಕಾಗಿ ನಮೂನೆ 6 ನ್ನು ಭರ್ತಿ ಮಾಡಿ ಅರ್ಜಿ ಸಲ್ಲಿಸಿದರೆ ಯೋಜನೆಯಡಿ ಕೆಲಸ ಒದಗಿಸಲಾಗುವುದು ಎಂದು ಹೇಳಿದರು.

ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜನರಿಗೆ ಉದ್ಯೋಗ ಒದಗಿಸುವ ಮೂಲಕ ಜನರಿಗೆ ಆರ್ಥಿಕ ಹಾಗೂ ಜೀವನೋಪಾಯ ಭದ್ರತೆಯನ್ನು ಕಲ್ಪಿಸುವುದು, ಬರ ಪರಿಸ್ಥಿತಿ ಎದುರಿಸಲು ಜಲಸಂರಕ್ಷಣೆ, ಅಂತರ್ಜಲ ವೃದ್ದಿಸುವುದು, ದೀರ್ಘಕಾಲಿಕ ಜೀವನೋಪಾಯಕ್ಕೆ ನೆರವಾಗುವ ಕಾಮಗಾರಿಗಳಿಗೆ ಆದ್ಯತೆ ನೀಡಿ ಅನು?ಾ?ಠನಗೊಳಿಸುವುದು ಮತ್ತು ಸ್ಥಳೀಯವಾಗಿ ಉದ್ಯೋಗ ಕಲ್ಪಿಸುವ ಮೂಲಕ ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಡೆಯುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ.

ನಂತರ ಹೊಂಡರಬಾಳುವಿನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ನಿರ್ಮಾಣವಾಗಿರುವ ಶೌಚಾಲಯ ಮತ್ತು ಗ್ರಂಥಾಲಯಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಸಿದ್ದಯ್ಯನಪುರ ಗ್ರಾಮ ಪಂಚಾಯಿತಿ ಕಚೇರಿಗೆ ಭೇಟಿ ನೀಡಿ ತೆರಿಗೆ ವಸೂಲಾತಿ, ಓ.ಡಿ.ಎಫ್ ಪ್ಲಸ್ ತ್ವರಿತವಾಗಿ ಪ್ರಗತಿ ಮಾಡುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಕುಮಾರ್, ಸಹಾಯಕ ನಿರ್ದೇಶಕರಾದ ಸಂದೇಶ ಬಿ.ಕೆ, ಮಧುವನಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶೋಭರಾಣಿ, ಸಿದ್ಧಯ್ಯನಪುರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಜುನೇದ್ ಅಹಮದ್, ವಿಬಿ ಜಿ ರಾಮ್ ಜಿ ಯೋಜನೆಯ ಸಿಬ್ಬಂದಿ ಈ ಸಂದರ್ಭದಲ್ಲಿ ಹಾಜರಿದ್ದರು.

# ಎಸ್‌ಎಸ್‌ಎಲ್‌ಸಿ ಉತ್ತಮ ಫಲಿತಾಂಶಕ್ಕಾಗಿ ವಿದ್ಯಾರ್ಥಿವಾರು ಕ್ರಿಯಾ ಯೋಜನೆ ಸಿದ್ಧಪಡಿಸಿ

## ಜಿ.ಪಂ. ಸಿಇಒ ನಂದಿನಿ ಕೆ.ಆರ್ ಅವರು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚನೆ



**ಮಂಡ್ಯ:** ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ದಾಖಲಿಸುವ ನಿಟ್ಟಿನಲ್ಲಿ ವಿದ್ಯಾರ್ಥಿವಾರು ಕ್ರಿಯಾ ಯೋಜನೆ ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನಂದಿನಿ ಕೆ.ಆರ್ ಅವರು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್‌ನಲ್ಲಿ ಗುರುವಾರ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಸುಧಾರಣೆ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಳೆದ ಶೈಕ್ಷಣಿಕ ಸಾಲಿನಲ್ಲಿ ಮಂಡ್ಯ ಜಿಲ್ಲೆ ಶೇ.97.45ರಷ್ಟು ಫಲಿತಾಂಶ ದಾಖಲಿಸಿ ರಾಜ್ಯದಲ್ಲಿ 5ನೇ ಸ್ಥಾನ ಪಡೆದಿದೆ. ಪ್ರಸಕ್ತ ಸಾಲಿನಲ್ಲಿ ಈ ಸಾಧನೆಯನ್ನು ಮತ್ತಷ್ಟು ಉತ್ತಮಪಡಿಸಲು ಶಾಲಾ ಹಾಗೂ ತಾಲೂಕು ಹಂತದಲ್ಲಿ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು ಎಂದರು.

ಕಳೆದ ಸಾಲಿನಲ್ಲಿ ಫಲಿತಾಂಶ ಸುಧಾರಣೆಗೆ ಅನುಷ್ಠಾನಗೊಳಿಸಿದ್ದ ಕಾರ್ಯಕ್ರಮಗಳನ್ನು ಪ್ರಸಕ್ತ ಸಾಲಿನಲ್ಲಿಯೂ ಮುಂದುವರಿಸುವಂತೆ ಮುಖ್ಯ ಶಿಕ್ಷಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದ ಅವರು, ಜಿಲ್ಲಾ ಮತ್ತು ತಾಲೂಕು ಹಂತದಲ್ಲಿ ಈಗಾಗಲೇ ರೂಪಿಸಿರುವ ಕ್ರಿಯಾ ಯೋಜನೆಯಂತೆ ಬಾಕಿ ಉಳಿದಿರುವ ಶೈಕ್ಷಣಿಕ ಚಟುವಟಿಕೆಗಳನ್ನು ಅರ್ಥಪೂರ್ಣವಾಗಿ ಪೂರ್ಣಗೊಳಿಸಬೇಕು ಎಂದರು.

ಶೈಕ್ಷಣಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳನ್ನು ಗುರುತಿಸಿ ಬ್ರಿಡ್ಜ್ ಕೋರ್ಸ್ ಪ್ರಾರಂಭಿಸಿ: ಶೈಕ್ಷಣಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳನ್ನು ಗುರುತಿಸಿ, ಅವರ ಕಲಿಕಾ ಕೊರತೆಗಳನ್ನು ನಿವಾರಿಸಲು ಬ್ರಿಡ್ಜ್ ಕೋರ್ಸ್‌ಗಳನ್ನು ಪ್ರಾರಂಭಿಸಿ, ಮೂಲಭೂತ ಕಲಿಕಾ ಸಾಮರ್ಥ್ಯವನ್ನು ಬಲಪಡಿಸುವಂತೆ ಸೂಚಿಸಿದರು.

ಪ್ರತಿ ವಿದ್ಯಾರ್ಥಿಯ ಕಲಿಕಾ ಮಟ್ಟವನ್ನು ಆಧರಿಸಿ ಶಾಲಾ ಹಂತದಲ್ಲಿ ಪ್ರತ್ಯೇಕ ಕ್ರಿಯಾ ಯೋಜನೆ ರೂಪಿಸಬೇಕು. ಮುಖ್ಯ ಶಿಕ್ಷಕರು ವಿಷಯವಾರು ಸಹ ಶಿಕ್ಷಕರ ಸಹಕಾರದೊಂದಿಗೆ ಈಗಾಗಲೇ ನಡೆಸಿರುವ ಕಿರುಪರೀಕ್ಷೆಗಳ ಫಲಿತಾಂಶವನ್ನು ವಿಶ್ಲೇಷಿಸಿ, ವಿದ್ಯಾರ್ಥಿಯ ಕಲಿಕಾ ಸಾಮರ್ಥ್ಯ ಹಾಗೂ ಅಗತ್ಯತೆಗೆ ಅನುಗುಣವಾಗಿ ಮುಂದಿನ ಶೈಕ್ಷಣಿಕ ಚಟುವಟಿಕೆಗಳನ್ನು ರೂಪಿಸಬೇಕು ಎಂದು ಹೇಳಿದರು.

ವಿಶೇಷ ತರಗತಿಗಳನ್ನು ಪ್ರಾರಂಬಿಸಿ, ನವೆಂಬರ್ ಅಂತ್ಯಕ್ಕೆ ಪಠ್ಯಕ್ರಮ ಪೂರ್ಣಗೊಳಿಸಿ: ಕಲಿಕಾ ಕೊರತೆ ಹೊಂದಿರುವ ವಿದ್ಯಾರ್ಥಿಗಳನ್ನು ಗುರುತಿಸಿ, ಅವರಿಗೆ ವಿಶೇಷ ತರಗತಿಗಳನ್ನು ನಡೆಸಬೇಕು. ?ಕಲಿಕಾ ಮಿತ್ರ? ಚಟುವಟಿಕೆಗಳನ್ನು ಪ್ರತಿದಿನ ಅಭ್ಯಾಸ ಮಾಡಿಸುವ ಮೂಲಕ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯೂ ಕಲಿಕೆಯಲ್ಲಿ ಪ್ರಗತಿ ಸಾಧಿಸುವಂತೆ ನಿರಂತರ ಮೇಲ್ವಿಚಾರಣೆ ಹಾಗೂ ವೈಯಕ್ತಿಕ ಮಾರ್ಗದರ್ಶನ ನೀಡಬೇಕು ನವೆಂಬರ್ ಅಂತ್ಯಕ್ಕೆ ಪಠ್ಯಕ್ರಮ ಪೂರ್ಣಗೊಳಿಸಿ ಪುನರಾವರ್ತನೆ ತರಗತಿಗಳನ್ನು ಪ್ರಾರಂಭಿಸಬೇಕು ಎಂದು ಸಲಹೆ ನೀಡಿದರು.

ಮುಖ್ಯ ಶಿಕ್ಷಕರ ಸಭೆ: ಸೆಪ್ಟೆಂಬರ್ ಮೊದಲನೇ ವಾರದಲ್ಲಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಭೆ ಆಯೋಜಿಸಲಾಗುವುದು. ಸಭೆಗೆ ಆಗಮಿಸುವಾಗ ಪ್ರತಿಯೊಬ್ಬ ಮುಖ್ಯ ಶಿಕ್ಷಕರು ತಮ್ಮ ಶಾಲೆಯ ವಿದ್ಯಾರ್ಥಿವಾರು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಂಡು ಬಂದು, ಸಭೆಯಲ್ಲಿ ಪ್ರಸ್ತುತಪಡಿಸುವಂತೆ ಸೂಚಿಸಲಾಯಿತು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಯ ಗುರಿ ಸಾಧಿಸಲು ಶಾಲಾ ಹಂತದಿಂದಲೇ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ನಿರಂತರವಾಗಿ ಪರಿಶೀಲಿಸಿ, ಅಗತ್ಯ ಶೈಕ್ಷಣಿಕ ಬೆಂಬಲ ಒದಗಿಸುವ ಮೂಲಕ ಯಾವುದೇ ವಿದ್ಯಾರ್ಥಿ ಕಲಿಕೆಯಲ್ಲಿ ಹಿಂದುಳಿಯದಂತೆ ಕ್ರಮವಹಿಸಬೇಕು ಎಂದು ಸಿಇಒರವರು ಸೂಚಿಸಿದರು.

ಸಭೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ಡಿಡಿಪಿಐ ಬಸವರಾಜ್, ಡಯಟ್ ಪ್ರಾಂಶುಪಾಲರಾದ ಯೋಗೇಶ್, ಶಿಕ್ಷಣಾಧಿಕಾರಿ ಚಂದ್ರಕಾಂತ, ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳು ಹಾಜರಿದ್ದರು.

# ಚಾಮರಾಜನಗರ ಸಂಸದ ಸುನೀಲ್ ಬೋಸ್ ಮೃತರ ಕುಟುಂಬಗಳಿಗೆ ತಲಾ 1 ಲಕ್ಷ ರೂ. ಪರಿಹಾರ ವಿತರಣೆ

**ಹನೂರು :** ಕಾವೇರಿ ವನ್ಯಜೀವಿಧಾಮದ ಗುಂಡಿನ ದಾಳಿಯಲ್ಲಿ ಮೃತಪಟ್ಟ ಮೂವರು ಕುಟುಂಬಸ್ಥರ ಮನೆಗಳಿಗೆ ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರದ ಸಂಸದ ಸುನೀಲ್ ಬೋಸ್ ಭೇಟಿ ನೀಡಿ ಸಾಂತ್ವನ ಹೇಳಿದರು.

ಹನೂರು ತಾಲೂಕಿನ ತೋಮಿಯರ್ ಪಾಳ್ಯ, ಮರಿಯಮಂಗಲ ಮತ್ತು ಲಾಸರ್ ದೊಡ್ಡಿ ಗ್ರಾಮಗಳಿಗೆ ಭೇಟಿ ನೀಡಿದ ಸಂಸದರು ಮೃತ ಜಾನ್ ರೋಸ್ ಪೀಟರ್, ಸಬಸ್ಟಿಯನ್ ಡೇವಿಡ್ ಕುಮಾರ್ ಮತ್ತು ಆಂತೋಣಿ ಸ್ವಾಮಿ ಅವರ ಕುಟುಂಬಸ್ಥರನ್ನು ಭೇಟಿ ಮಾಡಿ ಅವರ ಕಷ್ಟಗಳನ್ನು ಆಲಿಸಿದರು.

ಈ ವೇಳೆ ಮೃತಪಟ್ಟ ಕುಟುಂಬಸ್ಥರಿಗೆ ವೈಯಕ್ತಿಕವಾಗಿ ತಲಾ 1 ಲಕ್ಷ ರೂ. ಪರಿಹಾರವನ್ನು ಸಂಸದ ಸುನೀಲ್ ಬೋಸ್ ನೀಡಿದರು.

ಕುಟುಂಬಸ್ಥರ ಅಳಲು ಕೇಳಿದ ಸಂಸದರು, ಈ ಘಟನೆಯ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗುವುದು. ಕುಟುಂಬಗಳಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಮಾಜಿ ಶಾಸಕ ಆರ್. ನರೇಂದ್ರ, ಚಾಮುಲ್ ನಿರ್ದೇಶಕ ಶಾಹುಲ್ ಅಹಮದ್,ಕಾಂಗ್ರೆಸ್ ಜಿಲ್ಲಾ ವಕ್ತಾರ ಮಧುವನಹಳ್ಳಿ ಶಿವಕುಮಾರ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕೊಪ್ಪಳಿ ಮಹದೇವ ನಾಯಕ, ಮುಖಂಡರಾದ ಮಂಗಲ ಪುಟ್ಟರಾಜು ಚೇತನ್ ದೊರೆರಾಜು, ಯುವ ಕಾಂಗ್ರೆಸ್ ಅಧ್ಯಕ್ಷ ಮಾದೇಶ್, ಸಂಜಯ್, ಸೇರಿದಂತೆ ಇನ್ನಿತರರು ಹಾಜರಿದ್ದರು.



# ತಂಬಾಕು ಮುಕ್ತ ಮೈಸೂರಿಗೆ ಅಭಿಯಾನಕ್ಕೆ ಚಾಲನೆ




**ಮೈಸೂರು:** ಸಾಂಸ್ಕೃತಿಕ ನಗರಿ ಮೈಸೂರನ್ನು ಸಂಪೂರ್ಣ ತಂಬಾಕು ಮುಕ್ತಗೊಳಿಸುವ ಬೃಹತ್ ಆಶಯದೊಂದಿಗೆ ಭಾರತ್ ಆಸ್ಪತ್ರೆ ಮತ್ತು ಕ್ಯಾನ್ಸರ್ ಸಂಸ್ಥೆ ಮೀಟರ್ ಆನ್, ತಂಬಾಕು ಆಫ್ ಎಂಬ ವಿನೂತನ ಜಾಗೃತಿ ಆಂದೋಲನಕ್ಕೆ ಚಾಲನೆ ನೀಡಿತು.

ಸಂಸ್ಥೆಯ ಅಧ್ಯಕ್ಷ ಹಾಗೂ ಹಿರಿಯ ಕ್ಯಾನ್ಸರ್ ತಜ್ಞ ಡಾ.ಬಿ.ಎಸ್.ಅಜಯ್ ಕುಮಾರ್ ದೂರದೃಷ್ಟಿಯ ಪರಿಕಲ್ಪನೆಯಲ್ಲಿ ಈ ಸಾಮಾಜಿಕ ಜಾಗೃತಿ ಕಾರ್ಯಕ್ರಮ ರೂಪುಗೊಂಡಿದೆ. ಕ್ಯಾನ್ಸರ್ ಚಿಕಿತ್ಸೆಗೆ ಮಾತ್ರ ಸೀಮಿತವಾಗದೆ, ರೋಗ ತಡೆಗಟ್ಟುವಿಕೆ ಮತ್ತು ಮುನ್ನೆಚ್ಚರಿಕೆ ವಹಿಸುವ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಈ ಅಭಿಯಾನದ ಪ್ರಮುಖ ಉದ್ದೇಶವಾಗಿದೆ. ಈ ಜಾಗೃತಿ ಅಭಿಯಾನದ ಭಾಗವಾಗಿ ನಗರದ 100ಕ್ಕೂ ಹೆಚ್ಚು ಆಟೋ ಚಾಲಕರು ತಂಬಾಕು ಮುಕ್ತ ಮೈಸೂರು ಆಂದೋಲನದ ರಾಯಭಾರಿಗಳಾಗಿ ಕಾರ್ಯಾಚರಿಸಲಿದ್ದಾರೆ. ಪ್ರತಿನಿತ್ಯ ಸಾವಿರಾರು ಪ್ರಯಾಣಿಕರೊಂದಿಗೆ ಸಂಪರ್ಕ ಹೊಂದುವ ಆಟೋಗಳನ್ನು ಸಂಚಾರಿ ವೇದಿಕೆಗಳನ್ನಾಗಿ ಬಳಸಿಕೊಳ್ಳಲಾಗುತ್ತಿದ್ದು, ಚಾಲಕರು ತಂಬಾಕಿನ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ನೇರವಾಗಿ ಜಾಗೃತಿ ಮೂಡಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯ ವೈದ್ಯಕೀಯ ಆಂಕೊಲಾಜಿಸ್ಟ್ ಡಾ.ಸಿ.ಬಿ.ಅವಿನಾಶ್, ಆಸ್ಪತ್ರೆಗೆ ಬರುವ ಶೇ.33ರಷ್ಟು ಕ್ಯಾನ್ಸರ್ ಪ್ರಕರಣಗಳಿಗೆ ತಂಬಾಕು ಸೇವನೆಯೇ ನೇರ ಕಾರಣವಾಗಿದ್ದು, ಬೀಡಿ, ಸಿಗರೇಟ್, ಗುಟ್ಕಾ ಮುಂತಾದ ಯಾವುದೇ ರೂಪದ ತಂಬಾಕೂ ಅತ್ಯಂತ ಅಪಾಯಕಾರಿ ಎಂದರು. ಹಿರಿಯ ರೇಡಿಯೇಷನ್ ಆಂಕೊಲಾಜಿಸ್ಟ್ ಡಾ. ವಿನಯ್ಕುಮಾರ್ ಮುಟ್ಟಗಿ ಮಾತನಾಡಿ, ತಂಬಾಕು 20ಕ್ಕೂ ಹೆಚ್ಚು ವಿಧದ ಕ್ಯಾನ್ಸರ್ಗಳಿಗೆ ಕಾರಣವಾಗಿದ್ದು, ಮುಂದಿನ 10 ವರ್ಷಗಳಲ್ಲಿ ತಂಬಾಕು ಮುಕ್ತ ಸಮಾಜ ನಿರ್ಮಿಸಲು ಆಟೋ ಚಾಲಕರು ಪ್ರಯಾಣಿಕರಲ್ಲಿ ಅರಿವು ಮೂಡಿಸುವ ಮೂಲಕ ಈ ಆರೋಗ್ಯ ಸಂದೇಶದ ಸಾರಥಿಗಳಾಗಬೇಕು ಎಂದು ಕರೆ ನೀಡಿದರು. ಮೆಡಿಕಲ್ ಮತ್ತು ಹೆಮಟೊ ಆಂಕೊಲಾಜಿಸ್ಟ್ ಹಾಗೂ ಮೂಳೆ ಮಜ್ಜೆ ಕಸಿ ತಜ್ಞ ಡಾ.ಸಂತೋಷ್ ಕುಮಾರ್, ಹಿರಿಯ ಸರ್ಜಿಕಲ್ ಆಂಕೊಲಾಜಿಸ್ಟ್ ಹಾಗೂ ರೋಬೋಟಿಕ್ ಸರ್ಜನ್ ಡಾ.ವಿಜಯ್ ಕುಮಾರ್, ಬಿಎಚ್‌ಐಒ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೌತಮ್ ಧರ್ಮೇರ್ಲ ಮಾತನಾಡಿದರು.

# ರಂಗಭೂಮಿ ಪ್ರಬಲ ಮಾಧ್ಯಮ: ಸುಗುಣ

**ಮೈಸೂರು:** ರಂಗಭೂಮಿ ಹಾಗೂ ಸಂಸ್ಕೃತಿ ಕೇವಲ ಮನರಂಜನೆಯ ಸಾಧನಗಳಲ್ಲ. ಅವು ಪ್ರತಿಯೊಬ್ಬ ಮಾನವನ ಅಂತರಂಗದ ಅಭಿವ್ಯಕ್ತಿಗೆ ವೇದಿಕೆಯಾಗಿದ್ದು, ಸಮಾಜವನ್ನು ಅರ್ಥಮಾಡಿಕೊಳ್ಳಲು ಹಾಗೂ ನಮ್ಮ ಆಲೋಚನೆಗಳ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ಪ್ರಮುಖ ಮಾಧ್ಯಮಗಳಾಗಿವೆ ಎಂದು ನಿರಂತರ ಸಂಸ್ಥೆಯ ಅಧ್ಯಕ್ಷ ಸುಗುಣ ಅಭಿಪ್ರಾಯಪಟ್ಟರು.

ಕಾಲೇಜಿನ ಇಂಗ್ಲಿಷ್ ವಿಭಾಗ ಹಾಗೂ ನಿರಂತರ ಫೌಂಡೇಶನ್ ಸಹಯೋಗದಲ್ಲಿ ಆಯೋಜಿಸಿರುವ 25 ದಿನಗಳ ರಂಗತರಬೇತಿ ಕಾರ್ಯಾಗಾರವನ್ನು ಉದ್ದೇಶಿಸಿ ಅವರು ಮಾತನಾಡಿದರು. ನಾವು ನಿಮ್ಮ ವಯಸ್ಸಿನಲ್ಲಿದ್ದಾಗ ಬದುಕನ್ನು ಬೆರಗುಗಣ್ಣಿನಿಂದ ನೋಡುತ್ತಾ, ನಮ್ಮ ಬದುಕು ಮತ್ತು ಸಮಾಜದ ಕುರಿತು ಮೂಡಿದ ಅನೇಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನದಲ್ಲಿ ನಿರಂತರಸಂಸ್ಥೆಯನ್ನು ಆರಂಭಿಸಿದೆವು. ಸುಮಾರು 30?35 ವರ್ಷಗಳ ಸುದೀರ್ಘ ಪಯಣದ ಬಳಿಕ ಇಂದು ನಿಮ್ಮ ಕಾಲೇಜಿನಲ್ಲಿ ಈ ಕಾರ್ಯಕ್ರಮ ನಡೆಯುತ್ತಿರುವುದು ಸಂತಸದ ಸಂಗತಿ. ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಬಹುತೇಕ ಹಾಡು, ನೃತ್ಯ ಮತ್ತು ಮನರಂಜನೆಗೆ ಸೀಮಿತಗೊಳಿಸಲಾಗುತ್ತಿದೆ. ಆದರೆ ನಿಜವಾದ ಸಂಸ್ಕೃತಿ ಎಂದರೆ ನಮ್ಮ ಬದುಕು, ಸಮಾಜ ಮತ್ತು ಅದರ ವೈವಿಧ್ಯತೆಯನ್ನು ಗೌರವಿಸುವುದಾಗಿದೆ ಎಂದು ಹೇಳಿದರು.

ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ನಿರ್ದೇಶಕ ಡಾ.ಸಿಸ್ಟರ್ ಪ್ರಫುಲ್ಲಾ ಮಾತನಾಡಿದರು. ವಿವೇಕ್ ಚಾರ್ಲ್ಸ್, ಚೇತನ್, ರಂಗ ನಿರ್ದೇಶಕ ಯೋಗಾನಂದ್, ರಾಣಿ, ಶ್ರೀನಿವಾಸ್ ಪಾಲಹಳ್ಳಿ, ನಿರಂತರ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳಾದ ಶಿರಾ ಸೋಮಶೇಖರ್, ರಾಜೇಶ್ ಹೆಬ್ಬಾರ್, ಡಾ. ಗುರುಪ್ರಸಾದ್, ಹಿಮ, ಆಕರ್ಷ್ ಕುಮಾರ್, ಕೌಶಿಕ್ ಕುಮಾರ್, ಕೆಂಪರಾಜ್ ನಿರಂತರ, ಸಹಾಯಕ ಪ್ರಾಧ್ಯಾಪಕಿ ಯಶಸ್ವಿನಿ ಇತರರು ಉಪಸ್ಥಿತರಿದ್ದರು.

# ವೃದ್ಧಾಶ್ರಮ, ಅನಾಥಾಶ್ರಮ ಉದ್ಘಾಟನೆ

**ಮೈಸೂರು:** ಅನಾಥ ಹಿರಿಯ ನಾಗರಿಕರು ಹಾಗೂ ಅನಾಥ ಮಕ್ಕಳಿಗೆ ಉಚಿತವಾಗಿ ಆಶ್ರಯ ನೀಡುವ ವೃದ್ಧಾಶ್ರಮ ಮತ್ತು ಅನಾಥಾಶ್ರಮವನ್ನು ಜೆಪಿ ನಗರದಲ್ಲಿ ಪರಿವರ್ತನಮ್ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಉದ್ಘಾಟಿಸಲಾಯಿತು. ಡಿಜಿಟಲ್ಪತ್ರಿಕೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಅಧ್ಯಕ್ಷ ಎಚ್.ಎನ್.ಶ್ರೀಧರ್ ಮೂರ್ತಿ, ಪರಿವರ್ತನಮ್ ಟ್ರಸ್ಟ್ ಸುಮಾರು ಹದಿನೈದು ವರ್ಷಗಳಿಂದ ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡು ಸೇವೆ ಮಾಡುತ್ತಾ ಬಂದಿದೆ. ಇದೀಗ ನಿರಾಶ್ರಿತರಿಗೆ ಊಟ ಮತ್ತು ವಸತಿ ನೀಡುವ ಸದುದ್ದೇಶದಿಂದ ಜೆಪಿ ನಗರದಲ್ಲಿ ವೃದ್ಧಾಶ್ರಮ ಮತ್ತು ಅನಾಥಾಶ್ರಮ ಪ್ರಾರಂಭಿಸಿರುವುದು ಶ್ಲಾಘನೀಯ ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ವಿವಿಧ ಸಮಾರಂಭಗಳಲ್ಲಿ ಉಳಿಯುವ ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಹಸಿದವರಿಗೆ ನೀಡುವ ಕಾರ್ಯಕ್ರಮವನ್ನು ಸಹ ಪರಿವರ್ತನಮ್ ಟ್ರಸ್ಟ್ ಕೈಗೆತ್ತಿಕೊಂಡಲ್ಲಿ ನಾವೂ ಕೈಜೋಡಿಸುತ್ತೇವೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕರಾದ ವೀಣಾ, ಸಿ.ಎಸ್.ರಘು, ವಿಕ್ರಂ ಅಯ್ಯಂಗಾರ್, ಪರಿವರ್ತನಮ್ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್ ಪದಾಧಿಕಾರಿಗಳಾದ ವಿನಯ್ ಕಣಗಾಲ್, ಪವನ್, ರಾಕೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ವಿಶೇಷ ಸಾಮಾನ್ಯ ಸಭೆಯಲ್ಲಿ ಸದಸ್ಯರು ನಿರ್ಣಯ ನಗರಸಭೆ ವ್ಯಾಪ್ತಿಗೆ ಪಿಡಬ್ಲ್ಯುಡಿ ರಸ್ತೆಗಳ ಹಸ್ತಾಂತರ



**ರಾಮನಗರ:** ನಗರಸಭಾ ವ್ಯಾಪ್ತಿಯಲ್ಲಿ ಪಿಡಬ್ಲ್ಯುಡಿ ನಿರ್ವಹಣೆಯಲ್ಲಿರುವ ಪ್ರಮುಖ ರಸ್ತೆಗಳನ್ನು ನಗರಸಭೆಗೆ ಹಸ್ತಾಂತರಿಸಿಕೊಳ್ಳಲು ವಿಶೇಷ ಸಾಮಾನ್ಯ ಸಭೆಯಲ್ಲಿ ಸದಸ್ಯರು ನಿರ್ಣಯ ಕೈಗೊಂಡರು.

ನಗರಸಭೆಯ ಪ್ರಶಸ್ತಿ ಭವನದಲ್ಲಿ ನಡೆದ ಸಭೆಯಲ್ಲಿ ಅಧ್ಯಕ್ಷ ಕೆ. ಶೇಷಾದ್ರಿ ವಿಷಯ ಮಂಡಿಸಿ, ಸದಸ್ಯರ ಒಪ್ಪಿಗೆ ಪಡೆದರು. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಕೆಂಪೇಗೌಡ ವೃತ್ತದ ಮೂಲಕ ನಗರಸಭೆ ಗಡಿಯವರೆಗೆ, ಕೆಂಪೇಗೌಡ ವೃತ್ತದಿಂದ ಚೆನ್ನೇನಹಳ್ಳಿವರೆಗೆ, ಅರ್ಚಕರಹಳ್ಳಿ ಮಹದೇಶ್ವರಸ್ವಾಮಿ ದೇವಾಲಯದ ಬಳಿಯಿಂದ ದೊಡ್ಡಮಣ್ಣುಗುಡ್ಡೆ ಮುಖ್ಯರಸ್ತೆವರೆಗೆ ಹಾಗೂ ನಗರ ವ್ಯಾಪ್ತಿಯ ಬೆಂಗಳೂರು–ಮೈಸೂರು ಹೆದ್ದಾರಿ ಪಿಡಬ್ಲ್ಯುಡಿ ಇಲಾಖೆಯ ನಿರ್ವಹಣೆಯಲ್ಲಿವೆ. ಆದರೆ ಈ ರಸ್ತೆಗಳಿಗೆ ಸ್ವಚ್ಛತೆ, ಪ್ಯಾಚ್‌ವರ್ಕ್ ಸೇರಿದಂತೆ ಹಲವು ನಿರ್ವಹಣಾ ಕಾರ್ಯಗಳನ್ನು ನಗರಸಭೆಯೇ ಮಾಡುತ್ತಿದೆ. ಹೀಗಾಗಿ ರಸ್ತೆಗಳ ಅಭಿವೃದ್ಧಿ ಹಾಗೂ ಸಮರ್ಪಕ ನಿರ್ವಹಣೆಗಾಗಿ ನಗರಸಭೆಗೆ ಹಸ್ತಾಂತರಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.

ಪ್ರತಿಪಕ್ಷದ ನಾಯಕ ಮಂಜುನಾಥ್ ಮಾತನಾಡಿ, ರಸ್ತೆಗಳ ಹಸ್ತಾಂತರ ಪ್ರಕ್ರಿಯೆ ಹಿಂದೆಯೇ ಆಗಬೇಕಿತ್ತು. ಪಿಡಬ್ಲ್ಯುಡಿ ರಸ್ತೆಗಳ ದುರಸ್ತಿಯ ವೇಳೆ ಮ್ಯಾನ್‌ಹೋಲ್‌ಗಳನ್ನು ಮುಚ್ಚಿರುವುದರಿಂದ ಚರಂಡಿ ನೀರು ಮನೆಗಳಿಗೆ ಹಿಮ್ಮುಖವಾಗಿ ಹರಿಯುತ್ತಿದೆ. ಜನರಿಗೆ ರಸ್ತೆ ಯಾರ ನಿರ್ವಹಣೆಯಲ್ಲಿದೆ ಎಂಬುದು ತಿಳಿಯದೆ ನಗರಸಭೆಯನ್ನೇ ದೂರುತ್ತಿದ್ದಾರೆ. ರಸ್ತೆಗಳು ನಗರಸಭೆ ವ್ಯಾಪ್ತಿಗೆ ಬಂದರೆ ಸಮರ್ಪಕ ನಿರ್ವಹಣೆ ಸಾಧ್ಯವಾಗಲಿದೆ ಎಂದರು.



ಸದಸ್ಯ ಸೋಮಶೇಖರ್ (ಮಣಿ) ಮಾತನಾಡಿ, ಗಾಂಧಿನಗರದ ಬಳಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ರಸ್ತೆ ಉಬ್ಬುಗಳ ಅಗತ್ಯವಿದೆ. ಈ ಕುರಿತು ಪಿಡಬ್ಲ್ಯುಡಿ ಅಧಿಕಾರಿಗಳ ಗಮನಕ್ಕೆ ತಂದರೂ ಕ್ರಮವಾಗಿಲ್ಲ. ರೈಲು ನಿಲ್ದಾಣದ ಬಳಿಯ ಮುಖ್ಯರಸ್ತೆಯನ್ನು ಹಿಂದೆ ಕಾಂಕ್ರೀಟ್ ರಸ್ತೆಯಾಗಿ ಅಭಿವೃದ್ಧಿಪಡಿಸಲಾಗಿತ್ತು. ಇದೀಗ ಅದು ಹಾಳಾಗಿದೆ. ರಸ್ತೆಗಳು ನಗರಸಭೆ ವ್ಯಾಪ್ತಿಗೆ ಬಂದರೆ ಅಗತ್ಯ ದುರಸ್ತಿ ಕೈಗೊಳ್ಳಬಹುದು ಎಂದರು.

**ಆಸ್ತಿ ಸಮೀಕ್ಷೆಗೆ ಒಪ್ಪಿಗೆ:** ನಗರಸಭೆ ವ್ಯಾಪ್ತಿಯ ಖಾಸಗಿ ಆಸ್ತಿಗಳು ಹಾಗೂ ಖಾಲಿ ನಿವೇಶನಗಳ ಸಮೀಕ್ಷೆ ನಡೆಸಿ ನಿಖರ ಮಾಹಿತಿ ಸಂಗ್ರಹಿಸಲು ಏಜೆನ್ಸಿಯೊಂದಕ್ಕೆ ಗುತ್ತಿಗೆ ನೀಡುವ ಪ್ರಸ್ತಾವನೆಗೂ ಸದಸ್ಯರು ಒಪ್ಪಿಗೆ ಸೂಚಿಸಿದರು.

ಆಯುಕ್ತ ಡಾ.ಜಯಣ್ಣ ಮಾತನಾಡಿ, ನಗರಸಭೆ ವ್ಯಾಪ್ತಿಯಲ್ಲಿ ಸುಮಾರು 33 ಸಾವಿರ ಆಸ್ತಿಗಳಿವೆ. ಕಳೆದ 10 ವರ್ಷಗಳಲ್ಲಿ ಹೊಸ ಬಡಾವಣೆಗಳು ನಿರ್ಮಾಣವಾಗಿದ್ದು, ಕೆಲವು ವಸತಿ ನಿವೇಶನಗಳು ವಾಣಿಜ್ಯ ಬಳಕೆಗೆ ಪರಿವರ್ತನೆಯಾಗಿರಬಹುದು. ಹೆಚ್ಚುವರಿ ಮಹಡಿಗಳ ನಿರ್ಮಾಣವೂ ನಡೆದಿರಬಹುದು. ಹೀಗಾಗಿ ಸಮಗ್ರ ಸಮೀಕ್ಷೆ ಅಗತ್ಯವಾಗಿದೆ. ಪ್ರಸ್ತುತ ಸುಮಾರು ರೂ.6.80 ಕೋಟಿ ಕಂದಾಯ ಸಂಗ್ರಹವಾಗುತ್ತಿದ್ದು, ಸಮೀಕ್ಷೆಯ ಬಳಿಕ ಕಂದಾಯ ಸಂಗ್ರಹ ರೂ.10 ಕೋಟಿಗೆ ಏರಿಕೆಯಾಗುವ ಸಾಧ್ಯತೆ ಇದೆ ಎಂದರು.

ನಗರಸಭೆಯ ಎಲ್ಲ ಕಡತಗಳನ್ನು ಗಣಕೀಕರಿಸುವ ಪ್ರಸ್ತಾವನೆಗೂ ಸದಸ್ಯರು ಒಪ್ಪಿಗೆ ಸೂಚಿಸಿದರು. ಸಭೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಮೊಹಮ್ಮದ್ ಆರಿಫ್ ಉಪಸ್ಥಿತರಿದ್ದರು.

# ಡಿ.ದೇವರಾಜ ಅರಸು ಅವರ 111ನೇ ಜನ್ಮ ದಿನಾಚರಣೆ ಕಾರ್ಯಕ್ರಮ

**ಪಿರಿಯಾಪಟ್ಟಣ:** ಡಿ.ದೇವರಾಜ್ ಅರಸು ಅವರು ಕೊಟ್ಟ ಕೊಡುಗೆ ಅಪಾರವಾದದ್ದು ಎಂದು ಉಪನ್ಯಾಸಕ ಲಕ್ಷ್ಮಿ ಕಾಂತ್ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಡಿ.ದೇವರಾಜ್ ಅರಸು ಕಲಾಭವನದಲ್ಲಿ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಡಿ.ದೇವರಾಜ ಅರಸು ಅವರ 111ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದರು.

ಡಿ.ದೇವರಾಜ ಅರಸು ರವರ ರಾಜಕೀಯ ಯುಗವು ರಾಜ್ಯದಲ್ಲಿ ಆಡಳಿತ ಸುವರ್ಣ ಯುಗವಾಗಿತ್ತು. ಭೂ ಸುಧಾರಣಾ ಕಾಯ್ದೆ ಜಾರಿಗೊಳಿಸಿ ಬಡವರಿಗೆ ಜಮೀನು ಒದಗುವಂತೆ ಮಾಡಿದ್ದಾರೆ. ಕಾರ್ಮಿಕರ ಅಭಿವೃದ್ಧಿಗೆ ಸವಲತ್ತು ನೀಡಿದರು. ಸಮಾಜದಲ್ಲಿದ್ದ ಅನಿಷ್ಟ ಪದ್ಧತಿಯಾದ ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು ರದ್ದುಗೊಳಿಸಿದರು. ಇದರೊಂದಿಗೆ ಜೀತ ಪದ್ಧತಿ ನಿರ್ಮೂಲನೆಗೆ ಅಡಿಪಾಯ ಹಾಕಿದ್ದರು.

ಇಷ್ಟಲ್ಲದೆ ಜಾತಿ ನಿಂದನೆ ವಿರೋಧಿ ಕಾಯ್ದೆ, ಬಡವರಿಗೆ ಪಡಿತರ ಪದಾರ್ಥ ವಿತರಣೆಗೆ ನ್ಯಾಯ ಬೆಲೆ ಅಂಗಡಿ, ಗರೀಬಿ ಹಟಾವೋ, ಕೂಲಿಗಾಗಿ ಕಾಳು ಯೋಜನೆ, ನಿರ್ಗತಿಕರಿಗೆ ವಸತಿ, ನಿವೇಶನ ಹಂಚಿಕೆ, ಸಾಲದಿಂದ ಮುಕ್ತಿ ಹೊಂದಲು ಋಣಭಾರ ಕಾಯ್ದೆ ಜಾರಿ ಮಾಡಿದರು ಮತ್ತು ಹಾವನೂರು ವರದಿ ಜಾರಿಗೊಳಿಸಿ ಹಿಂದುಳಿದ ವರ್ಗಗಳಿಗೆ ಶೇ.27 ಮೀಸಲಾತಿ ನೀಡಿ ಸಾಮಾಜಿಕ ಸಮಾನತೆ ನೀಡಿದರು. ವಿದ್ಯಾರ್ಥಿಗಳಿಗೆ 518 ವಿದ್ಯಾರ್ಥಿನಿಲಯಗಳನ್ನು ತೆರೆದರು. ಭಾಗ್ಯ ಜ್ಯೋತಿ ಮೂಲಕ ಉಚಿತ ವಿದ್ಯುತ್ ಯೋಜನೆ ಜಾರಿಗೊಳಿಸಿದರು. ವೃದ್ಧರಿಗೆ ವೃದ್ಧಾಪ್ಯ ವೇತನ, ವಿದ್ಯಾರ್ಥಿ ವೇತನ, ಅಂಗವಿಕಲ ವೇತನ ನೀಡಿ ಶೋಷಿತರ, ನೊಂದವರ ಪರವಾಗಿ ಅನೇಕ ಯೋಜನೆ ಜಾರಿ ಮಾಡಿ ನೊಂದವರ ಪರವಾಗಿ ಶ್ರಮಿಸಿದ್ದಾರೆ. ಅರಸು ಅವರು ಮೈಸೂರು ರಾಜ್ಯವನ್ನು ಕರ್ನಾಟಕ ರಾಜ್ಯ ಎಂದು ನಾಮಕರಣ ಮಾಡುತ್ತಾರೆ. ತುರ್ತು ಪರಿಸ್ಥಿತಿ ಜಾರಿಯಾದ ಕಾರಣ ಇಂದಿರಾ ಗಾಂಧಿಯವರು ರಾಯರೇಲಿಯಲ್ಲಿ ಸೋಲು ಅನುಭವಿಸಿದರು;

ಆದರೆ ಇವರನ್ನು ಚಿಕ್ಕಮಗಳೂರು ಕ್ಷೇತ್ರದಿಂದ ನಿಲ್ಲಿಸಿ ಅರಸು ರವರು ಗೆಲ್ಲಿಸುತ್ತಾರೆ. ರಾಜಕೀಯದ ಕೊನೆಘಟ್ಟದಲ್ಲಿ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಅರಸು ರವರು ಅಧಿಕಾರ ಕಳೆದುಕೊಳ್ಳುತ್ತಾರೆ. ಆದರೆ ಅವರ ಆಡಳಿತ, ಸಾಮಾಜಿಕ ಸುಧಾರಣೆ ಇಂದಿಗೂ ಶಾಶ್ವತವಾಗಿದೆ. ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತೀನ್ ವೆಂಕಟೇಶ್ ಮಾತನಾಡಿ, ಅರಸು ರವರು ಬಡತನ ನಿರ್ಮೂಲನೆಗೆ ಪಣ ತೊಟ್ಟಿದ್ದರು. ಇದಕ್ಕಾಗಿ ಮಾಡಿದ ಕಾನೂನುಗಳು ಯಶಸ್ವಿಯಾಗಿವೆ. ಎಲ್ಲರ ಅಭಿವೃದ್ಧಿಯೇ ಅಧಿಕಾರದ ಧ್ಯೇಯವೆಂದು ನಂಬಿ ಆಡಳಿತ ನಡೆಸಿದರು. ಅದರಿಂದ ಇವರ ಸ್ಮರಣೆ ಅತ್ಯಮೂಲ್ಯ ಎಂದರು.

ಕಾರ್ಯಕ್ರಮದಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಗ್ರೇಡ್–2 ತಹಸೀಲ್ದಾರ್ ಶ್ರೀನಿವಾಸ್, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಈಚೂರು ಲೋಕೇಶ್, ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ರಾಜಣ್ಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಹೊಸಳ್ಳಿ ಕೃಷ್ಣಗೌಡ, ವಕೀಲರಾದ ದೇವರಾಜ್ ಅರಸ್, ಆಹಾರ ಇಲಾಖೆ ಶಿರಸ್ತೇದಾರ್ ಸ್ವಾಮೀಗೌಡ, ಎಇಇ ಯೋಗಾನಂದ, ಸಿಡಿಪಿಒ ವೀಣಾ, ಮುಖಂಡರಾದ ಪಿ.ಎಸ್. ವಿಶಕಂಠಯ್ಯ, ರವಿ ಪಿ.ಎಸ್., ಪಿ.ಮಾದೇವ್, ವಿಜಯ್ ದೇವರಾಜೇ ಅರಸ್, ಅರವಿಂದ್ ರಾಜೇ ಅರಸ್, ಲಕ್ಷ್ಮೀನಾರಾಯಣ್, ಆರ್.ಎಸ್. ಮಾದೇವ್, ಸಣ್ಣಸ್ವಾಮಿ ಸೇರಿದಂತೆ ಇತರರಿದ್ದರು.



# 24 ಗಂಟೆಗಳು ಸಾಲದ ಇಂದಿನ ದಿನಗಳು

ಪ್ರತಿದಿನ ಬೆಳಿಗ್ಗೆ ನಮಗಿಂತ ಮುಂಚೆಯೇ ಜಾಗೃತಗೊಳ್ಳುವುದು ನಮ್ಮ ಸ್ಮಾರ್ಟ್ ಫೋನ್. ಕಣ್ಣುಜ್ಜುತ್ತಾ ಸ್ಕ್ರೀನ್ ನೋಡಿದರೆ, ಯಾರೋ ಐಸ್ ಬಾತ್ ಮುಗಿಸಿ, ಗಿಡಗಳಿಗೆ ನೀರು ಹಾಕಿ, ಧ್ಯಾನದ ಪೋಸ್ಟ್ ಹಾಕಿರುತ್ತಾರೆ. ನಮಗೆ ಎದ್ದ ತಕ್ಷಣ ಸಿಗುವುದು 'ಇಂದಿನ ನಿಮ್ಮ ಟಾಸ್ಕ್ ಮುಗಿದಿಲ್ಲ' ಎಂಬ ಅಪರಾಧಿ ಭಾವನೆಯ ನೋಟಿಫಿಕೇಶನ್. ಅಲ್ಲಿಂದಲೇ ನಮ್ಮ ದಿನದ ಮೊದಲ ಒತ್ತಡ ಶುರುವಾಗುತ್ತದೆ.

ಇಂದಿನ ನಗರ ಜೀವನದಲ್ಲಿ ಆರೋಗ್ಯಕರವಾಗಿ, ಶಿಸ್ತುಬದ್ಧವಾಗಿ ಮತ್ತು ಸಂತೋಷದಿಂದ ಬದುಕಬೇಕು ಎಂಬ ಆಸೆ ಎಲ್ಲರಿಗೂ ಇದೆ. ಆದರೆ ಅದಕ್ಕಾಗಿ ನಮಗೆ ನೀಡಲಾಗುವ ಸಲಹೆಗಳನ್ನು ಒಂದೊಂದಾಗಿ ಪಾಲಿಸಲು ಆರಂಭಿಸಿದರೆ, ದಿನದ 24 ಗಂಟೆಗಳು ಸಾಲುವುದೇ ಇಲ್ಲ ಎಂಬುದು ಒಂದು ವಿಚಿತ್ರ ಸತ್ಯ.

ಬೆಳಗ್ಗೆ ಬೇಗ ಏಳಬೇಕು. ಸಾಕಷ್ಟು ನಿದ್ರೆ ಮಾಡಬೇಕು. ವ್ಯಾಯಾಮ ಮಾಡಬೇಕು. ಯೋಗ ಅಥವಾ ಧ್ಯಾನ ಮಾಡಬೇಕು. ಕನಿಷ್ಠ ಹತ್ತು ಸಾವಿರ ಹೆಜ್ಜೆ ನಡೆಯಬೇಕು. ಆರೋಗ್ಯಕರ ಆಹಾರ ಸೇವಿಸಬೇಕು. ಮೊಬೈಲ್ ಬಳಕೆ ಕಡಿಮೆ ಮಾಡಬೇಕು. ಕುಟುಂಬದೊಂದಿಗೆ ಸಮಯ ಕಳೆಯಬೇಕು. ಸ್ನೇಹಿತರನ್ನು ಭೇಟಿಯಾಗಬೇಕು. ಕೆಲಸದಲ್ಲಿ ಉತ್ತಮ ಸಾಧನೆ ಮಾಡಬೇಕು. ಹೀಗೆ ನೂರೆಂಟು ಪುಕ್ಕಟೆ ಸಲಹೆಗಳು ದಿನವಿಡೀ ಬರ್ತಾನೆ ಇರ್ತವೆ .

ಇವೆಲ್ಲವೂ ಒಳ್ಳೆಯ ಸಲಹೆಗಳೇ. ಸಮಸ್ಯೆ ಸಲಹೆಗಳಲ್ಲಿ ಇಲ್ಲ. ಅವುಗಳನ್ನೆಲ್ಲ ಒಂದೇ ದಿನದಲ್ಲಿ ಪರಿಪೂರ್ಣವಾಗಿ ಅನುಸರಿಸಬೇಕೆಂಬ ನಮ್ಮ ಧಾವಂತದಲ್ಲಿದೆ.

ಒಂದು ದಿನದ ಲೆಕ್ಕಾಚಾರ

ಒಬ್ಬ ನಗರವಾಸಿಯ ದಿನವನ್ನು ಕಲ್ಪಿಸಿಕೊಳ್ಳಿ. ಕೆಲಸಕ್ಕೆ ಬೇಕಾಗುವ ಸಮಯ ಒಂದು ದೊಡ್ಡ ಭಾಗವನ್ನು ತೆಗೆದುಕೊಳ್ಳುತ್ತದೆ. ಅದಕ್ಕೆ ಪ್ರಯಾಣದ ಸಮಯ ಸೇರಿಸಬೇಕು. ಆರೋಗ್ಯಕ್ಕಾಗಿ ವ್ಯಾಯಾಮ, ಯೋಗ ಅಥವಾ ನಡಿಗೆಗೆ ಸಮಯ ಬೇಕು.

ನಂತರ ಕನಿಷ್ಠ ಏಳು ಅಥವಾ ಎಂಟು ಗಂಟೆಗಳ ನಿದ್ರೆ. ಊಟವನ್ನು ನಿಧಾನವಾಗಿ, ಗಮನಕೊಟ್ಟು ಮಾಡಬೇಕು. ಕುಟುಂಬದವರೊಂದಿಗೆ ಮಾತನಾಡಬೇಕು. ಸ್ನೇಹಿತರನ್ನು ಸಂಪರ್ಕಿಸಬೇಕು. ಮನೆಗೆ ಸಂಬಂಧಿಸಿದ ಕೆಲಸಗಳನ್ನು ನೋಡಿಕೊಳ್ಳಬೇಕು.

ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳಿಗೆ ಹೋಗುವ ಸಮಯವನ್ನು ಕಡಿಮೆ ಮಾಡಬೇಕು ಎಂದು ಹೇಳಲಾಗುತ್ತದೆ. ಆದರೆ ಅದೇ ಮೊಬೈಲ್‌ನಲ್ಲಿ ಕೆಲಸದ ಸಂದೇಶಗಳು, ಕುಟುಂಬದ ಸಂಪರ್ಕ, ಸ್ನೇಹಿತರ ಮಾತುಕತೆ ಮತ್ತು ನಮ್ಮ ಆಸಕ್ತಿಯ ವಿಷಯಗಳೂ ಇರುತ್ತವೆ.

ಇವೆಲ್ಲವನ್ನೂ ಸೇರಿಸುತ್ತಾ ಹೋದರೆ, ದಿನದ 24 ಗಂಟೆಗಳಲ್ಲಿ ಇನ್ನೂ ಕೆಲವು ಗಂಟೆಗಳು ಬೇಕಾಗುವಂತೆ ಕಾಣುತ್ತದೆ.




ಇದು ನಿಜವಾದ ಗಣಿತವಲ್ಲ. ಆದರೆ ನಮ್ಮ ಜೀವನದ ಒಂದು ಸಣ್ಣ ವಿರೋಧಾಭಾಸವನ್ನು ಚೆನ್ನಾಗಿ ತೋರಿಸುವ ಗಣಿತ. ಪರಿಪೂರ್ಣ ಜೀವನದ ಒತ್ತಡ ಇಂದು ಸಾಮಾಜಿಕ ಜಾಲತಾಣಗಳು ನಮ್ಮ ಮುಂದೆ ಒಂದು ರೀತಿಯ ಪರಿಪೂರ್ಣ ಜೀವನದ ಚಿತ್ರವನ್ನು ಇಡುತ್ತಿವೆ.

ಯಾರೋ ಬೆಳಗಿನ ಜಾವ ಎದ್ದು ಓಡುತ್ತಾರೆ. ಇನ್ನೊಬ್ಬರು ಪ್ರತಿದಿನ ಧ್ಯಾನ ಮಾಡುತ್ತಾರೆ. ಮತ್ತೊಬ್ಬರು ಆರೋಗ್ಯಕರ ಆಹಾರದ ಚಿತ್ರಗಳನ್ನು ಹಂಚಿಕೊಳ್ಳುತ್ತಾರೆ. ಇನ್ನೊಬ್ಬರು ತಮ್ಮ ಕೆಲಸದ ಯಶಸ್ಸಿನ ಕಥೆ ಹೇಳುತ್ತಾರೆ.

ಇವೆಲ್ಲವನ್ನೂ ನೋಡುತ್ತಾ, ನಮ್ಮ ಜೀವನದಲ್ಲಿ ಏನೋ ಕೊರತೆಯಿದೆ ಎಂಬ ಭಾವನೆ ಮೂಡಬಹುದು.

ಆದರೆ ಸಾಮಾಜಿಕ ಜಾಲತಾಣದಲ್ಲಿ ಕಾಣಿಸುವುದು ಒಂದು ವ್ಯಕ್ತಿಯ ಜೀವನದ ಆಯ್ದ ಕೆಲವು ಕ್ಷಣಗಳು ಮಾತ್ರ. ಅವರ ಸಂಪೂರ್ಣ ದಿನಚರಿ ಅಲ್ಲ. ಇದನ್ನು ಮರೆಯಬಾರದು. ಎಲ್ಲವನ್ನೂ ಮಾಡಬೇಕಿಲ್ಲ, ಮಾಡಲು ಸಾಧ್ಯವೂ ಇಲ್ಲ . ಆರೋಗ್ಯದ ಬಗ್ಗೆ ಕಾಳಜಿ ಇರಬೇಕು. ಉತ್ತಮ ಆಹಾರ ಸೇವಿಸಬೇಕು. ಸಾಕಷ್ಟು ನಿದ್ರೆ ಮಾಡಬೇಕು. ದೈಹಿಕ ಚಟುವಟಿಕೆಗೆ ಸಮಯ ಕೊಡಬೇಕು. ಕುಟುಂಬ ಮತ್ತು ಸ್ನೇಹಿತರೊಂದಿಗೆ ಸಂಬಂಧಗಳನ್ನು ಉಳಿಸಿಕೊಳ್ಳಬೇಕು.

ಆದರೆ ಪ್ರತಿಯೊಂದು ಸಲಹೆಯನ್ನೂ ಪ್ರತಿದಿನ ಸಂಪೂರ್ಣವಾಗಿ ಪಾಲಿಸಲೇಬೇಕು ಎಂಬ ನಿಯಮವೇನೂ ಇಲ್ಲ.

ಜೀವನ ಒಂದು ಯೋಜನಾ ಪಟ್ಟಿಯಲ್ಲ. ಅದರಲ್ಲಿ ಅನಿರೀಕ್ಷಿತ ಘಟನೆಗಳಿರುತ್ತವೆ. ಕೆಲ ದಿನ ಕೆಲಸ ಹೆಚ್ಚು ಇರಬಹುದು. ಕೆಲ ದಿನ ವಿಶ್ರಾಂತಿ ಬೇಕಾಗಬಹುದು. ಕೆಲ ದಿನ ವ್ಯಾಯಾಮ ಸಾಧ್ಯವಾಗುವುದಿಲ್ಲ. ಮತ್ತೊಂದು ದಿನ ಸ್ನೇಹಿತನೊಂದಿಗೆ ಒಂದು ಗಂಟೆ ಮಾತನಾಡುವುದು ನಮಗೆ ಹೆಚ್ಚು ಅಗತ್ಯವಾಗಬಹುದು.ಅದು ಜೀವನದ ವೈಫಲ್ಯವಲ್ಲ.

ಸಮಯಕ್ಕಿಂತ ನೆಮ್ಮದಿ: ನಾವು ಸಮಯ ನಿರ್ವಹಣೆಯ ಬಗ್ಗೆ ಸಾಕಷ್ಟು ಮಾತನಾಡುತ್ತೇವೆ. ದಿನವನ್ನು ಹೇಗೆ ಹೆಚ್ಚು ಪರಿಣಾಮಕಾರಿಯಾಗಿ ಬಳಸಬೇಕು ಎಂಬುದರ ಬಗ್ಗೆ ಅನೇಕ ಸಲಹೆಗಳನ್ನು ಪಡೆಯುತ್ತೇವೆ. ಆದರೆ ಇನ್ನೊಂದು ಪ್ರಶ್ನೆಯನ್ನೂ ಕೇಳಿಕೊಳ್ಳಬೇಕಾಗಿದೆ.

ನಮ್ಮ ದಿನದ ಪ್ರತಿಯೊಂದು ನಿಮಿಷವನ್ನೂ ಉಪಯುಕ್ತವಾಗಿಸುವ ಪ್ರಯತ್ನದಲ್ಲಿ, ನಾವು ನೆಮ್ಮದಿಯಿಂದ ಬದುಕುವ ಸಮಯವನ್ನೇ ಕಳೆದುಕೊಳ್ಳುತ್ತಿದ್ದೇವೆಯೇ?

ಕೆಲವೊಮ್ಮೆ ಯಾವುದೇ ಗುರಿಯಿಲ್ಲದೆ ಕುಳಿತು ಒಂದು ಕಪ್ ಚಹಾ ಕುಡಿಯುವುದು ಕೂಡ ಅಗತ್ಯ.

ಮನೆಯವರೊಂದಿಗೆ ಸುಮ್ಮನೆ ಮಾತನಾಡುವುದು, ಕಿಟಕಿಯಾಚೆಗಿನ ಮಳೆಯನ್ನು ನೋಡುವುದು, ಪುಸ್ತಕದ ಕೆಲವು ಪುಟಗಳನ್ನು ಓದುವುದು ಅಥವಾ ಯಾವುದೇ ಕೆಲಸವಿಲ್ಲದೆ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆಯುವುದು ಕೂಡ ಬದುಕಿನ ಭಾಗವೇ.

ಸ್ಮಾರ್ಟ್ ವಾಚ್ Move ಎಂದು ನೆನಪಿಸಬಹುದು. ಮೊಬೈಲ್ Time to stand ಎಂದು ಹೇಳಬಹುದು. ಆದರೆ ನಮ್ಮ ಮನಸ್ಸಿಗೆ ಕೆಲವೊಮ್ಮೆ ಸ್ವಲ್ಪ ಹೊತ್ತು ಸುಮ್ಮನಿರು ಎಂಬ ಸಂದೇಶವೂ ಬೇಕಾಗುತ್ತದೆ.

ಪರಿಪೂರ್ಣ ಜೀವನವನ್ನು ನಡೆಸುವುದು ನಮ್ಮ ಗುರಿಯಾಗಬೇಕಿಲ್ಲ. ಸಾಧ್ಯವಾದಷ್ಟು ಆರೋಗ್ಯಕರವಾಗಿ, ಸಂಬಂಧಗಳನ್ನು ಕಾಪಾಡಿಕೊಂಡು, ನಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿ, ಮನಸ್ಸಿಗೆ ನೆಮ್ಮದಿ ನೀಡುವ ರೀತಿಯಲ್ಲಿ ಬದುಕುವುದು ಸಾಕು. ದಿನಕ್ಕೆ 24 ಗಂಟೆಗಳೇ ಇವೆ. ಆ 24 ಗಂಟೆಗಳನ್ನು ಇನ್ನಷ್ಟು ತುಂಬಿಸುವುದಕ್ಕಿಂತ, ಅವುಗಳಲ್ಲಿ ನಮಗೆ ನಿಜವಾಗಿಯೂ ಮುಖ್ಯವಾದದ್ದನ್ನು ಗುರುತಿಸುವುದು ಬಹುಶಃ ಉತ್ತಮ ಜೀವನ ನಿರ್ವಹಣೆ.

ಸಮಯ ನಿರ್ವಹಣೆ ಮುಖ್ಯ. ಆದರೆ ಅದಕ್ಕಿಂತ ಮುಖ್ಯವಾದುದು ನೆಮ್ಮದಿ ನಿರ್ವಹಣೆ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# ಸಾವಿಗೆ ಬ್ರೇಕ್ ಹಾಕುವ ರಹಸ್ಯ ನಿಮಗೇ ಗೊತ್ತಾ?



ಸಾವು ತಪ್ಪಿಸಲು ಸಾಧ್ಯವಿಲ್ಲ. ಆದರೆ ಆರೋಗ್ಯವಾಗಿ ಬದುಕುವ ಕಾಲವನ್ನು ನಾವೇ ಹೆಚ್ಚಿಸಿಕೊಳ್ಳಬಹುದು.ನಮ್ಮ ದೇಹದ ಪ್ರತಿ ಜೀವಕೋಶದ ತುದಿಯಲ್ಲಿ ಚಿಕ್ಕ ರಕ್ಷಾಕವಚವಿದೆ. ಇದಕ್ಕೆ ಟೆಲೋಮಿಯರ್ ಎನ್ನುತ್ತಾರೆ. ಅತಿಯಾದ ಟೆನ್ಷನ್,ರಾತ್ರಿ ನಿದ್ದೆ ಇಲ್ಲದಿರುವುದು,ಕೆಟ್ಟ ಆಹಾರ ಈ ರಕ್ಷಾಕವಚವನ್ನು ಬೇಗ ಸವೆಸುತ್ತದೆ. ಆಗಲೇ ನಾವು ಬೇಗ ಮುದುಕರಾಗುತ್ತೇವೆ. ಹೊಸ ಸಂಶೋಧನೆ ಹೇಳುವುದು ಇದನ್ನೇ ನಮ್ಮ ದಿನಚರಿ ಬದಲಿಸಿದರೆ ದೇಹದ ವಯಸ್ಸಿನ ಗಡಿಯಾರವನ್ನು ನಿಧಾನ ಮಾಡಬಹುದು.

ಆರೋಗ್ಯ ಎಂದರೆ ಕೇವಲ ಆಸ್ಪತ್ರೆ ಮತ್ತು ಮಾತ್ರೆ ಅಲ್ಲ. ಅದು ಒಳ್ಳೆಯ ಜನರ ಜೊತೆಗೂಡಿದ ಬದುಕು. ಜಪಾನ್‌ನ ಒಕಿನಾವಾ ಗ್ರಾಮದಲ್ಲಿ ನೂರು ವರ್ಷದ ಅಜ್ಜಿಯರೂ ತೋಟದಲ್ಲಿ ಕೆಲಸ ಮಾಡುತ್ತಾರೆ. ಅವರ ಗುಟ್ಟು ಏನು? ಒಟ್ಟಿಗೆ ಊಟ ಮಾಡುವುದು, ನಗುವುದು, ಪರರಿಗೆ ಸಹಾಯ ಮಾಡುವುದು. ವಿಜ್ಞಾನಿಗಳು ಹೇಳುತ್ತಾರೆ, ಒಂಟಿಯಾಗಿರುವುದು ದಿನಕ್ಕೆ 15 ಸಿಗರೇಟ್ ಸೇದಿದಷ್ಟೇ ಅಪಾಯಕಾರಿ.ಪ್ರೀತಿ ಮತ್ತು ಮಾತುಕತೆ ನಮ್ಮ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

ಹಾಗಾದರೆ ಏನು ಮಾಡಬೇಕು? ಮೊದಲು ತಟ್ಟೆ ಬದಲಿಸಿ ಅಂದರೆ ಪ್ಯಾಕೆಟ್ ತಿಂಡಿ ಬಿಟ್ಟು ರಾಗಿ, ಅಕ್ಕಿ, ಮೊಸರು, ಸೊಪ್ಪನ್ನು ಆಹಾರದಲ್ಲಿ ಬಳಸಿ. ದಿನಕ್ಕೆ 20 ನಿಮಿಷ ಬಿಸಿಲಿನಲ್ಲಿ ನಡೆಯಿರಿ. ವಾರಕ್ಕೆ ಮೂರು ಬಾರಿ

ಅಂಕಣ 01

ಸಾವು ಸಂಕಟಪಡುವ ಸಂಗತಿಗಳು..!



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಬೆವರು ಬರುವಂತೆ ಆಟವಾಡಿ. ರಾತ್ರಿ 10ಕ್ಕೆ ಮೊಬೈಲ್ ದೂರ ಸರಿಸಿ, 10 ನಿಮಿಷ ಆಳವಾಗಿ ಉಸಿರಾಡಿ.

ಮಾತ್ರೆಗಿಂತ ಮುನ್ನೆಚ್ಚರಿಕೆ ದೊಡ್ಡ ಔಷಧ. ದೇಹವನ್ನು ದೇವಸ್ಥಾನದಂತೆ ನೋಡಿಕೊಂಡರೆ ಆರೋಗ್ಯವೇ ನಮಗೆ ಕೊಡುವ ಅಜರಾಮರ ವರ.

# ಮರೆಯಲಾಗದ ಮಾಣಿಕ್ಯ ಇವರು ತಂದೆ – ತಾಯಿ– ಗುರುಗಳು



| ವಿನ್ಯಾಸ್ ಕುಲಾಲ್ ಪಡಂಗಡಿ

ನಮಸ್ಕಾರ ಬಂಧುಗಳೇ ಒಂದು ಬೀಜ ಮಣ್ಣಿಗೆ ಬಿದ್ದು ಮೊಳಕೆಯೊಡೆದು ಗಿಡವಾಗಿ ಮರವಾಗಿ ಬೆಳೆದು ಇತರರಿಗೆ ನೆರಳಾಗಿ ,ಪ್ರಾಣಿ ಪಕ್ಷಿ ಮನುಷ್ಯನಿಗೆ ಆಹಾರವನ್ನು ನೀಡುತ್ತಾ ಸುಂದರ ಪ್ರಕೃತಿಯನ್ನು ಸೃಷ್ಟಿಸಿ ಕಣ್ಣಿಗೆ ಮುದವನ್ನು ನೀಡುತ್ತಾ ತನ್ನ ಬದುಕನ್ನು ಹೇಗೆ ನಿರ್ವಿಘ್ನವಾಗಿ ಬದುಕುತ್ತದೆಯೋ ಹಾಗೆಯೇ ,

ಒಂದು ಮಗು ಭೂಮಿಗೆ ಜನ್ಮವನ್ನು ಪಡೆದು ಅದಕ್ಕೆ ಬುದ್ಧಿ ತಿಳಿದ ಕ್ಷಣದಿಂದ ಕೊನೆಯ ಕ್ಷಣದವರೆಗೂ ಗುರುವಾಗಿ , ಸ್ನೇಹಿತೆಯಾಗಿ , ಜೊತೆಗಿದ್ದು ತಂದೆ ಒಟ್ಟಿಗೆ ನಿಂತು ಒಟ್ಟಿಗೆ ಹೆಜ್ಜೆ ಹಾಕುತ್ತ ಮಗುವಿನ ವಿದ್ಯಾಭ್ಯಾಸದ ಕಡೆಗೂ ಗಮನಹರಿಸುತ್ತ ಉತ್ತಮ ವ್ಯಕ್ತಿತ್ವ ನಡೆ–ನುಡಿಗಳನ್ನು ಕಲಿಸುತ್ತ ಜೀವನದಲ್ಲಿ ಬಂದಂತಹ ಎಲ್ಲಾ ಸಮಸ್ಯೆಗಳನ್ನು ಎದುರಿಸುತ್ತ ಬದುಕನ್ನು ಹೇಗೆ ಬದುಕಬೇಕೆಂಬುದನ್ನು ತಿಳಿಸುವುದರಲ್ಲಿ ತಂದೆ ತಾಯಿ ಗುರುಗಳ ಪಾತ್ರ ಅತ್ಯಂತ ಮಹತ್ವವಾದದ್ದು.

ಅಂಗನವಾಡಿ ಪ್ರಾಥಮಿಕ ಪ್ರೌಢಶಾಲೆ ಪದವಿ ಕಾಲೇಜುಗಳು ಹೀಗೆ ಹತ್ತು ಹಲವು ಪಾಠಶಾಲೆಗಳು ಇದ್ದರೂ ಮನೆ ಮೊದಲ ಪಾಠಶಾಲೆ ತಾಯಿ ಮೊದಲ ಗುರು ಎಂಬ ಹಿರಿಯರ ಮಾತಿನಂತೆ ಜೀವನದಲ್ಲಿ ಇರುವ ಕೊನೆಯ ಕ್ಷಣದವರೆಗೂ ವಿದ್ಯಾಭ್ಯಾಸ ನಿಲ್ಲುವಂಥದ್ದಲ್ಲ ಇದು ನೀರಿನಲ್ಲಿ ಹೆಚ್ಚಿದಷ್ಟು ನಡೆ–ನುಡಿ ವಿನಯತೆ ಎಲ್ಲಾ ಸದ್ಗುಣಗಳು ಮೈಗೂಡುತ್ತದೆ ಜವಾಬ್ದಾರಿ ಪ್ರೀತಿ ವಿಶ್ವಾಸ ನಂಬಿಕೆ ಎಂದರೇನು ಎಂದು ಭೋದಿಸಿದರೆ ನಮ್ಮ ಶಾಲಾ–ಕಾಲೇಜಿನಲ್ಲಿ ಇರುವಂತಹ ಗುರುಗಳು ಇದನ್ನೆಲ್ಲವನ್ನು ಕೇವಲ ಶಾಲಾ ಕಾಲೇಜುಗಳಲ್ಲಿ ಸಿಗುವ ನಾಲ್ಕು ಐದು ಗಂಟೆಗಳಲ್ಲಿ ಜೊತೆ ಜೊತೆಗೆ ಕಳಿಸಿಕೊಡುತ್ತಾರೆ ನನ್ನ ಮಗ ಅಥವಾ ಮಗಳು ಒಳ್ಳೆಯದಾಗಬೇಕು ಎಂದು ತಂದೆ ತಾಯಿಗಳು ಬಯಸುತ್ತಾರೆ ನಿಜ ಹಾಗೆಯೇ ನಮ್ಮ ಗುರುವೃಂದದವರು ಕೂಡ ನನ್ನ ವಿದ್ಯಾರ್ಥಿ/ನಿ ಒಳ್ಳೆಯದಾಗಬೇಕು, ಉತ್ತಮವಾದ ಹಾದಿಯಲ್ಲಿ ನಡೆದು ತಮ್ಮ ಬದುಕನ್ನು ಸುಂದರವಾದ ರೀತಿಯಲ್ಲಿ ಜೀವಿಸಬೇಕು ಎಂಬ ಮಹಾಭಿಲಾಷೆ ಅವರದು , ಅದಕ್ಕಾಗಿ ಕೆಲವು ಗುರುಗಳು ಊರನ್ನು ಬಿಟ್ಟು "ವೃತ್ತಿಯೇ ದೇವರು" ಎಂದು ತನ್ನ ಕರ್ತವ್ಯ ತನ್ನ ಪುಣ್ಯ ಎಂಬ ಭಾವನೆಯೊಂದಿಗೆ ಊರಿಂದ ಊರಿಗೆ ವರ್ಗಾವಣೆಯಾಗುತ್ತಾರೆ. ಹೀಗೆ ಹೇಳುವಾಗ ನನಗೊಂದು ಘಟನೆ ನೆನಪಿಗೆ ಬರುತ್ತದೆ. ನಾನು ಓದಿದ ಪ್ರಾಥಮಿಕ ಶಾಲೆಯಲ್ಲಿ ಒಬ್ರು ಮೇಷ್ಟ್ರು ಇದ್ರು ಬಹಳ ಒಳ್ಳೆಯವರು ಒಳ್ಳೆಯ ಮಾರ್ಗದರ್ಶಕರಾಗಿ ನನ್ನನ್ನು ತಿದ್ದಿ ಬುದ್ದಿಯನ್ನು ಹೇಳಿದ್ದಾರೆ ಇವರು ಒಂದು ದಿನ ಮರದ ಸ್ಕೇಲ್ ಇದರಲ್ಲಿ ಕಾಲಿಗೆ ಹೊಡೆದಿದ್ದರು ಅದು ಕೆಂಪಾಗಿತ್ತು , ಈಗಲೂ ನೆನಪಿದೆ.

ಇನ್ನೂ ನಾನು ಓದಿದ ಪ್ರೌಢಶಾಲೆಯಲ್ಲಿ ಇಂಗ್ಲಿಷ್ ವಿಷಯಕ್ಕೆ ಒಬ್ರು ಮೇಡಂ ಇದ್ರು ಅವರು ನಾವು ಹತ್ತನೇ ತರಗತಿಯಲ್ಲಿರುವಾಗ ಬೆಳಗ್ಗೆ 8:30 ರಿಂದ 9:30ರವರೆಗೆ ಇಂಗ್ಲಿಷ್ ವಿಷಯದಲ್ಲಿ ಪರೀಕ್ಷೆ ಗಳನ್ನು ನಡೆಸುತ್ತಿದ್ದರು , ಮತ್ತು ಸಂಜೆ 4:00ಯಿಂದ 5 ಗಂಟೆ ವರೆಗೆ ಪುನ: ಪುನರಾವರ್ತನೆಯ ತರಗತಿಗಳನ್ನು ನಡೆಸುತ್ತಿದ್ದರು . ಇದು ನಮ್ಮ ಹತ್ತನೇ ತರಗತಿಯಲ್ಲಿ ದಿನಚರಿಯಾಗಿತ್ತು.

ಇನ್ನು ನಮ್ಮ ಪದವಿ ಕಾಲೇಜುಗಳಲ್ಲಿ ಗುರುಗಳು ಮತ್ತು ವಿದ್ಯಾರ್ಥಿ ಗಳು ಸ್ನೇಹಿತರು ಇದ್ದ ರೀತಿ ಇದ್ದು ಕಾಲೇಜಿನ



ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಾ , ಪಾಠದ ವಿಷಯ ಬಂದಾಗ ಅಷ್ಟೇ ಕಟ್ಟುನಿಟ್ಟಾಗಿ ಕ್ರಮವಾಗಿ ಅರ್ಥವಾಗುವಂತೆ ವಿಷಯಗಳನ್ನು ತಿಳಿಸುತ್ತಾ , ಜೀವನದ ಮೌಲ್ಯಗಳನ್ನು ತಿಳಿಸುತ್ತಾ , ಜವಾಬ್ದಾರಿಗಳನ್ನು ನಿಭಾಯಿಸಲು ಅವಕಾಶಗಳನ್ನು ನೀಡಿ ನಮ್ಮನ್ನು ಸಮಾಜದಲ್ಲಿ ಒಂದು ಉನ್ನತ ವ್ಯಕ್ತಿಯನ್ನಾಗಿ ರೂಪಿಸುವುದರಲ್ಲಿ ವಿದ್ಯಾ ಕೇಂದ್ರಗಳಲ್ಲಿ ಗುರುಗಳು ಮತ್ತು ಮನೆಗಳಲ್ಲಿ ತಂದೆ ತಾಯಿಗಳು ಅಪಾರ ಪಾತ್ರವನ್ನು ಹೊಂದಿದ್ದಾರೆ .

ನಮ್ಮ ಪದವಿ ಕಾಲೇಜಿನಲ್ಲಿ ಒಂದು ದಿನ ಗುರುವಂದನೆ ಕಾರ್ಯಕ್ರಮ ಅಂದರೆ ಬಿಳ್ಕೊಡುಗೆ ಸಮಾರಂಭ ನಡೆಯಿತು. ನಮ್ಮ ನೆಚ್ಚಿನ ಶಿಕ್ಷಕರಿಬ್ಬರು ನಾವು ವಿದ್ಯಾರ್ಜನೆಗೈಯುತ್ತಿದ್ದ ಕಾಲೇಜಿನಿಂದ ಬೇರೆ ಕಾಲೇಜುಗಳಿಗೆ ವರ್ಗಾವಣೆಯಾಗಿದ್ದರು. ಅವರಿಗಲು ಈ ಸಮಾರಂಭಕ್ಕೆ ಆಗಮಿಸಿ ಹಿತ ನುಡಿಗಳನ್ನು ಆಡಿದರು ಮತ್ತು ತರಗತಿಗಳಿಗೆ ಆಗಮಿಸಿ ವಿದ್ಯಾರ್ಥಿಗಳನ್ನು ಮಾತನಾಡಿಸಿದರು ಆ ವಿದ್ಯಾರ್ಥಿಗಳಲ್ಲಿ ಒಬ್ಬ ನಾನು , ನನಗ್ಯಾಕೋ ಆ ದಿನ ಅವರ ಧ್ವನಿ ಕೇಳಿದಾಗ ಕಣ್ತುಂಬಿ ಬಂತು. ಏಕೆಂದರೆ ಅವರ ಮಾತೃಹೃದಯ ಮತ್ತು ಅವರಿಗೆ ಮಕ್ಕಳ ಮೇಲೆದ್ದಂತಹ ಪ್ರೀತಿ ವಿದ್ಯಾರ್ಥಿ/ನಿಯರ ಕಣ್ಣನ್ನು ಒದ್ದೆಯಾಗಿಸಿತು. ಅದರಲ್ಲೂ ನಾನು ಆ ದಿನ ಅತ್ತ ವಿಚಾರ ಅವರಿಗೆ ತಿಳಿಯಲೇ ಇಲ್ಲ ನಾನು ತಿಳಿಸಲು ಇಷ್ಟಪಡಲಿಲ್ಲ. ಅವರ ತಾಳ್ಮೆ , ವಿನಯ , ನಡೆ ನುಡಿ ಎಲ್ಲವೂ ನಮಗೆ ನಮ್ಮ ಬಾಳಿಗೆ ಆದರ್ಶ ಮತ್ತು ಅಂತಹ ಗುರುಗಳು ನಮಗೆ ಪದವಿ ಶಿಕ್ಷಣದ ಮೂರು ವರ್ಷದ ಅವಧಿಯಲ್ಲಿ ಎರಡು ವರ್ಷ ಸಿಕ್ಕಿದ್ದರು , ಎನ್ನುವುದೇ ಅದೃಷ್ಟ .

ಹೀಗೆ ಒಂದು ಮಗು ಜನ್ಮ ಪಡೆದ ನಂತರ ಸಾಯುವ ಪ್ರತಿ ಕ್ಷಣದವರೆಗೂ ಒಬ್ಬೊಬ್ಬರಿಂದಲೂ ಮಾರ್ಗದರ್ಶನವನ್ನು ಪಡೆಯುತ್ತಾ , ನಮ್ಮ ಜೀವನವನ್ನು ಸುಮಧುರವಾಗಿಸಿದ , ತಂದೆ– ತಾಯಿ – ಗುರುಗಳಿಗೆ ಹಿರಿಯರಿಗೆ ವಿಧೇಯರಾಗಿ , ಕಿರಿಯರಿಗೆ ಮಾರ್ಗದರ್ಶಕರಾಗಿ, ಸ್ನೇಹಿತರಿಗೆ ಒಳ್ಳೆಯ ಸಭ್ಯ ಸ್ನೇಹಿತನಾಗಿ , ತನ್ನ ಜವಾಬ್ದಾರಿಯನ್ನು ನಿರ್ವಹಿಸುವುದೇ ಜೀವನ .

ನನಗೆ ಸಿಕ್ಕಂತಹ ಈ ಸುಂದರ ಬಾಳಿನಲ್ಲಿ ಜೀವನವೆಂಬ ನದಿಯನ್ನು ದಾಟಿಸಲು ಬಂದಂತಹ ಗುರುಗಳಿಗೆ ವಂದಿಸುತ್ತಾ , ನೀವು ನೀಡಿದ ಮಾರ್ಗದರ್ಶನವನ್ನು ಪಾಲಿಸುತ್ತಾ , ಮುಂದೆ ಬರುವ ಗುರುಗಳಿಗೂ ವಿಧೇಯನಾಗಿ ಬಾಳುವೆನೆಂಬ ಭರವಸೆಯೊಂದಿಗೆ ಈ ಒಂದು ವಿಚಾರಕ್ಕೆ ಪೂರ್ಣ ವಿರಾಮವನ್ನು ಹೇಳುತ್ತೇನೆ .



| ಶಿವಬಸಪ್ಪ ಗು ಜಂಗಾಲಿ

ಬೆಳಗಿನ ಹೊತ್ತು ಮನೆಯ ಮುಂದೆ ಶಾಲಾ ಬಸ್‌ಗಾಗಿ ಕಾಯುತ್ತಿರುವ ಪುಟ್ಟ ಮಕ್ಕಳು. ಕೆಲವರ ಭುಜದ ಮೇಲೆ ದೊಡ್ಡದಾದ ಶಾಲಾ ಚೀಲ, ಕೈಯಲ್ಲಿ ನೀರಿನ ಬಾಟಲಿ, ಊಟದ ಡಬ್ಬಿ. ಕಣ್ಣಿನಲ್ಲಿ ನಿದ್ದೆಯ ಛಾಯೆ, ಮುಖದಲ್ಲಿ ಇನ್ನೂ ಅರಳದ ನಗು. ಒಂದು ಕಾಲದಲ್ಲಿ ಶಾಲೆಗೆ ಹೊರಡುವ ಮಗು ತನ್ನ ಪುಸ್ತಕಗಳಿಗಿಂತ ಹೆಚ್ಚು ಕನಸುಗಳನ್ನು ಹೊತ್ತುಕೊಂಡು ಹೋಗುತ್ತಿತ್ತು. ಇಂದು ಅದೇ ಮಗು ಪುಸ್ತಕಗಳ ಜೊತೆಗೆ ಅಂಕಗಳ ಒತ್ತಡ, ಪರೀಕ್ಷೆಯ ಭಯ, ಪೋಷಕರ ನಿರೀಕ್ಷೆ, ಶಿಕ್ಷಕರ ಗುರಿ ಮತ್ತು ಭವಿಷ್ಯದ ಆತಂಕವನ್ನೂ ಹೊತ್ತುಕೊಂಡು ಹೋಗುತ್ತಿದೆ. ಚೀಲದ ತೂಕವನ್ನು ತಕ್ಕಡಿಯಲ್ಲಿ ಅಳೆಯಬಹುದು; ಆದರೆ ಮಗುವಿನ ಮನಸ್ಸಿನ ಮೇಲೆ ಇರುವ ಭಾರವನ್ನು ಯಾವ ತಕ್ಕಡಿಯೂ ಅಳೆಯಲು ಸಾಧ್ಯವಿಲ್ಲ.

ಬಾಲ್ಯ ಎನ್ನುವುದು ಬದುಕಿನ ಅತ್ಯಂತ ಸುಂದರ ಅಧ್ಯಾಯ. ಆ ವಯಸ್ಸಿನಲ್ಲಿ ಮಣ್ಣಿನ ವಾಸನೆಯೂ ಸಂತೋಷ, ಮಳೆಯ ಹನಿಯೂ ಆಟ, ಚಿಟ್ಟೆಯ ಹಾರಾಟವೂ ಕುತೂಹಲ, ಮರದ ನೆರಳೂ ವಿಶ್ರಾಂತಿ. ಗೆಳೆಯನ ಜೊತೆ ಜಗಳ ಮಾಡಿ ಮತ್ತೆ ಐದು ನಿಮಿಷದಲ್ಲಿ ಸ್ನೇಹಿತರಾಗುವುದು, ಶಾಲೆಯಿಂದ ಮನೆಗೆ ಬರುತ್ತಾ ದಾರಿಯಲ್ಲಿರುವ ಸಣ್ಣ ಕಲ್ಲುಗಳನ್ನೇ ಆಟದ ಸಾಮಗ್ರಿಗಳನ್ನಾಗಿ ಮಾಡಿಕೊಳ್ಳುವುದು, ಮಳೆಯ ದಿನ ಪುಸ್ತಕಕ್ಕಿಂತ ಕಾಗದದ ದೋಣಿ ಮುಖ್ಯವಾಗುವುದು ಇದೇ ಬಾಲ್ಯದ ಸಹಜ ಸೌಂದರ್ಯ. ಆದರೆ ಇಂದಿನ ವೇಗದ ಬದುಕು ಮಕ್ಕಳ ಈ ಸಹಜತೆಯನ್ನು ನಿಧಾನವಾಗಿ ಕಸಿದುಕೊಳ್ಳುತ್ತಿದೆ.

ಶಾಲೆ ಎಂದರೆ ಮಕ್ಕಳಿಗೆ ಜ್ಞಾನವನ್ನು ನೀಡುವ ಮಂದಿರವಾಗಬೇಕು. ಆದರೆ ಅನೇಕ ಮಕ್ಕಳ ಮನಸ್ಸಿನಲ್ಲಿ ಶಾಲೆ ಎಂದರೆ ಪರೀಕ್ಷೆ, ಹೋಂವರ್ಕ್,ಶ್ರೇಣಿ, ಸ್ಪರ್ಧೆ ಮತ್ತು ?ನಾನು ಇತರರಿಗಿಂತ ಮುಂದೆ ಇರಬೇಕು? ಎಂಬ ಒತ್ತಡವಾಗಿ ರೂಪುಗೊಳ್ಳುತ್ತಿದೆ. ಶಿಕ್ಷಣದ ಉದ್ದೇಶ ಮಗುವಿನೊಳಗಿನ ಕುತೂಹಲವನ್ನು ಬೆಳೆಸುವುದು. ಆದರೆ ಕೆಲವೊಮ್ಮೆ ನಾವು ಕುತೂಹಲಕ್ಕಿಂತ ಉತ್ತರವನ್ನು, ಪ್ರಶ್ನೆಗಿಂತ ಅಂಕವನ್ನು, ಕಲಿಕೆಯ ಸಂತೋಷಕ್ಕಿಂತ ಫಲಿತಾಂಶವನ್ನು ದೊಡ್ಡದಾಗಿ ನೋಡುತ್ತಿದ್ದೇವೆ.

ಪೋಷಕರಿಗೂ ಮಕ್ಕಳ ಬಗ್ಗೆ ಕನಸುಗಳಿರುತ್ತವೆ. ತಮ್ಮ ಮಗು ಉತ್ತಮವಾಗಿ ಓದಬೇಕು, ಒಳ್ಳೆಯ ಉದ್ಯೋಗ ಪಡೆಯಬೇಕು, ಜೀವನದಲ್ಲಿ ನೆಲೆ ಕಂಡುಕೊಳ್ಳಬೇಕು ಎಂಬುದು ಸಹಜವಾದ ಆಸೆ. ಆದರೆ ಪ್ರೀತಿ ಮತ್ತು ನಿರೀಕ್ಷೆಯ ನಡುವೆ ಒಂದು ಸೂಕ್ಷ್ಮ ಗಡಿ ಇದೆ. ಪ್ರೀತಿ ಪ್ರೋತ್ಸಾಹಿಸಿದಾಗ ಅದು ಶಕ್ತಿಯಾಗುತ್ತದೆ; ಅದೇ ಪ್ರೀತಿ ನಿರಂತರ ಒತ್ತಡವಾಗಿ ಬದಲಾದಾಗ ಅದು ಮಗುವಿನ ಮನಸ್ಸಿಗೆ ಭಾರವಾಗುತ್ತದೆ. ?ನಿನಗೆ ಎಷ್ಟು ಅಂಕ ಬಂದಿದೆ?? ಎಂಬ ಪ್ರಶ್ನೆಯ ಜೊತೆಗೆ ?ಇಂದು ಶಾಲೆಯಲ್ಲಿ ಏನು ಸಂತೋಷವಾಯಿತು?? ಎಂದು ಕೇಳುವ ದಿನವೂ ಬರಬೇಕು.

ಇಂದು ಅನೇಕ ಮನೆಗಳಲ್ಲಿ ಮಕ್ಕಳನ್ನು ಮತ್ತೊಬ್ಬರೊಂದಿಗೆ ಹೋಲಿಸುವ ಅಭ್ಯಾಸ ಬೆಳೆದಿದೆ. ?ಅವನು ಮೊದಲ ರ್‍ಯಾಂಕ್ ಪಡೆದಿದ್ದಾನೆ?, ?ಅವಳು ಪ್ರತಿದಿನ ಓದುತ್ತಾಳೆ?, ?ಅವನಿಗೆ ಇಷ್ಟು ಅಂಕ, ನಿನಗೆ ಏಕೆ ಇಲ್ಲ???ಇಂತಹ ಮಾತುಗಳು ಪೋಷಕರಿಗೆ ಸಾಮಾನ್ಯವಾಗಿರಬಹುದು. ಆದರೆ ಮಗುವಿನ ಮನಸ್ಸಿನಲ್ಲಿ ಅವು ಆಳವಾದ ಗುರುತು ಮೂಡಿಸಬಹುದು. ಹೋಲಿಕೆ ಕೆಲವೊಮ್ಮೆ ಸ್ಪರ್ಧೆಯನ್ನು ಹುಟ್ಟಿಸುತ್ತದೆ; ಆದರೆ ನಿರಂತರ ಹೋಲಿಕೆ ಆತ್ಮವಿಶ್ವಾಸವನ್ನು ಕೊಲ್ಲಬಹುದು.

ಪ್ರತಿಯೊಂದು ಮಗುವೂ ಒಂದೇ ರೀತಿಯಲ್ಲ. ಕೆಲವರಿಗೆ ಗಣಿತ ಸುಲಭ, ಕೆಲವರಿಗೆ ಭಾಷೆ. ಕೆಲವರು ವಿಜ್ಞಾನದಲ್ಲಿ ಮಿಂಚುತ್ತಾರೆ, ಕೆಲವರು ಕ್ರೀಡೆಯಲ್ಲಿ. ಕೆಲವರು ಚಿತ್ರ ಬಿಡಿಸುವಾಗ ತಮ್ಮ ಲೋಕವನ್ನೇ ಸೃಷ್ಟಿಸುತ್ತಾರೆ; ಇನ್ನೂ ಕೆಲವರು ಸಂಗೀತದಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಒಬ್ಬ ಮಗುವಿನ ಪ್ರತಿಭೆಯನ್ನು ಮತ್ತೊಬ್ಬನ ಅಂಕಗಳ ಮಾಪಕದಿಂದ ಅಳೆಯುವುದು ನ್ಯಾಯವಲ್ಲ. ಶಿಕ್ಷಣದ ನಿಜವಾದ ಸೌಂದರ್ಯವೇ ಪ್ರತಿಯೊಂದು ಮಗುವಿನೊಳಗಿನ ವಿಭಿನ್ನ ಬೆಳಕನ್ನು ಗುರುತಿಸುವುದರಲ್ಲಿ ಇದೆ.

ಅಂಕಗಳು ಮುಖ್ಯವಲ್ಲ ಎಂದು ಹೇಳುವುದು ಸರಿಯಲ್ಲ. ಅಂಕಗಳು ವಿದ್ಯಾರ್ಥಿಯ ಪರಿಶ್ರಮವನ್ನು ಅಳೆಯುವ ಒಂದು ಮಾನದಂಡ. ಆದರೆ ಅದು ಜೀವನದ ಸಂಪೂರ್ಣ

# ಶಾಲೆಯ ಚೀಲ ಭಾರವಾಗಿದೆ; ಮಕ್ಕಳ ಮನಸ್ಸು ಇನ್ನಷ್ಟು ಭಾರವಾಗುತ್ತಿದೆ!




ಪ್ರಮಾಣಪತ್ರವಲ್ಲ. ಒಂದು ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದರೆ ಮಗುವಿನ ಸಾಮರ್ಥ್ಯ ಕಡಿಮೆಯಾಗುವುದಿಲ್ಲ. ಒಂದು ವಿಷಯದಲ್ಲಿ ಸೋತರೆ ಜೀವನದಲ್ಲಿ ಸೋತಂತಾಗುವುದಿಲ್ಲ. ಪರೀಕ್ಷಾ ಕೊಠಡಿಯ ನಾಲ್ಕು ಗೋಡೆಗಳ ಹೊರಗೆ ಬದುಕಿನ ಪರೀಕ್ಷೆಗಳು ಇನ್ನೂ ದೊಡ್ಡವು. ಅಲ್ಲಿ ಪುಸ್ತಕದ ಉತ್ತರಕ್ಕಿಂತ ಧೈರ್ಯ, ವಿವೇಕ, ಸಹನೆ, ಸೃಜನಶೀಲತೆ ಮತ್ತು ಮಾನವೀಯತೆ ಹೆಚ್ಚು ಅಗತ್ಯ.

ಇಂದಿನ ಮಕ್ಕಳು ತಂತ್ರಜ್ಞಾನದ ಯುಗದಲ್ಲಿ ಬೆಳೆಯುತ್ತಿದ್ದಾರೆ. ಮೊಬೈಲ್, ಟ್ಯಾಬ್ಲೆಟ್, ಕಂಪ್ಯೂಟರ್ ಮತ್ತು ಕೃತಕ ಬುದ್ಧಿಮತ್ತೆ ಅವರ ಕಲಿಕೆಯ ವಿಧಾನವನ್ನು ಬದಲಾಯಿಸುತ್ತಿವೆ. ಒಂದು ಕ್ಲಿಕ್ಕಿನಲ್ಲಿ ಜಗತ್ತಿನ ಜ್ಞಾನ ಅವರ ಕೈಗೆ ಸಿಗುತ್ತಿದೆ. ಇದು ಅದ್ಭುತ ಅವಕಾಶ. ಆದರೆ ಮಾಹಿತಿಯ ಅಪಾರ ಸಮುದ್ರದಲ್ಲಿ ವಿವೇಕದ ದೋಣಿ ಇಲ್ಲದಿದ್ದರೆ ಮಗು ದಾರಿ ತಪ್ಪಬಹುದು. ತಂತ್ರಜ್ಞಾನವನ್ನು ಬಳಸಬೇಕು; ಆದರೆ ತಂತ್ರಜ್ಞಾನವೇ ನಮ್ಮ ಮಕ್ಕಳನ್ನು ಬಳಸುವ ಪರಿಸ್ಥಿತಿ ಬರಬಾರದು.

ಒಂದು ಕಾಲದಲ್ಲಿ ಮಕ್ಕಳು ಶಾಲೆಯಿಂದ ಮನೆಗೆ ಬಂದ ನಂತರ ಮೈದಾನಕ್ಕೆ ಓಡುತ್ತಿದ್ದರು. ಇಂದು ಅನೇಕ ಮಕ್ಕಳ ದಿನಚರಿಯಲ್ಲಿ ಟ್ಯೂಷನ್, ಆನ್‌ಲೈನ್ ಕ್ಲಾಸ್, ಹೋಂವರ್ಕ್ ಮತ್ತು ಪರೀಕ್ಷಾ ಸಿದ್ಧತೆ ತುಂಬಿಕೊಂಡಿದೆ. ಆಟದ ಸಮಯ ಕಡಿಮೆಯಾಗಿದೆ. ಕುಟುಂಬದೊಂದಿಗೆ ಮಾತನಾಡುವ ಸಮಯ ಕಡಿಮೆಯಾಗಿದೆ. ಪ್ರಕೃತಿಯನ್ನು ನೋಡುವ ಸಮಯ ಕಡಿಮೆಯಾಗಿದೆ. ಕೆಲವೊಮ್ಮೆ ಮಗುವಿಗೆ ?ನಿನಗೆ ಏನು ಬೇಕು?? ಎಂದು ಕೇಳಿದರೆ, ಅದು ಕೂಡಲೇ ?ನನಗೆ ಸ್ವಲ್ಪ ವಿಶ್ರಾಂತಿ ಬೇಕು? ಎಂದು ಹೇಳುವ ಸ್ಥಿತಿ ಬರಬಾರದು.

ಮಕ್ಕಳ ಮನಸ್ಸು ಬಹಳ ಸೂಕ್ಷ್ಮ. ಹೊರಗೆ ಅವರು ನಗುತ್ತಿರಬಹುದು; ಒಳಗೆ ಆತಂಕವಿರಬಹುದು. ತರಗತಿಯಲ್ಲಿ ಮೌನವಾಗಿರುವ ವಿದ್ಯಾರ್ಥಿ ಸೋಮಾರಿ ಎಂದೇನೂ ಅಲ್ಲ. ಬಹುಶಃ ಅವನೊಳಗೆ ಹೇಳಲಾಗದ ಭಯವಿರಬಹುದು. ಪರೀಕ್ಷೆಗೆ ಮುನ್ನ ಆತಂಕಪಡುವ ಮಗು ದುರ್ಬಲವಲ್ಲ. ಅದು ತನ್ನ ಮೇಲೆ ಇಟ್ಟಿರುವ ನಿರೀಕ್ಷೆಗಳನ್ನು ಪೂರೈಸಲಾಗುವುದಿಲ್ಲವೋ ಎಂಬ ಭಯದಲ್ಲಿರಬಹುದು. ಆದ್ದರಿಂದ ಮಕ್ಕಳ ವರ್ತನೆಯನ್ನು ತಕ್ಷಣ ತೀರ್ಮಾನಿಸುವ ಬದಲು ಅವರ ಮನಸ್ಸನ್ನು ಕೇಳುವ ಸಂಸ್ಕೃತಿ ಬೆಳೆಸಬೇಕು.

ಇಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದು. ಶಿಕ್ಷಕರು ಕೇವಲ ಪಾಠ ಹೇಳುವವರು ಅಲ್ಲ; ಅವರು ಮಕ್ಕಳ ಆತ್ಮವಿಶ್ವಾಸವನ್ನು ರೂಪಿಸುವ ಶಿಲ್ಪಿಗಳು. ಒಂದು ಶಿಕ್ಷಕರ ಪ್ರೋತ್ಸಾಹದ ಮಾತು ವಿದ್ಯಾರ್ಥಿಯ ಜೀವನದ ದಿಕ್ಕನ್ನೇ ಬದಲಾಯಿಸಬಹುದು. ಅದೇ ರೀತಿ ಸಾರ್ವಜನಿಕವಾಗಿ ಮಾಡಿದ ಒಂದು ಅವಮಾನ ಮಗುವಿನ ಮನಸ್ಸಿನಲ್ಲಿ ವರ್ಷಗಳವರೆಗೆ ಉಳಿಯಬಹುದು. ಆದ್ದರಿಂದ ಶಿಕ್ಷಣದಲ್ಲಿ ಶಿಸ್ತು ಬೇಕು, ಆದರೆ ಶಿಸ್ತಿನ ಜೊತೆಗೆ ಕರುಣೆಯೂ ಇರಬೇಕು. ತಪ್ಪನ್ನು ತಿದ್ದಬೇಕು, ಆದರೆ ಮಗುವನ್ನೇ ತಪ್ಪು ಎಂದು ಭಾವಿಸುವಂತೆ ಮಾಡಬಾರದು.

ಪೋಷಕರು ತಮ್ಮ ಮಕ್ಕಳಿಗೆ ಒಂದು ವಿಷಯವನ್ನು ನಿರಂತರವಾಗಿ ನೆನಪಿಸಬೇಕು??ನೀನು ಎಷ್ಟು ಅಂಕ ಪಡೆದರೂ, ನಮ್ಮ ಪ್ರೀತಿ ಅದರಿಂದ ಬದಲಾಗುವುದಿಲ್ಲ.? ಈ ಒಂದು ಭರವಸೆ ಮಗುವಿಗೆ ಅಪಾರ ಶಕ್ತಿ ನೀಡುತ್ತದೆ. ಪರೀಕ್ಷೆಯಲ್ಲಿ ಗೆದ್ದಾಗ ಮಾತ್ರ ಅಪ್ಪಿಕೊಳ್ಳುವ ತಂದೆ–ತಾಯಿಗಿಂತ, ಸೋತಾಗಲೂ ?ಪರವಾಗಿಲ್ಲ, ಮತ್ತೆ ಪ್ರಯತ್ನಿಸೋಣ? ಎಂದು ಕೈ ಹಿಡಿಯುವ ಪೋಷಕರ ಅಗತ್ಯ ಇಂದು ಹೆಚ್ಚು.

ಮಕ್ಕಳಿಗೆ ಸೋಲನ್ನು ಸ್ವೀಕರಿಸುವುದನ್ನೂ ಕಲಿಸಬೇಕು. ಜೀವನದಲ್ಲಿ ಪ್ರತಿಯೊಂದು ಪರೀಕ್ಷೆಯಲ್ಲೂ ಮೊದಲ ಸ್ಥಾನ ಸಿಗುವುದಿಲ್ಲ. ಪ್ರತಿಯೊಂದು ಸ್ಪರ್ಧೆಯಲ್ಲೂ ಜಯ ಸಿಗುವುದಿಲ್ಲ. ಕೆಲವೊಮ್ಮೆ ಸ್ನೇಹಿತ ಗೆಲ್ಲುತ್ತಾನೆ, ನಾವು ಸೋಲುತ್ತೇವೆ. ಕೆಲವೊಮ್ಮೆ ನಾವು ಮಾಡಿದ ಪ್ರಯತ್ನ ಫಲ ನೀಡುವುದಿಲ್ಲ. ಆದರೆ ಸೋಲಿನ ನಂತರ ಮತ್ತೆ ಎದ್ದು ನಿಲ್ಲುವ ಶಕ್ತಿಯೇ ನಿಜವಾದ ಶಿಕ್ಷಣ. ?ಸೋಲು ಎಂದರೆ ಅಂತ್ಯವಲ್ಲ; ಮತ್ತೊಂದು ಪ್ರಯತ್ನಕ್ಕೆ ಸಿಕ್ಕ ಅವಕಾಶ? ಎಂಬ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸಬೇಕು.

ಶಾಲೆಯ ಚೀಲದ ಭಾರವನ್ನು ಕಡಿಮೆ ಮಾಡುವ ಬಗ್ಗೆ ನಾವು ಆಗಾಗ್ಗೆ ಮಾತನಾಡುತ್ತೇವೆ. ಆದರೆ ಅದರ ಜೊತೆಗೆ ಇನ್ನೊಂದು ಚೀಲದ ಬಗ್ಗೆ ಮಾತನಾಡಬೇಕು ಅದು ನಿರೀಕ್ಷೆಗಳ ಚೀಲ. ಅದರಲ್ಲಿ ಪೋಷಕರ ಕನಸುಗಳಿವೆ, ಸಮಾಜದ ಹೋಲಿಕೆಗಳಿವೆ, ಅಂಕಗಳ ಒತ್ತಡವಿದೆ, ಭವಿಷ್ಯದ ಭಯವಿದೆ, ಯಶಸ್ಸಿನ ವ್ಯಾಖ್ಯಾನವಿದೆ. ಈ ಕಾಣದ ಚೀಲವೇ ಕೆಲವೊಮ್ಮೆ ಮಗುವಿನ ಭುಜಕ್ಕಿಂತ ಅದರ ಮನಸ್ಸನ್ನು ಹೆಚ್ಚು ಬಾಗಿಸುತ್ತದೆ.

ಶಿಕ್ಷಣದ ಅಂತಿಮ ಗುರಿ ಕೇವಲ ಉದ್ಯೋಗ ಪಡೆಯುವ ವ್ಯಕ್ತಿಯನ್ನು ಸೃಷ್ಟಿಸುವುದಲ್ಲ. ಒಳ್ಳೆಯ ಮನುಷ್ಯನನ್ನು ರೂಪಿಸುವುದೂ ಅದರ ಕರ್ತವ್ಯ. ಮತ್ತೊಬ್ಬನ ನೋವನ್ನು ಅರ್ಥಮಾಡಿಕೊಳ್ಳುವ ಹೃದಯ, ತಪ್ಪನ್ನು ಒಪ್ಪಿಕೊಳ್ಳುವ ಧೈರ್ಯ, ಸತ್ಯದ ಪರ ನಿಲ್ಲುವ ನೈತಿಕತೆ, ಪ್ರಕೃತಿಯನ್ನು ಕಾಪಾಡುವ ಹೊಣೆಗಾರಿಕೆ, ಸಮಾಜದ ಬಗ್ಗೆ ಕಾಳಜಿ ಇವೆಲ್ಲವೂ ಶಿಕ್ಷಣದ ಭಾಗವಾಗಬೇಕು.

ನಮ್ಮ ಮಕ್ಕಳು ನಾಳೆಯ ಭಾರತ. ಅವರು ಕೇವಲ ವೈದ್ಯರು, ಇಂಜಿನಿಯರ್‌ಗಳು, ವಿಜ್ಞಾನಿಗಳು, ಅಧಿಕಾರಿಗಳು ಅಥವಾ ಉದ್ಯಮಿಗಳಾಗಬೇಕೆಂದು ಬಯಸುವುದಕ್ಕಿಂತ ಮೊದಲು, ಅವರು ಒಳ್ಳೆಯ ನಾಗರಿಕರಾಗಬೇಕು. ಅವರ ಕೈಯಲ್ಲಿ ತಂತ್ರಜ್ಞಾನ ಇರಲಿ; ಹೃದಯದಲ್ಲಿ ಮಾನವೀಯತೆ ಇರಲಿ. ಅವರ ಕಣ್ಣಿನಲ್ಲಿ ಕನಸು ಇರಲಿ; ಮನಸ್ಸಿನಲ್ಲಿ ನೆಮ್ಮದಿ ಇರಲಿ. ಅವರ ಹೆಜ್ಜೆಯಲ್ಲಿ ಆತ್ಮವಿಶ್ವಾಸ ಇರಲಿ; ಮತ್ತೊಬ್ಬರ ನೋವಿನ ಮುಂದೆ ನಿಲ್ಲುವ ಕರುಣೆ ಇರಲಿ.

ನಾವು ಮಕ್ಕಳಿಗೆ ದೊಡ್ಡ ಶಾಲೆಗಳನ್ನು ಕೊಡಬಹುದು, ದುಬಾರಿ ಶಿಕ್ಷಣ ಕೊಡಬಹುದು, ಅತ್ಯಾಧುನಿಕ ಸೌಲಭ್ಯಗಳನ್ನು ಕೊಡಬಹುದು. ಆದರೆ ಅವರಿಗೆ ಬಾಲ್ಯವನ್ನೇ ಕೊಡಲು ಮರೆತರೆ ಆ ಶಿಕ್ಷಣದ ಅರ್ಥವೇನು? ಮಕ್ಕಳ ನಗು ಯಾವುದೇ ರ್‍ಯಾಂಕ್‌ಗಿಂತ ಅಮೂಲ್ಯ. ಅವರ ಕುತೂಹಲ ಯಾವುದೇ ಪ್ರಮಾಣಪತ್ರಕ್ಕಿಂತ ದೊಡ್ಡದು. ಅವರ ಆರೋಗ್ಯಕರ ಮನಸ್ಸು ಯಾವುದೇ ಅಂಕಪಟ್ಟಿಗಿಂತ ಬೆಲೆಬಾಳುತ್ತದೆ.

ಆದ್ದರಿಂದ ಈಗಲೇ ನಾವು ಯೋಚಿಸಬೇಕು. ನಮ್ಮ ಮಕ್ಕಳ ಭುಜದ ಮೇಲಿರುವ ಶಾಲೆಯ ಚೀಲ ಹಗುರವಾಗಬೇಕಾಗಿದೆ; ಅದಕ್ಕಿಂತ ಮೊದಲು ಅವರ ಹೃದಯದ ಮೇಲಿರುವ ನಿರೀಕ್ಷೆಗಳ ಭಾರ ಹಗುರವಾಗಬೇಕಾಗಿದೆ. ಶಾಲೆ ಭಯದ ಸ್ಥಳವಾಗದೆ ಕನಸುಗಳ ಮನೆ ಆಗಬೇಕು. ಪರೀಕ್ಷೆ ಆತಂಕದ ದಿನವಾಗದೆ ಕಲಿಕೆಯ ಮತ್ತೊಂದು ಹಂತವಾಗಬೇಕು. ಪೋಷಕರು ನ್ಯಾಯಾಧೀಶರಾಗದೆ ಮಕ್ಕಳ ಪ್ರಯಾಣದ ಸಹಯಾತ್ರಿಗಳಾಗಬೇಕು. ಶಿಕ್ಷಕರು ಕೇವಲ ಪಾಠದ ಗುರುಗಳಾಗದೆ ಜೀವನದ ದಾರಿದೀಪಗಳಾಗಬೇಕು. ಮಕ್ಕಳಿಗೆ ನಾವು ಕೊಡುವ ಅತ್ಯುತ್ತಮ ಉಡುಗೊರೆ ದುಬಾರಿ ಪುಸ್ತಕವಲ್ಲ; ಭಯವಿಲ್ಲದೆ ಕನಸು ಕಾಣುವ ಸ್ವಾತಂತ್ರ್ಯ.

ಅವರ ಬಾಲ್ಯವನ್ನು ಅಂಕಗಳ ಅಂಕಣದಲ್ಲಿ ಬಂಧಿಸಬೇಡಿ. ಅವರು ಓಡಲಿ, ಆಡಲಿ, ಪ್ರಶ್ನಿಸಲಿ, ತಪ್ಪು ಮಾಡಲಿ, ಮತ್ತೆ ಕಲಿಯಲಿ, ನಗಲಿ, ಕನಸು ಕಾಣಲಿ. ಏಕೆಂದರೆ ಬಾಲ್ಯ ಒಮ್ಮೆ ಕಳೆದುಹೋದರೆ ಅದು ಯಾವುದೇ ಶಾಲೆಯಲ್ಲೂ, ಯಾವುದೇ ಪುಸ್ತಕದಲ್ಲೂ ಮತ್ತೆ ಸಿಗುವುದಿಲ್ಲ.

ಶಾಲೆಯ ಚೀಲದ ತೂಕ ಕಡಿಮೆಯಾದರೆ ದೇಹ ಹಗುರವಾಗುತ್ತದೆ; ಆದರೆ ಮಕ್ಕಳ ಮನಸ್ಸಿನ ಭಾರ ಕಡಿಮೆಯಾದಾಗ ಮಾತ್ರ ಅವರ ಬದುಕು ನಿಜವಾಗಿ ಹಗುರವಾಗುತ್ತದೆ. ಶಿಕ್ಷಣದ ಜಯ ಅಂಕಪಟ್ಟಿಯಲ್ಲಿ ಕಾಣಿಸಿಕೊಳ್ಳುವುದಕ್ಕಿಂತ ಮೊದಲು, ಮಗುವಿನ ಮುಖದ ನಗುವಿನಲ್ಲಿ ಕಾಣಿಸಿಕೊಳ್ಳಬೇಕು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,